ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೭೦
ವಿಚಾರ ಸಾಹಿತ್ಯಮಾಲೆ – ೮೩
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಐವರು ಸಂತರು

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**


ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**

(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಐವರು ಸಂತರು

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**

**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**

**–ಋಗ್ವೇದ, I ೮೯–೧**


ಮೂಲ

**ಹೇಮಂತ ಬಂಬವಳೆ**

ಅನುವಾದ

**ಎ. ವಿ. ನರಸಿಂಹಮೂರ್ತಿ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು

ಮತ್ತು

**ಭಾರತೀಯ ವಿದ್ಯಾ ಭವನ,** ಮೈಸೂರು

**Aivaru Santaru:** Kannada translation of *Five Holy Men* : **Hemant Bambavale;** Kannada translation by **Dr. A. V. Narasimha Murthy;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxvi + 56. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxvi + ೫೬
ಬೆಲೆ : ರೂ. ೧೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ ‘ನಾಗರಿಕತೆಯ ಕಥೆ’, ಜೆ.ಡಿ. ಬರ್ನಾಲ್ ಅವರ ‘ಇತಿಹಾಸದಲ್ಲಿ ವಿಜ್ಞಾನ’ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ ‘ನಾಗರಿಕತೆಯ ಕಥೆ’, ಜೆ.ಡಿ.ಬರ್ನಾಲ್ ಅವರ ‘ಇತಿಹಾಸದಲ್ಲಿ ವಿಜ್ಞಾನ’ ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ<br>ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**<br>ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ಐವರು ಸಂತರು' ಹೇಮಂತ್ ಬಂಬವಳೆ ಅವರ *Five Holy Men* ಎಂಬ ಪುಸ್ತಕದ ಕನ್ನಡ ಅನುವಾದ. ಇದನ್ನು ಖ್ಯಾತ ಲೇಖಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿ ಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

| | |
|---|---|
| **ಎನ್. ರಾಮಾನುಜ** | **ಎ. ವಿ. ನರಸಿಂಹಮೂರ್ತಿ** |
| ಅಧ್ಯಕ್ಷರು | ಅಧ್ಯಕ್ಷರು, ವಿದ್ಯಾಭವನ, ಮೈಸೂರು |
| ವಿದ್ಯಾಭವನ, ಕರ್ನಾಟಕ | ಪ್ರಧಾನ ಸಂಪಾದಕ |



# ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಮೂಲ ಲೇಖಕರ ಮುನ್ನುಡಿ

ಭಾರತವನ್ನು ಸಾಮಾನ್ಯವಾಗಿ ಬಡರಾಷ್ಟ್ರ ಎಂದು ವರ್ಣಿಸಲಾಗುತ್ತದೆ. ಆರ್ಥಿಕ ದೃಷ್ಟಿಯಿಂದ ಇತರ ಮುಂದುವರಿದ ದೇಶಗಳಿಗೆ ಹೋಲಿಸಿದರೆ ಇದು ನಿಜ; ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ ಪ್ರಪಂಚದಲ್ಲಿ ಭಾರತವು ಅತ್ಯಂತ ಶ್ರೀಮಂತ ರಾಷ್ಟ್ರಗಳಲ್ಲೊಂದು. ಭಾರತಕ್ಕೆ ಅತ್ಯದ್ಭುತವಾದ ಆಧ್ಯಾತ್ಮಿಕ ಪರಂಪರೆ ಇದೆ. ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೆ ಇಲ್ಲಿ ಸಾಧುಸಂತರು ಜನ್ಮವೆತ್ತಿದ್ದಾರೆ. ಇದು ಈ ದೇಶದ ಒಂದು ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ದೇಶದ ಎಲ್ಲ ಭಾಗಗಳೂ ಒಂದಲ್ಲ ಒಂದು ಸಮಯದಲ್ಲಿ ಈ ಪರಂಪರೆಗೆ ತಮ್ಮ ಕೊಡುಗೆ ನೀಡಿವೆ. ಈ ಸಂತರು ಎಲ್ಲ ಕಡೆಯಲ್ಲಿಯೂ ಪ್ರಖ್ಯಾತಿ ಪಡೆದಿದ್ದಾರೆ. ಉದಾಹರಣೆಗೆ ಸಂತ ಧ್ಯಾನೇಶ್ವರ್, ತುಕಾರಾಂ, ಕಬೀರ್, ರಮಣಮಹರ್ಷಿ ಅನೇಕರು ಇದ್ದಾರೆ. ಆದರೆ ಇವರುಗಳು ಅಷ್ಟಾಗಿ ಪರಿಚಯವಿಲ್ಲದವರು. ಏಕೆಂದರೆ ಭಾಷೆಯ ಮಿತಿಯಿಂದ ಕೆಲವು ಸ್ಥಳಗಳಲ್ಲಿ ಮಾತ್ರ ಅಂದರೆ ಅವರು ಹುಟ್ಟಿದ ಮತ್ತು ಅವರು ಕಾರ್ಯ ನಿರ್ವಹಿಸಿದ ಜಾಗಗಳಲ್ಲಿ ಹೆಚ್ಚು ಪ್ರಖ್ಯಾತರಾಗಿದ್ದಾರೆ. ಆದರೂ ಅವರು ಮಾನವರಿಗಾಗಿ ತೋರಿಸಿದ ಕಾಳಜಿ ಮತ್ತು ಪ್ರೀತಿ ಉಲ್ಲೇಖನೀಯ. ಅವರು ಜೀವಿಸಿದ್ದ ಸಮಯದಲ್ಲಿ ನೂರಾರು ಸಾಮಾನ್ಯ ಜನಗಳ ಮೇಲೆ ವಿಶೇಷ ಪ್ರಭಾವ ಬೀರಿದರು. ಈಗ ಅವರು ನಮ್ಮೊಡನೆ ಇಲ್ಲದಿದ್ದರೂ ಅವರ ಪ್ರಭಾವ ಜನಗಳ ಮೇಲೆ ಆಗುತ್ತಲೇ ಇದೆ. ಅವರನ್ನು ಭಕ್ತರು ದೇವರೆಂದು ಪರಿಗಣಿಸುತ್ತಾರೆ ಮತ್ತು ಶ್ರದ್ಧಾಭಕ್ತಿಗಳಿಂದ ಪೂಜಿಸುತ್ತಾರೆ.

ಈ ಮುಂದಿನ ಪುಟಗಳಲ್ಲಿ ಸಾವಿರಾರು ಜನಗಳು ನಂಬಿಕೆಯನ್ನಿಟ್ಟಿದ್ದ ಐವರು ಸಂತರ ಜೀವನಹಾಗೂ ಅವರು ಜೀವಿಸಿದ್ದ ಸ್ಥಳಗಳ ಪರಿಚಯ ಹಾಗೂ ಇವರಿಂದ ಅವುಗಳಿಗೆ ದೊರಕಿದ ಪ್ರಾಮುಖ್ಯ ಮುಂತಾದ ವಿಷಯಗಳನ್ನು ವಿವರಿಸಲಾಗಿದೆ. ಈ ಐವರ ಬಗ್ಗೆ ಬರೆಯುವಾಗ ನಾನು ಯಾವ ಒಂದು ಪಂಥ ಅಥವಾ ಒಬ್ಬ ಸಂತನನ್ನು ಹೊಗಳುವುದು ನನ್ನ ಮುಖ್ಯ ಉದ್ದೇಶವಲ್ಲ. ನನಗೆ ಎಲ್ಲ ಪಂಥಗಳ ಸಂತರೂ ಸಮಾನ ಶ್ರೇಷ್ಠರೇ. ಇಲ್ಲಿ ನನ್ನ ಗುರಿ ಏನೆಂದರೆ ಈ ಸಂತರ ಬಗ್ಗೆ ಹೆಚ್ಚು ತಿಳಿದುಕಳ್ಳುವುದು ಮತ್ತು ಹಾಗೆ ತಿಳಿದುಕೊಂಡಿದ್ದನ್ನು ಸಂಗ್ರಹವಾಗಿ ಹಾಗೂ ಸರಳವಾಗಿ, ಅವರ ಬಗ್ಗೆ ಆಸಕ್ತಿ ಇದ್ದವರಿಗೆ ತಿಳಿಸುವುದು.

ಈ ಸಂತರ ಜೀವನವನ್ನು ಚಿತ್ರಿಸುವಾಗ ಅನೇಕ ಪುಸ್ತಕಗಳ ನೆರವನ್ನು ನಾನು ಪಡೆದಿದ್ದೇನೆ. ಈ ಪುಸ್ತಕಗಳು ಈ ಸಂತರ ಜೀವನವನ್ನು ಬಹಳ ವಿಶದವಾಗಿ ತಿಳಿಸುತ್ತವೆ. ನಾನು ಅಧ್ಯಯನ ಮಾಡಿದ ಈ ಪುಸ್ತಕಗಳ ಲೇಖಕರಿಗೆ ಹಾಗೂ ಅವುಗಳ ಪ್ರಕಾಶಕರಿಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವುಗಳ ಪಟ್ಟಿಯನ್ನು ಕೊನೆಯಲ್ಲಿ ಕೊಡಲಾಗಿದೆ.

ನನಗೆ ಅನೇಕ ವಿಧಗಳಲ್ಲಿ ಸಹಾಯ ಮಾಡಿದ ಕೆಲವರು ಮಹನೀಯರನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಅದರಲ್ಲಿಯೂ ಕೆಲವರನ್ನು ವಿಶೇಷವಾಗಿ ಹೆಸರಿಸಬೇಕು. ಅವರುಗಳು ಯಾರೆಂದರೆ, ಶ್ರೀ ಎ.ಎನ್. ಸತ್ಯನಾರಾಯಣ ಮತ್ತು ಶ್ರೀಮತಿ ಹೀರಾ ಸತ್ಯನಾರಾಯಣ, ಶ್ರೀ ನಿತಿನ್ ಮತ್ತು ಶ್ರೀಮತಿ ರೂಪಾ ದೇಶಪಾಂಡೆ, ಶ್ರೀ ಪ್ರದೀಪ್ ಮತ್ತು ಶ್ರೀಮತಿ ಸ್ಮಿತಾ ಫಡ್ಕೆ, ಶ್ರೀ ವಿಜಯ ಫಡ್ಕೆ ಮತ್ತು ಶ್ರೀ ರಾಜೇಂದ್ರ ಟೆಂಬೇಕರ್. ಇವರ ಸಹಾಯವಿಲ್ಲದ್ದರೆ ಈ ಪುಸ್ತಕವನ್ನು ಬರೆಯಲು ಆಗುತ್ತಿರಲಿಲ್ಲ.



## ಪ್ರಸ್ತಾವನೆ

ಸಾಮಾನ್ಯವಾಗಿ ಸ್ವಾಮಿಗಳು ಮತ್ತು ಗುರುಗಳ ವಿಷಯದಲ್ಲಿ ಎರಡು ವಿಧವಾದ ಅಭಿಪ್ರಾಯವುಳ್ಳ ಜನಗಳಿರುತ್ತಾರೆ. ಕೆಲವರು ಅವರನ್ನು ಗೌರವ ಭಕ್ತಿಗಳಿಂದ ನೋಡಿ ಅವರ ಬೋಧನೆಗಳನ್ನು ಪ್ರಶ್ನೆ ಮಾಡದೆ ಅನುಸರಿಸುತ್ತಾರೆ. ಇದಕ್ಕೆ ತರ್ಕಬದ್ಧ ಅನುಮೋದನೆ ಇರುವುದಿಲ್ಲ. ಆದುದರಿಂದ ಕೆಲವರು ಇದನ್ನು ವಿವೇಚನಾ ರಹಿತರೆಂದೂ ಭಾವಿಸುತ್ತಾರೆ. ಮತ್ತೆ ಕೆಲವರು ಇವೆಲ್ಲವೂ ಮೋಸವೆಂದು ಇದನ್ನು ಅಪಹಾಸ್ಯ ಮಾಡುತ್ತಾರೆ. ಅದರಲ್ಲಿಯೂ ಕೆಲವು ಸಂತರ ಬಾಹ್ಯವರ್ತನೆಗಳು ಸಾಮಾನ್ಯವಾಗಿರುವುದಿಲ್ಲವೆಂಬುದೂ ಇದಕ್ಕೆ ಕಾರಣ. ಇದನ್ನು ಒಪ್ಪಬೇಕಾದದ್ದೇ. ಏಕೆಂದರೆ ಒಂದು ನೈಜ ಪದಾರ್ಥಕ್ಕೆ ನೂರಾರು ನಕಲಿ ಪದಾರ್ಥಗಳಿರುತ್ತವೆ. ಇದೇ ರೀತಿಯಲ್ಲಿ ಕೆಲವು ನಕಲಿ ಗುರುಗಳು ಉಂಟು. ಬಹುಶಃ ಕೆಲವು ಪುಣ್ಯವಂತರಿಗೆ ಮಾತ್ರ ಒಳ್ಳೆಯ ಗುರುವನ್ನು ಪಡೆಯುವ ಅದೃಷ್ಟವಿರುತ್ತದೆ. ಆದುದರಿಂದ ಇಲ್ಲಿ ನಿಜವಾದ ಪ್ರಶ್ನೆ ಎಂದರೆ ಸತ್ಯ ಯಾವುದು ಹಾಗೂ ಅಸತ್ಯವಾದುದು ಎಂದು ಪತ್ತೆ ಮಾಡುವುದು.

ಯಾರಿಗೆ ದೈವದ ಸಾಕ್ಷಾತ್ಕಾರವಾಗಿದೆಯೋ ಅವನೇ ನಿಜವಾದ ಗುರು ಎಂದು ಹೇಳಲಾಗುತ್ತದೆ. ವಿವಿಧತೆಯ ಈ ಪ್ರಪಂಚದಲ್ಲಿ ಏಕತೆಯನ್ನು ಅರಿಯುವ ಸಾಮರ್ಥ್ಯವಿರುವವನೇ ಸರಿಯಾದ ಗುರು. ಇದಕ್ಕೆ ವಿರುದ್ಧವಾಗಿ ಕೆಲವರು ಇರುತ್ತಾರೆ; ಇವರು ವಿದ್ವಾಂಸರು; ತಮ್ಮ ಗ್ರಂಥದ ಜ್ಞಾನವನ್ನು ಇತರರಿಗೆ ತೋರಿಸುವುದೇ ಇವರ ಗುರಿ. ಇವರಿಗೆ ನೇರವಾಗ ದೈವಿಕ ಸಾಕ್ಷಾತ್ಕಾರವಾಗಿರುವುದಿಲ್ಲ. ಆದುದರಿಂದ ನಿಜವಾದ ಗುರುವಾಗುವ ಅರ್ಹತೆ ಇವರಿಗೆ ಇರುವದಿಲ್ಲ. ಸದ್ಗುರುವಿನ ಮುಖ್ಯ ಲಕ್ಷಣವೆಂದರೆ ಅವನ ಚಾರಿತ್ರ್ಯವು ಅತ್ಯಂತ ಉನ್ನತ ಮಟ್ಟದ್ದಾಗಿರುತ್ತದೆ. ಅವನು ನಿಸ್ವಾರ್ಥಿಯಾಗಿದ್ದು, ಎಲ್ಲ ಮಾನವರ ವಿಷಯದಲ್ಲೂ ಪ್ರೀತಿ-ವಿಶ್ವಾಸಗಳನ್ನು ಹೊಂದಿರುತ್ತಾನೆ. ಅವನಿಗೆ ಯಾವ ವಿಧವಾದ ಸ್ವಂತ ಲಾಭದ ಆಸೆಯೂ ಇರುವುದಿಲ್ಲ. ಅವನಿಗೆ ತನ್ನ ಶಿಷ್ಯರ ಸುಖ-ಸಂತೋಷಗಳೇ ಅತಿಮುಖ್ಯ. ಅವನು ಅವರಿಂದ ಶ್ರದ್ಧೆ ಮತ್ತು ಕಾಯಕವನ್ನು ಮಾತ್ರ ಬಯಸುತ್ತಾನೆ. ಶಿಷ್ಯರು ಅನುಸರಿಸುವ ಸಲುವಾಗಿ ಇವನು ಮಾರ್ಗಗಳ ಭಂಡಾರವನ್ನೇ ಇಟ್ಟುಕೊಂಡಿರುತ್ತಾನೆ. ಅತ್ಯುತ್ತಮವಾದ ಹಾಗೂ ತೀಕ್ಷ್ಣವಾದ ಹಾಗೂ ಬುದ್ಧಿವಂತನಾದ ಶಿಷ್ಯನಿಗೆ ಧ್ಯಾನವನ್ನು ಮಾಡುವಂತೆ ಸಲಹೆ ನೀಡುತ್ತಾನೆ. ಕಾರ್ಯಶೀಲತೆಯಲ್ಲಿ ಮಗ್ನನಾಗಿರುವ ಶಿಷ್ಯನಿಗೆ ಕರ್ಮಮಾರ್ಗವನ್ನು ಅನುಸರಿಸುವಂತೆ ಸಲಹೆ ನೀಡುತ್ತಾನೆ. ಭಾವೋದ್ವೇಗಕ್ಕೆ ಒಳಗಾದ ಶಿಷ್ಯನು ದೊರಕಿದರೆ, ಅವನಿಗೆ ಭಕ್ತಿಭಾವದ ಮಾರ್ಗವನ್ನು ಅನುಸರಿಸುವಂತೆ ಸಲಹೆ ನೀಡಬಹುದು. ನಿಜವಾದ ಗುರು ಯಾರೆಂದರೆ, ತನ್ನ ಶಿಷ್ಯನು ಯಾವ ಸ್ತರದಲ್ಲಿ ಕೆಲಸ ಮಾಡಬಹುದು ಎಂಬುದನ್ನು ಅರಿಯುವ ಆಂತರಿಕ ಶಕ್ತಿಯನ್ನು ಹೊಂದಿರುವವನು. ಅದರ ಪ್ರಕಾರ ಅವನಿಗೆ ಸರಿಯಾದ ಮಾರ್ಗವನ್ನು ತೋರುತ್ತಾನೆ. ಇಂತಹ ಶಕ್ತಿ ಇರುವವನೇನಿಜವಾದ ಸದ್ಗುರು.

ಸ್ವಾಮಿಗಳ ಹಾಗೂ ಗುರುಗಳ ಬಗ್ಗೆ ಇನ್ನೊಂದು ಪ್ರಮುಖ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಅವರುಗಳಿಗೆ ನಮ್ಮ ಹಾಗೆಯೇ ಶರೀರವಿದ್ದರೂ, ಈ ಶರೀರಕ್ಕೆ ಪ್ರಾಮುಖ್ಯವಿಲ್ಲ; ಈ ಶರೀರದಲ್ಲಿ ವಾಸಿಸುವ ಆಧ್ಯಾತ್ಮ ಶಕ್ತಿಗೆ ನಿಜವಾದ ಮೌಲ್ಯವಿರುವುದು. ಒಬ್ಬ ಸದ್ಗುರುವಿನ ಮೂಲಕ ದೈವೀ ಅನುಗ್ರಹವು ಶಿಷ್ಯನಿಗೆ ಹರಿಯುತ್ತದೆ. ಆದುದರಿಂದ ಗುರುವಿನ ಆಧ್ಯಾತ್ಮಿಕ ಶಕ್ತಿಗೆ ಪ್ರಾಮುಖ್ಯವೇ ಹೊರತು ಅವನ ಶರೀರಕ್ಕಲ್ಲ. ಗುರುವಿಗೆ ಮಿತಿಮೀರಿದ ಪ್ರಾಮುಖ್ಯ ನೀಡುವುದರಿಂದ, ಕೆಲವು ದುಷ್ಪರಿಣಾಮಗಳೂ ಉಂಟಾಗುತ್ತವೆ. ಅದರಲ್ಲಿ ಮುಖ್ಯವಾದುದು ಆತ್ಮವೈಭವೀಕರಣ. ಇದನ್ನು ಕೆಲವು ಕೆಟ್ಟವರು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಸಾಧ್ಯತೆಯೂ ಇದೆ. ಗುರುವಿನ ಶರೀರಕ್ಕಿಂತ ಗುರುವಿನ ಆಧ್ಯಾತ್ಮಿಕ ಶಕ್ತಿಗೆ ಹೆಚ್ಚು ಪ್ರಾಮುಖ್ಯ ನೀಡಿದರೆ, ಸ್ವಾಮಿಗಳ ಮತ್ತು ಗುರುಗಳ ಬಗ್ಗೆ ಜನಗಳಿಗಿರುವ ಕೆಟ್ಟ ಅಭಿಪ್ರಾಯಗಳು ಕೊನೆಗೊಳ್ಳುತ್ತವೆ.

ಇದರ ಬಗ್ಗೆ ಇನ್ನೂ ಕೆಲವು ಪ್ರಶ್ನೆಗಳು ಉದ್ಭವವಾಗುತ್ತವೆ. ಅವೇನೆಂದರೆ– ಸ್ವಾಮಿಗಳು ಆಗಾಗ್ಗೆ ಅವತರಿಸುವುದರಿಂದ ಏನಾದರೂ ಪ್ರಯೋಜನ ಉಂಟಾಗುತ್ತದೆಯೇ?' ಅವರು ಏನಾದರೂ ಸತ್ಕಾರ್ಯಗಳನ್ನು ಮಾಡುತ್ತಾರೆಯೇ?; ಅವರು ಜನಗಳು ಅನುಸರಿಸಲು ಏನಾದರೂ ಮಾರ್ಗಗಳನ್ನು ತೋರಿಸುತ್ತಾರೆಯೇ?; ಇಂತಹ ಗೌರವಾನ್ವಿತ ವ್ಯಕ್ತಿಗಳನ್ನು ಏನೂ ಪ್ರಶ್ನೆ ಮಾಡದೆ ಸ್ವೀಕರಿಸಬೇಕೇ?; ಅವರು ತೋರಿಸುವ ಮಾರ್ಗಗಳು ಸರಿಯಾದುದೆಂದು ಭಾವಿಸಿ ಅದನ್ನು ನಾವು ಅನುಸರಿಸಬೇಕೇ? ಇತ್ಯಾದಿ.

ಸ್ವಾಮಿಗಳು ಮತ್ತು ಗುರುಗಳನ್ನು ನಾವು ಆಧ್ಯಾತ್ಮಿಕ ವ್ಯಕ್ತಿಗಳೆಂದು ಪರಿಗಣಿಸಬಹುದು. ಅವರು ಬೋಧಿಸುವ ತತ್ವಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬಹುದು; ಏಕೆಂದರೆ ಅದು ಅವರ ಅನುಭಾವದಿಂದ ಬಂದ ಅಥವಾ ಅವರಿಗೆ ಗೋಚರವಾದ ಸತ್ಯಗಳು. ಆದುದರಿಂದ ಅದು ಶರೀರ, ಮನಸ್ಸು ಮತ್ತು ಬುದ್ಧಿಗಳನ್ನು ಮೀರಿದ್ದು ಎಂಬುದನ್ನು ಗಮನಿಸಬೇಕು. ತಮ್ಮ ಆಂತರ್ಯದಲ್ಲಿರುವ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡರೆ ಮಾತ್ರ ಅವರ ಜೀವನದಲ್ಲಿ ಬದಲಾವಣೆಗಳು ಉಂಟಾಗುತ್ತವೆ. ಒಬ್ಬ ಮನುಷ್ಯನ ಜೀವನದಲ್ಲಿ ಸ್ವಲ್ಪ ಮಟ್ಟಿಗಾದರೂ, ಆಂತರಿಕ ಸತ್ಯದ ಅರಿವು ಉಂಟಾದರೆ, ಅವನಿಗೆ ಮಾನಸಿಕ ನೆಮ್ಮದಿ ದೊರಕಿ, ಮುಂದೆ ಕಾಣಬರುವ ಜೀವನದ ಸಮಸ್ಯೆಗಳನ್ನು ಎದುರಿಸಲು ಶಕ್ತಿ ಉಂಟಾಗುತ್ತದೆ. ಆದುದರಿಂದ ಅವರ ಮುಖ್ಯ ಗುರಿಯೆಂದರೆ, ಆಧ್ಯಾತ್ಮಿಕ ಜಾಗೃತಿ ಹಾಗೂ ಆಧ್ಯಾತ್ಮಿಕ ಅನುಭವವನ್ನು ಹೊಂದುವ ಆಕಾಂಕ್ಷೆ ಹಾಗೂ ಅವರ ಅಂತಶ್ಚಕ್ಷುಗಳನ್ನು ತೆರೆಯುವಂತೆ ಮಾಡಿ, ಇದರಿಂದ ಅವರಿಗೆ ಶಕ್ತಿ ಉಂಟಾಗುವಂತೆ ಮಾಡುವುದೇ ಆಗಿದೆ. ನೇರವಾಗಿ ಆಧ್ಯಾತ್ಮಿಕ ಅನುಭವವನ್ನು ಪಡೆಯುವುದು ಅವರಿಗೆ ತಿಳಿದಿದ್ದರೂ ಕೂಡ, ಅನೇಕ ಜನ್ಮಗಳವರೆಗೆ ಇದನ್ನು ತೆಗೆದುಕೊಂಡು ಹೋಗುತ್ತಾರೆ. ಇದನ್ನು ತ್ಯಜಿಸುವುದು ಸಾಧ್ಯವಲ್ಲವೆಂದು ಅವರಿಗೆ ಗೊತ್ತಾಗುತ್ತದೆ. ಅವರಿಗೆ ತಮ್ಮಲ್ಲಿರುವ ಪೂರ್ಣ ಶಕ್ತಿಯ ಅರಿವುಂಟಾಗಿ ಅದರ ಕಡೆಗೆ ಗಮನವನ್ನು ಹರಿಸಬೇಕಾಗುತ್ತದೆ. ಆಧ್ಯಾತ್ಮಕ ಅರಿವನ್ನು ಹೊಂದುವುದು ಎಂದರೆ ಜೀವನವನ್ನು ತ್ಯಜಿಸುವುದು ಎಂದರ್ಥವಲ್ಲ; ಅದರ ಬದಲು ಆಧ್ಯಾತ್ಮಿಕ ಶಕ್ತಿಯಿಂದ ಜೀವನವನ್ನು ಪೂರ್ಣವಾಗಿ ಜೀವಿಸುವುದು



ಮುಖ್ಯವಾದ ಅಂಶ. ಒಂದು ಸಾರಿ ಆಧ್ಯಾತ್ಮಿಕ ಹಸಿವು ಆರಂಭಗೊಂಡರೆ, ಅಂತಹ ಮನುಷ್ಯನು ಆಧ್ಯಾತ್ಮಿಕ ಮಾರ್ಗದಲ್ಲಿ ನಿಷ್ಠೆಯೊಡನೆ ಹಾಗೂ ದೃಢ ನಿಶ್ಚಯದೊಡನೆ ಹಾಗೂ ಮೊದಲ ಬಾಧಕಗಳನ್ನು ದಾಟಿ, ಹೊಸ ಅನುಭವದಲ್ಲಿ ಕರಗಿಹೋಗುತ್ತಾನೆ ಮತ್ತು ಆ ಮಾರ್ಗದಲ್ಲಿ ಮುಂದುವರಿಯಲು ಪ್ರೋತ್ಸಾಹಗೊಳ್ಳುತ್ತಾನೆ.

ಸ್ವಾಮಿಗಳು ಮತ್ತು ಗುರುಗಳು ಭಕ್ತರಲ್ಲಿ ಆಧ್ಯಾತ್ಮದ ಕಿಡಿಯನ್ನು ಹೊತ್ತಿಸಲು, ಕಾರಣರಾಗುತ್ತಾರೆ. ಇದು ಅವರ ಪ್ರವಚನ ಮೂಲಕ, ಅಥವಾ ಗ್ರಂಥದ ಮೂಲಕ ಅಥವಾ ಅವರು ಜೀವಿಸಿರುವವರೆಗೆ ಅವರ ಸಂಪರ್ಕದಿಂದ, ಅವರು ಮುಕ್ತರಾದ ನಂತರ ಅವರಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿರುವ ಅವರ ಆಧ್ಯಾತ್ಮದರ್ಶನದಿಂದ ಉಂಟಾಗಬಹುದು. ಅವರು ನೀಡುವ ಆಧ್ಯಾತ್ಮಿಕ ಜ್ಞಾನವು ಎಲ್ಲರಿಗೂ ಅಂದರೆ ಆಸಕ್ತಿಯಿಂದ ಅದು ಬೇಕೆನ್ನುವ ಸಾಧಕರಿಗೆ ಅದು ಉಚಿತವಾಗಿ ದೊರೆಯುತ್ತದೆ. ಆದರೆ ಅನೇಕರು ಇದನ್ನು ಸ್ವೀಕರಿಸಲು ಅನರ್ಹರಾಗಿ ಕಲ್ಲಿನ ಮೇಲೆ ಬಿದ್ದು ನಶಿಸಿಹೋಗುತ್ತಾರೆ. ಮತ್ತೆ ಕೆಲವರು ಫಲವತ್ತಾದ ಭೂಮಿಯ ಮೇಲೆ ಬಿದ್ದು ಬೆಳೆಯುತ್ತಾರೆ. ಫಲಿತಾಂಶ ಏನಾಗುತ್ತದೆ ಎಂಬುದು ಬೀಜವನ್ನು ಅವಲಂಬಿಸದೆ, ಭೂಮಿಯ ಮೇಲೆ ಅವಲಂಬಿತವಾಗಿರುತ್ತದೆ.

ಆಧ್ಯಾತ್ಮಿಕ ಕಿಡಿಯನ್ನು ಹೊತ್ತಿಸಲಿ ಅಥವಾ ಹೊತ್ತಿಸದೇ ಇರಲಿ, ಪ್ರತಿಯೊಬ್ಬರ ಜೀವನದಲ್ಲಿಯೂ ಸ್ವಾಮಿಗಳು ಮತ್ತು ಗುರುಗಳು ಉಪಯುಕ್ತ ಪಾತ್ರ ವಹಿಸುತ್ತಾರೆ. ಆಧ್ಯಾತ್ಮಿಕ ದಾರಿಯಲ್ಲಿ ನಡೆಯಬೇಕೆಂದು ತೀರ್ಮಾನಿಸಿದವರಿಗೆ ಗುರುಗಳ ಮಾರ್ಗದರ್ಶನ ಮತ್ತು ಅನುಗ್ರಹದ ಅವಶ್ಯಕತೆ ಇದೆಯೆಂದು ಅನೇಕ ಮಹಾನ್ ಸಂತರು ತಿಳಿಸಿದ್ದಾರೆ. ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯದೇ ಇರುವವರಿಗೂ ಮಾನವ ರೂಪದ ದೇವರ ಅವಶ್ಯಕತೆ ಇದೆ. ಅದರಿಂದ ಅವರು ಪ್ರತಿನಿತ್ಯದ ಜೀವನ ಸಾಗಿಸಲು ಬೇಕಾದ ಶಾಂತಿ, ಮಾರ್ಗದರ್ಶನ ಮುಂತಾದವುಗಳನ್ನು ಪಡೆಯಬೇಕಾಗುತ್ತದೆ. ಪ್ರತಿಯೊಬ್ಬರ ಜೀವನದಲ್ಲಿಯೂ ಒಂದಲ್ಲ ಒಂದುಸಮಯದಲ್ಲಿ, ಅನಾನುಕೂಲ ಪರಿಸ್ಥಿತಿಗಳು ಒದಗಿ ಬರುತ್ತವೆ. ಮಾರನೆಯ ದಿನ ಏನಾಗುತ್ತದೆ ಎಂಬುದು ತಿಳಿಯದೆ ರಕ್ಷಣೆಯಿಂದ ವಂಚಿತರಾದವರಂತೆ ಆಗುತ್ತಾರೆ. ಆಗ ಒಂದು ಶ್ರೇಷ್ಠ ಶಕ್ತಿಯು ತಮ್ಮನ್ನು ಸಂಕಷ್ಟಗಳಿಂದ ಮೇಲೆತ್ತಲು ಬರುತ್ತದೆ ಎಂದು ಎದುರು ನೋಡುತ್ತಾರೆ. ಇಂತಹ ಸಮಯದಲ್ಲಿ ಭಗವಂತನ ನಾಮಜಪ, ಸಂತರ ಮಾತುಗಳನ್ನು ಕೇಳುವುದು ಅಥವಾ ಓದುವುದು, ಅಥವಾ ಅವರೊಡನೆ ಸಂಪರ್ಕ ಹೊಂದುವುದು, ಅಥವಾ ಅವರು ಜೀವಿಸಿದ್ದ ಪವಿತ್ರ ಸ್ಥಳಗಳ ಸಂದರ್ಶನ ಮುಂತಾದವು ಶಾಂತಿ, ಸಮಾಧಾನ ನೀಡಿ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ಅನುಕೂಲವಗುತ್ತದೆ. ಅಸಂಖ್ಯಾತ ಜನಗಳು ದೇವಾಲಯಗಳಿಗೆ, ಪವಿತ್ರ ಕ್ಷೇತ್ರಗಳಿಗೆ, ಸಂತರು ಜೀವಿಸಿದ್ದ ಪವಿತ್ರ ಸ್ಥಳಗಳಿಗೆ ಮತ್ತು ಈಗ ಮಾರ್ಗದರ್ಶನ ನೀಡುತ್ತಿರುವ ಸಂತರು ಹಾಗೂ ಗುರುಗಳಲ್ಲಿಗೆ ಹೋಗುತ್ತಾರೆ. ತಮ್ಮ ಆಸೆಗಳನ್ನು ಹೊತ್ತು, ತಮ್ಮ ಸಮಸ್ಯೆಗಳಿಗೆ ಪರಿಹಾರಗಳಿಗಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಪ್ರತಿಯೊಂದು ಆಕಾಂಕ್ಷೆಯೂ ಕೈಗೂಡದಿರಬಹುದು. ಭಕ್ತನಿಗೆ ನಿಷ್ಠೆ, ನಂಬಿಕೆ, ವಿನಯ ಇರಬೇಕಾದುದು ಅತ್ಯವಶ್ಯಕ. ಏಕೆಂದರೆ, ಮಾರ್ಗದರ್ಶನ ನೀಡಬೇಕಾದ ಪರಿಸರವನ್ನು ಸಾಧಕನು ಸೃಷ್ಟಿಸಬೇಕು. ಆಡುವ ಮಾತುಗಳಿಗಿಂತ ಅಥವಾ ಮಾಡುವ ಕೈಂಕರ್ಯಗಳಿಗಿಂತ ಶುದ್ಧವಾದ ಮನಸ್ಸು ಮುಖ್ಯವಾದುದು.

ಪ್ರಾರ್ಥನೆಯ ಉತ್ತಮ ಗುಣಗಳನ್ನು ಹಾಗೂ ಅದರ ಉಪಯುಕ್ತತೆಯನ್ನು ಅಲ್ಲಗಳೆಯಲಾಗದಿದ್ದರೂ, ನಿಶ್ಶಬ್ದವಾಗಿ, ಯಾವ ಮಾತನ್ನೂ ಆಡದೆ, ಪದಗಳ ಬಳಕೆಯಿಲ್ಲದ ಧ್ಯಾನವು ಸಾವಿರ ಪ್ರಾರ್ಥನೆಗಳಿಗಿಂತ ಉತ್ತಮವಾದುದು. ಇಂತಹ ಶ್ರೇಷ್ಠ ಮಾರ್ಗವನ್ನು ಆರಿಸಿಕೊಳ್ಳುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲೂ ಇದೆ ಎಂಬುದನ್ನು ಮರೆಯುವಂತಿಲ್ಲ.

**ಎ. ವಿ. ನರಸಿಂಹಮೂರ್ತಿ**



## ಪರಿವಿಡಿ


| | | |
|---|---|---|
| | ಮುನ್ನುಡಿ | v |
| | ಸಂದೇಶ | vii |
| | ಹಾರೈಕೆ | viii |
| | ಪ್ರಾಸ್ತಾವಿಕ ನುಡಿ | ix |
| | ಪೀಠಿಕೆ | xi |
| | ಅರಿಕೆ | xiv |
| | ಕುಲಪತಿಗಳ ಪ್ರಸ್ತಾವನೆ | xv |
| | ಮೂಲ ಲೇಖಕರ ಮುನ್ನುಡಿ | xvii |
| | ಪ್ರಸ್ತಾವನೆ | xix |
| ೧. | ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು | ೧ |
| ೨. | ಶೇಗಾಂವಿನ ಶ್ರೀ ಗಜಾನನ ಮಹಾರಾಜ್ | ೧೩ |
| ೩. | ಶ್ರೀ ವಾಸುದೇವಾನಂದ ಸರಸ್ವತಿ | ೨೪ |
| ೪. | ಸದ್ಗುರು ಶ್ರೀ ಜಂಗಲಿ ಮಹಾರಾಜ್ | ೩೩ |
| ೫. | ಬ್ರಹ್ಮಚೈತನ್ಯ ಶ್ರೀ ಗೊಂದಾವಳೇಕರ್ ಮಹಾರಾಜರು | ೪೧ |
| | ಉಪಸಂಹಾರ | ೫೩ |

Blank



# ಐವರು ಸಂತರು

# ೧. ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು

ಸೆಪ್ಟೆಂಬರ್ ತಿಂಗಳಿನ ಮಧ್ಯಭಾಗದಲ್ಲಿ ತುಂಬ ಬಿಸಿಲಿನ ಒಂದು ಮಧ್ಯಾಹ್ನ ಒಂದು ಗಂಟೆಗೆ ಸುಮಾರು ೨೫-೩೦ ಪುರುಷರು ಮತ್ತು ಸ್ತ್ರೀಯರು ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ ಬೃಂದಾವನದ ಮುಂದೆ ಸೇರಿದ್ದರು. ಬೃಂದಾವನದ ಎದುರಿಗೆ ಇರುವ ಹನುಮಂತ ದೇವರಿಗೆ ಪೂಜೆಯನ್ನು ಸಲ್ಲಿಸಿ ಇಲ್ಲಿಗೆ ಬಂದಿದ್ದರು. ಎಲ್ಲಿಂದಲೋ ಹತ್ತಿರದಿಂದ ಸಂಸ್ಕೃತ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹೇಳುತ್ತಿರುವ ನಾದ ಕೇಳಿ ಬರುತ್ತಿತ್ತು.

ಬೃಂದಾವನವಿರುವ ದೇವಾಲಯದ ಒಳಗೆ ಪುರೋಹಿತರು ದೇವರ ಸಮರ್ಪಣೆಗಾಗಿ ತೆಂಗಿನಕಾಯಿ ಮತ್ತು ಇತರ ವಸ್ತುಗಳನ್ನು ತೆಗೆದುಕೊಳ್ಳುತ್ತಿದ್ದರು. ಪ್ರತಿಸಾರಿಯೂ ಪುರೋಹಿತರು ಕರ್ಪೂರವನ್ನು ಹತ್ತಿಸಿ ಆರತಿಯನ್ನು ಮಾಡಿ, ಅದನ್ನು ಮಾಡಿಸಿದ ಭಕ್ತನಿಗೆ ತೋರಿಸುತ್ತಿದ್ದರು. ತೆಂಗಿನಕಾಯಿ ಹೋಳು, ಮಂತ್ರಾಕ್ಷತೆಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಭಕ್ತನಿಗೆ ನೀಡುತ್ತಿದ್ದರು. ಇದಾದನಂತರ ಇನ್ನೊಬ್ಬ ಭಕ್ತನೆಡೆಗೆ ತಿರುಗುತ್ತಿದ್ದರು.

ರಾಘವೇಂದ್ರ ಸ್ವಾಮಿಗಳ ಬೃಂದಾವನ ಹಾಗೂ ಪಕ್ಕದಲ್ಲೇ ಇರುವ ಶ್ರೀ ವದ್ದೇಂದ್ರ ತೀರ್ಥರ ಬೃಂದಾವನ ದರ್ಶನ ಮಾಡಿದ ನಂತರ ಕಲ್ಲುಗಳನ್ನು ಹಾಸಿದ ಅಂಗಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹೊರಬರುತ್ತಿದ್ದರು. ಮತ್ತೆ ಕೆಲವರು ಅಲ್ಲೇ ಕುಳಿತುಕೊಂಡು ನಿಶ್ಶಬ್ದವಾಗಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಇನ್ನೂ ಕೆಲವರು ತಾವು ಹರಸಿಕೊಂಡಷ್ಟು ಸಂಖ್ಯೆಯಲ್ಲಿ ಬೃಂದಾವನಕ್ಕೆ ಪ್ರದಕ್ಷಿಣೆ ಹಾಕುತ್ತಿದ್ದರು. ಸುಮಾರು ಮಧ್ಯಾಹ್ನದ ಎರಡು ಗಂಟೆಯಾದ ನಂತರ ಜನಗಳ ಗುಂಪು ಕಡಿಮೆಯಾಗತೊಡಗಿತು. ಏಕೆಂದರೆ ಇನ್ನೆರಡು ಗಂಟೆಗಳ ಕಾಲ ದರ್ಶನಕ್ಕೆ ಬಿಡುವು ನೀಡಲಾಗಿತ್ತು. ಅದು ಮತ್ತೆ ನಾಲ್ಕು ಗಂಟೆಗೆ ಆರಂಭವಾಗಬೇಕಿತ್ತು. ಹೀಗಾಗಿ ಬೃಂದಾವನದ ಸುತ್ತಲೂ ನಿಶ್ಶಬ್ದತೆಯು ನೆಲೆಸಿತ್ತು.

ಇದು ಮಧ್ಯಾಹ್ನದ ನಂತರ ದರ್ಶನದ ಸಮಯವಾದುದರಿಂದ ಜನಗಳ ಸಂಖ್ಯೆ ಕಡಿಮೆ ಇದ್ದಿತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬೆಳಿಗ್ಗೆಯ ಸಮಯದಲ್ಲಿ ಸೇರಿರುತ್ತಾರೆ. ಗುರುವಾರವೇ ಮುಂತಾದ ವಿಶಿಷ್ಟ ದಿನಗಳಲ್ಲಿ ಜನ ಸಮೂಹ ವಿಶೇಷವಾಗಿರುತ್ತದೆ ಎಂದು ಮಂತ್ರಾಲಯಕ್ಕೆ ಪದೇಪದೇ ಹೋಗುವ ಜನಗಳು

ಹೇಳುತ್ತಾರೆ. ಕೆಲವು ಸಾರಿ ಸರತಿ ಸಾಲಿನಲ್ಲಿ ನಿಲ್ಲುವ ಸಮಯ ಒಂದು ಗಂಟೆಯನ್ನೂ ಮೀರಬಹುದು.

ಶ್ರೀ ಶ್ರೇಷ್ಠ ಸಂತರಿಂದ ಆಶೀರ್ವಾದ ಪಡೆಯುವ ಉದ್ದೇಶದಿಂದ ದೂರ ಮತ್ತು ಹತ್ತಿರದ ಸ್ಥಳಗಳಿಂದ ಜನಗಳು ಮಂತ್ರಾಲಯಕ್ಕೆ ವರ್ಷವಿಡೀ ಬರುತ್ತಾರೆ. ಮಂತ್ರಾಲಯದ ಪ್ರಮುಖ ಸಂತರೆಂದರೆ ಶ್ರೀ ರಾಘವೇಂದ್ರ ಸ್ವಾಮಿಗಳು. ಮಧ್ವಾಚಾರ್ಯರಿಂದ ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ಸ್ಥಾಪಿಸಲಾದ ದ್ವೈತ ತತ್ವ ಸಿದ್ಧಾಂತವನ್ನು ಮುನ್ನಡೆಸುವಲ್ಲಿ ರಾಘವೇಂದ್ರ ಸ್ವಾಮಿಗಳ ಪಾತ್ರ ಪ್ರಮುಖವಾದುದು. ಉಡುಪಿಗೆ ಸಮೀಪ ಕ್ರಿ.ಶ. ೧೧೯೧ರಲ್ಲಿ ಜನಿಸಿದ ಮಧ್ವಾಚಾರ್ಯರು ವೈದಿಕ ಗ್ರಂಥಗಳಿಗೆ ಶ್ರೀ ಶಂಕರಾಚಾರ್ಯರು ನೀಡಿದ್ದ ವ್ಯಾಖ್ಯೆಗಿಂತ ಭಿನ್ನವಾದ ದ್ವೈತಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ದ್ವೈತವನ್ನು ಪ್ರತಿಪಾದಿಸಿ ವಿಶ್ವವನ್ನು ನಿಜವೆಂದು ಭಾವಿಸಿದರು ಹಾಗೂ ವಿಷ್ಣುವಿಗೆ ಪರಮ ಶ್ರೇಷ್ಠ ಸ್ಥಾನವನ್ನು ನೀಡಿದರು. ಶ್ರೀರಾಘವೇಂದ್ರ ಸ್ವಾಮಿಗಳು ಮಧ್ವಾಚಾರ್ಯರ ಪರಂಪರೆಯನ್ನು ಮುಂದುವರಿಸಿಕೊಂಡು ಹೋದ ಸಂತರು. ಒಂದು ಶ್ರೇಷ್ಠ ಚೈತನ್ಯವು ಯಾವ ರೀತಿ ಒಬ್ಬರ ಮೇಲೆ ಕೃಪೆ ಮಾಡಿ ಅವರಿಂದ ಉತ್ತಮ ಕೆಲಸವನ್ನು ಮಾಡಿಸುತ್ತದೆ ಎನ್ನುವುದಕ್ಕೆ ಶ್ರೀ ರಾಘವೇಂದ್ರ ಸ್ವಾಮಿಗಳ ಜೀವನವೇ ಉತ್ತಮ ಉದಾಹರಣೆ. ಅವರ ಜೀವನಾದರ್ಶಗಳು ನಡೆದದ್ದು ಮೂರು ಶತಮಾನಗಳಿಗೂ ಹಿಂದಿನದ್ದಾದರೂ ಅದರ ಉಗಮ ನಡೆದದ್ದು ಅದಕ್ಕಿಂತ ತುಂಬ ಹಿಂದೆ.

ವೈದಿಕ ಧರ್ಮದ ಉದ್ಧಾರಕ್ಕಾಗಿ ಈ ಪ್ರಪಂಚದಲ್ಲಿ ಆಗಾಗ್ಗೆ ಜನ್ಮತಾಳಬೇಕೆಂಬ ದಿವ್ಯ ಆದೇಶವನ್ನು ಪಡೆದ ಶಂಕು ಕರ್ಣ ದೇವತೆಯ ಅವತಾರವೇ ಶ್ರೀ ರಾಘವೇಂದ್ರ ಸ್ವಾಮಿಗಳು ಎಂದು ನಂಬಲಾಗಿದೆ. ಮೊದಲನೆಯ ಅವತಾರವು ಹಿರಣ್ಯಕಶಿಪುವಿನ ಸಂಹಾರಕ್ಕಾಗಿ ಮಾಡಿದ ಪ್ರಹ್ಲಾದಾವತಾರ. ವಿಜಯನಗರದ ರಾಜಗುರು ವ್ಯಾಸರಾಜರದೇ ಎರಡನೆಯ ಅವತಾರ. ವ್ಯಾಸರಾಜರು ಮಾಧ್ವ ತತ್ವಗಳನ್ನು ಹರಡುವುದರ ಜೊತೆಗೆ, ಪುರಂದರದಾಸ ಮತ್ತು ಕನಕದಾಸರೊಡನೆ ಸೇರಿ ಭಕ್ತಿ ಪಂಥವನ್ನು ಹುಟ್ಟುಹಾಕಿದರು. ಮೂರನೆಯ ಅವತಾರವೇ ಶ್ರೀ ರಾಘವೇಂದ್ರರದ್ದು. ಇದು ನಾನೂರು ವರ್ಷಗಳ ಹಿಂದೆ ಆಯಿತೆಂದು ಹೇಳಲಾಗಿದೆ.

ಹದಿನಾರನೆಯ ಶತಮಾನದ ದಕ್ಷಿಣ ಭಾರತದಲ್ಲಿ ವಿಜಯನಗರವು ಮಹತ್ವ ಹಿಂದೂ ಸಾಮ್ರಾಜ್ಯವಾಗಿತ್ತು. ಬೇರೆ ಕಡೆಗಳಿಂದ ಬಂದ ಅನೇಕ ಹಿಂದೂ ವಿದ್ವಾಂಸರು ಹಾಗೂ ಪಂಡಿತರಿಗೆ ಅದು ಉತ್ತಮ ಆಶ್ರಯತಾಣವಾಗಿತ್ತು. ಈ ರೀತಿ ಇಲ್ಲಿಗೆ ಬಂದವರಲ್ಲಿ ಕದಂಬ ವಂಶದ ಮಯೂರಶರ್ಮದ ವಂಶಸ್ಥನೇ ಆದ ಕೃಷ್ಣಭಟ್ಟನೂ ಒಬ್ಬನು. ಅವನು ವಿದ್ವಾಂಸನಾಗಿದ್ದುದು ಮಾತ್ರವಲ್ಲದೆ, ವೀಣೆ ನುಡಿಸುವುದರಲ್ಲಿಯೂ ನಿಷ್ಣಾತನಾಗಿದ್ದನು. ವಿಜಯನಗರದ ದೊರೆಯೂ ಅವನ ಶಿಷ್ಯನಾದುದಲ್ಲದೆ, ವೀಣೆ



ಕೃಷ್ಣಭಟ್ಟನೆಂಬ ಬಿರುದು ಕೊಟ್ಟು ಅವನಿಗೆ ತನ್ನ ಆಸ್ಥಾನದಲ್ಲಿ ಪ್ರಮುಖ ಹುದ್ದೆಯನ್ನು ನೀಡಿದರು. ಕೃಷ್ಣಭಟ್ಟನ ಮರಣಾನಂತರ ಅವನ ಮಗ ಕಂಕಚಲಭಟ್ಟನು ಅದೇ ಹುದ್ದೆಯನ್ನು ಅಲಂಕರಿಸಿದನು. ಆನಂತರ ಇವನ ಮಗ ತಿಮ್ಮಣ್ಣ ಭಟ್ಟನು ವಿಜಯನಗರ ಆಸ್ಥಾನದಲ್ಲಿ ಇದೇ ಸ್ಥಾನಮಾನವನ್ನು ಪಡೆದನು.

ಇದೇ ಸಮಯದಲ್ಲಿ ಅಂದರೆ ಕ್ರಿ.ಶ. ೧೫೬೫ರಲ್ಲಿ ವಿಜಯನಗರದಲ್ಲಿ ಮಾಧ್ವ ಸಂಪ್ರದಾಯಕ್ಕೆ ಸೇರಿದ ಶ್ರೀಮಠದಲ್ಲಿ ಸುಧೀಂದ್ರ ತೀರ್ಥರು ಸ್ವಾಮಿಗಳಾಗಿದ್ದರು. ೧೫೬೫ರಲ್ಲಿ ತಾಳಿಕೋಟೆಯ ಯುದ್ಧದ ನಂತರ ವಿಜಯನಗರದ ವರ್ಚಸ್ಸು ನಾಶವಾಯಿತು; ತಿಮ್ಮಣ್ಣಭಟ್ಟನಿಗೆ ಆಶ್ರಯ ತಪ್ಪಿತು. ಆಗ ಅವನು ಶ್ರೀ ಮಠವನ್ನು ಸಹಾಯಕ್ಕಾಗಿ ಕೋರಿದನು. ಸುಧೀಂದ್ರ ತೀರ್ಥರು ಅವನನ್ನು ಸ್ವಾಗತಿಸಿದರು. ತಿಮ್ಮಣ್ಣ ಭಟ್ಟನು ಶ್ರೀಮಠದ ಸೇವೆಯಲ್ಲಿ ನಿರತನಾದನು.

ಇದಾದ ಕೆಲವು ವರ್ಷಗಳ ನಂತರ ವಿಜಯನಗರ ಪ್ರಭಾವ ಪೂರ್ಣವಾಗಿ ಕ್ಷೀಣಿಸಿತು. ಶ್ರೀಮಠದ ಗುರುಗಳಾಗಿದ್ದ ಶ್ರೀ ವಿಜಯೇಂದ್ರ ತೀರ್ಥರು ವಿಜಯನಗರದಿಂದ ದೂರದ ಕುಂಭಕೋಣಕ್ಕೆ ಮಠವನ್ನು ಬದಲಾಯಿಸಿದರು. ಆದರೆ ತಿಮ್ಮಣ್ಣಭಟ್ಟರು ಮತ್ತು ಅವನ ಪತ್ನಿ ಗೋಪಿಕಾಂಬಾ ಕುಂಭಕೋಣಕ್ಕೆ ಹೋಗದೆ, ತಾವು ಇದ್ದ ಸ್ಥಳದಲ್ಲೇ ಉಳಿದರು. ಅವರಿಗೆ ಮಕ್ಕಳಾಗದೇ ಹೋದುದರಿಂದ ತಮ್ಮ ಮನೆದೇವರಾದ ತಿರುಪತಿಯ ವೆಂಕಟೇಶ್ವರನನ್ನು ಪ್ರಾರ್ಥಿಸಲು ಅಲ್ಲಿಗೆ ಹೋದರು. ಕೊನೆಗೆ ಭುವನಗಿರಿ ಎಂಬ ಸಣ್ಣ ಸ್ಥಳದಲ್ಲಿ ನೆಲೆಸಿದರು. ಕಾಲಕ್ರಮದಲ್ಲಿ ಗೋಪಿಕಾಂಬೆಯು ವೆಂಕಟಾಂಬಾ ಎಂಬ ಪುತ್ರಿಗೆ ಜನ್ಮ ನೀಡಿದಳು; ನಂತರ ಗುರುರಾಜನೆಂಬ ಮಗನು ಹುಟ್ಟಿದನು. ಕೆಲವು ವರ್ಷಗಳ ನಂತರ ಅಂದರೆ ಕ್ರಿ.ಶ. ೧೫೯೫ರಲ್ಲಿ ಮತ್ತೊಬ್ಬ ಮಗನು ಹುಟ್ಟಿದನು. ಅವನಿಗೆ ವೆಂಕಟನಾಥ ಎಂಬ ಹೆಸರಿಟ್ಟರು.

ಕಾಲಕ್ರಮದಲ್ಲಿ ತಿಮ್ಮಣ್ಣ ಭಟ್ಟನು ನಿಧನನಾಗಿ, ವೆಂಕಟನಾಥನು ಅಣ್ಣ ಗುರುರಾಜನ ಆಶ್ರಯಕ್ಕೆ ಬಂದನು. ವೆಂಕಟನಾಥನು ತನ್ನ ಬಾಲ್ಯವನ್ನು ತನ್ನ ಅಕ್ಕ ವೆಂಕಟಾಂಬಾಳ ಪತಿಯ ಆಶ್ರಯದಲ್ಲಿ ಕಳೆದನು. ಅವಳ ಗಂಡ ಲಕ್ಷ್ಮೀ ನಾರಾಯಣಾಚಾರ್ಯನು ಸ್ವತಃ ವಿದ್ವಾಂಸನಾಗಿದ್ದು, ವೆಂಕಟನಾಥನ ವಿದ್ಯಾಭ್ಯಾಸವನ್ನು ನೋಡಿಕೊಳ್ಳಲು ಒಪ್ಪಿಕೊಂಡನು.ತನ್ನ ಬಾಲ ಶಿಷ್ಯನು ತೋರಿಸುತ್ತಿದ್ದ ಕಲಿಯುವ ಆಸಕ್ತಿಯಿಂದ ಲಕ್ಷ್ಮೀನಾರಾಯಣಾಚಾರ್ಯನು ಪ್ರಭಾವಿತನಾದನು. ವೆಂಕಟನಾಥನು ವಯಸ್ಕನಾದ ಮೇಲೆ ಅಣ್ಣ ಗುರುರಾಜನು ಅವನನ್ನು ಭುವನಗಿರಿಗೆ ಕರೆತಂದು, ಸರಸ್ವತಿ ಎಂಬ ಕನ್ಯೆಯೊಡನೆ ವಿವಾಹ ಮಾಡಿದನು.

ವೆಂಕಟನಾಥನಿಗೆ ಮಧ್ವಾಚಾರ್ಯರ ಬೋಧನೆಯನ್ನು ಒಳಗೊಂಡ ದ್ವೈತವನ್ನು ಅಭ್ಯಾಸ ಮಾಡಬೇಕೆಂಬ ಆಕಾಂಕ್ಷೆ ಉಂಟಾಗಿ, ಕುಂಭಕೋಣಕ್ಕೆ ಹೋಗಿ ಶ್ರೀಮಠದ

ಗುರುಗಳಾಗಿದ್ದ ಶ್ರೀ ಸುಧೀಂದ್ರ ತೀರ್ಥರನ್ನು ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಪ್ರಾರ್ಥಿಸಿದನು. ತನ್ನ ತಂದೆ ತಿಮ್ಮಣ್ಣ ಭಟ್ಟರೊಂದಿಗೆ ಕುಂಭಕೋಣಕ್ಕೆ ಬರುತ್ತಿದ್ದ ವೆಂಕಟನಾಥನ ಪರಿಚಯ ಸ್ವಾಮಿಗಳಿಗಿದ್ದುದರಿಂದ, ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ವೆಂಕಟನಾಥನು ಕುಂಭಕೋಣಕ್ಕೆ ಬಂದು ನಿಷ್ಠೆಯಿಂದ ವಿದ್ಯಾಭ್ಯಾಸ ಮಾಡಲು ಆರಂಭಿಸಿದನು. ಕಷ್ಟಪಟ್ಟು ಕೆಲಸ ಮಾಡುವ ಗುಣ ಮತ್ತು ಬುದ್ಧಿಶಕ್ತಿಯಿಂದ ಶೀಘ್ರದಲ್ಲಿ ಅವನು ಗುರುಗಳ ಪ್ರಿಯ ಶಿಷ್ಯನಾದನು.

ಒಂದು ವರ್ಷದ ನಂತರ, ವೆಂಕಟನಾಥನು ಭುವನಗಿರಿಗೆ ಹಿಂದಿರುಗಿ ಪತ್ನಿ ಸರಸ್ವತಿಯೊಡನೆ ಗೃಹಸ್ಥನಾಗಿ ಜೀವನ ನಡೆಸಲು ಆರಂಭಿಸಿದನು. ಹುಡುಗರಿಗೆ ಮನೆಪಾಠವನ್ನು ಹೇಳಿಕೊಡುವ ಮೂಲಕ ಅಲ್ಪಸ್ವಲ್ಪ ಹಣವನ್ನು ಸಂಪಾದಿಸುತ್ತಿದ್ದನು. ಇದು ಸಾಲದಾಗಿ ಇವನು ತೀರ ಬಡತನದಲ್ಲಿ ಜೀವನ ನೂಕಬೇಕಾಯಿತು. ಲಕ್ಷ್ಮೀ ನಾರಾಯಣ ಎಂಬ ಮಗನ ಜನನವಾದ ಮೇಲಂತೂ ಜೀವನ ಇನ್ನೂ ಕಷ್ಟವಾಯಿತು. ಮತ್ತೆ ಕುಂಭಕೋಣಕ್ಕೆ ಹೋಗಿ ಶ್ರೀಮಠದ ಸೇವೆಯಲ್ಲಿ ಸೇರಿಕೊಂಡರೆ ಅನ್ನ-ಬಟ್ಟೆಗಳಿಗೆ ಸಾಕಾಗುವಷ್ಟು ಸಂಪಾದನೆ ಮಾಡಬಹುದೆಂದು ಅವಳು ತಿಳಿಸಿದಳು. ಆಗ ತಾನು ಮಾಡಿದ ಪ್ರಾರ್ಥನೆಯ ಪರಿಣಾಮ ಏನು ಉಂಟಾಗಬಹುದೆಂಬ ಕಲ್ಪನೆಯೂ ಅವಳಿಗಿರಲಿಲ್ಲ. ಅದು ಅವಳ ಭವಿಷ್ಯದ ಮೇಲೇ ಪರಿಣಾಮ ಬೀರಿತು.

ವೆಂಕಟನಾಥನು ಶ್ರೀಮಠಕ್ಕೆ ಹಿಂದಿರುಗಿ ಧರ್ಮಗ್ರಂಥಗಳ ಅಧ್ಯಯನದಲ್ಲಿ ಮುಳುಗಿದನು. ಶ್ರೀ ಸುಧೀಂದ್ರ ತೀರ್ಥರು ತಮ್ಮ ಧಾರ್ಮಿಕ ಪ್ರವಾಸದ ಸಮಯದಲ್ಲಿ ವೆಂಕಟನಾಥನನ್ನು ಜೊತೆ ಕರೆದುಕೊಂಡು ಹೋಗುತ್ತಿದ್ದರು. ಇಂತಹ ಸಮಯದಲ್ಲಿ, ಅದರಲ್ಲಿಯೂ ವಿಶೇಷವಾಗಿ ರಾಜಮನ್ನಾರ್‌ಗುಡಿ ಮತ್ತು ತಂಜಾವೂರು ರಾಜರ ಆಸ್ಥಾನಗಳಲ್ಲಿ ತಮ್ಮ ವಾಕ್ಯಾರ್ಥಗಳಿಂದ ಎದುರು ಪಕ್ಷದವರನ್ನು ಮಣಿಸುತ್ತಿದ್ದರು. ಇದರಿಂದ ಸಂತೋಷಗೊಂಡ ಶ್ರೀಗಳು ಅವನಿಗೆ ವೆಂಕಟಾಚಾರ್ಯ ಮತ್ತು ಮಹಾಭಾಷ್ಯಾಚಾರ್ಯ ಎಂಬ ಪ್ರಶಸ್ತಿಗಳನ್ನು ನೀಡಿದರು.

ಸುಧೀಂದ್ರ ತೀರ್ಥರಿಗೆ ವಯಸ್ಸಾದ ನಂತರ, ತಮಗೊಬ್ಬ ಉತ್ತರಾಧಿಕಾರಿಯನ್ನು ನಿಯಮಿಸಬೇಕೆಂದು ಯೋಚಿಸಲು ಆರಂಭಿಸಿದರು. ಅವರು ವೆಂಕಟನಾಥನನ್ನು ಶ್ರೀಮಠದ ಗುರುವಾಗುವಂತೆ ಕೇಳಿದರು. ಆದರೆ ಇದರಿಂದಾಗಿ ಸನ್ಯಾಸಾಶ್ರಮವನ್ನು ತೆಗೆದುಕೊಳ್ಳಬೇಕಾಗಿ ಬರುವುದರಿಂದ, ವೆಂಕಟನಾಥನು ಇದನ್ನು ವಿನಯದಿಂದ ನಿರಾಕರಿಸಿದನು. ತನಗಿನ್ನೂ ತನ್ನ ಹೆಂಡತಿ ಮತ್ತು ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಇದೆಯೆಂದು ತಿಳಿಸಿದನು. ಹೀಗಾಗಿ ಸುಧೀಂದ್ರ ತೀರ್ಥರು ಇನ್ನೊಬ್ಬ ಶಿಷ್ಯನಿಗೆ ಯಾದವೇಂದ್ರ ತೀರ್ಥ ಎನ್ನುವ ಹೆಸರು ನೀಡಿ ಸನ್ಯಾಸವನ್ನು ನೀಡಿದರು. ಈ ಮಧ್ಯೆ ಸುಧೀಂದ್ರ ತೀರ್ಥರ ಆರೋಗ್ಯ ಸುಧಾರಿಸಿದ್ದರಿಂದ ಅವರೇ



ಪೀಠಾಧಿಪತಿಗಳಾಗಿ ಮುಂದುವರಿದರು ಮತ್ತು ಯಾದವೇಂದ್ರ ತೀರ್ಥರನ್ನು ಯಾತ್ರೆಗಾಗಿ ಕಳುಹಿಸಿದರು.

ಯಾದವೇಂದ್ರ ತೀರ್ಥರು ಯಾತ್ರಾರ್ಥಿಯಾಗಿ ದೂರದಲ್ಲಿದ್ದಾಗ ಸುಧೀಂದ್ರ ತೀರ್ಥರ ಆರೋಗ್ಯ ಹದಗೆಟ್ಟಿತು. ತಮ್ಮ ಅಂತ್ಯವು ಸಮೀಪಿಸಿತೆಂದು ತಿಳಿದ ಸ್ವಾಮಿಗಳು ಶ್ರೀಮಠದ ಮುಖ್ಯ ದೇವತೆಯಾದ ಮೂಲರಾಮನನ್ನು ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿದರು. ಆ ರಾತ್ರಿ ಸುಧೀಂದ್ರ ತೀರ್ಥರ ಕನಸಿನಲ್ಲಿ ಮೂಲರಾಮನು ಕಾಣಿಸಿಕೊಂಡು ವೆಂಕಟನಾಥನು ಶ್ರೀಮಠದ ಗುರುವಾಗ ಬೇಕೆಂದೂ ಅದೇ ದೇವರ ಅಪ್ಪಣೆಯೆಂದೂ, ಸನ್ಯಾಸಾನಂತರ ಅವನ ಹೆಸರು ಶ್ರೀ ರಾಘವೇಂದ್ರ ಎಂಬುದಾಗಿ ಇರಬೇಕೆಂದೂ ತಿಳಿಸಿದನು.

ಮಾರನೆಯ ಬೆಳಿಗ್ಗೆ ವೆಂಕಟನಾಥನನ್ನು ಸಂಧಿಸಿ, ಅವನು ಸನ್ಯಾಸ ತೆಗೆದುಕೊಳ್ಳಬೇಕೆಂದು ಆಗ್ರಹಪೂರ್ವಕವಾಗಿ ನುಡಿದರು. ಮೂಲರಾಮನೇ ಈ ದಾರಿಯನ್ನು ತೋರಿಸಿಕೊಟ್ಟಿದ್ದಾನೆಂದೂ ತಿಳಿಸಿದರು. ಅವನ ಹೆಂಡತಿ ಮತ್ತು ಮಗನನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗುವುದೆಂದು ಆಶ್ವಾಸನೆ ನೀಡಿದರು. ವೆಂಕಟನಾಥನ ಮನಸ್ಸು ಗೊಂದಲಕ್ಕೊಳಗಾಯಿತು. ಒಂದು ಕಡೆ ತನ್ನ ಕುಟುಂಬದ ಹೊಣೆ, ಮತ್ತೊಂದು ಕಡೆ ಗುರುಗಳು ತಿಳಿಸಿದ ಮೂಲರಾಮನ ಆಜ್ಞೆ ಇವುಗಳಿಂದ ಇವರ ಮನಸ್ಸಿನಲ್ಲಿ ತುಮುಲ ಉಂಟಾಯಿತು.

ಆ ರಾತ್ರಿ ವೆಂಕಟನಾಥನು ಹಾಸಿಗೆಯ ಮೇಲೆ ಮಲಗಿ ಈ ವಿಷಯದ ಬಗ್ಗೆ ಯೋಚಿಸುತ್ತಿದ್ದಾಗ, ಒಂದು ಸುಂದರ ಸ್ತ್ರೀ ರೂಪ ತನ್ನ ಹಾಸಿಗೆ ಹತ್ತಿರ ನಿಂತಿದ್ದಳು. ಆಕೆಯು ತಾನು ದೇವಿ ಸರಸ್ವತಿ ಎಂದೂ ಸುಧೀಂದ್ರ ತೀರ್ಥರ ಅಪೇಕ್ಷೆಯೇ ದೇವರ ಅಪೇಕ್ಷೆಯೆಂದೂ ಆದುದರಿಂದ ಅವರ ಅಪೇಕ್ಷೆಯನ್ನು ನೆರವೇರಿಸಬೇಕೆಂದೂ ಗಲಿಬಿಲಿಗೊಂಡ ವೆಂಕಟನಾಥನಿಗೆ ಹೇಳಿದಳು. ವೇದದ ಗ್ರಂಥಗಳಿಗೆ ವ್ಯಾಖ್ಯಾನ ಬರೆಯಲು ಇವನು ಅರ್ಹನೆಂದೂ, ಇದರಿಂದ ವೇದ ವಾಙ್ಮಯಗಳ ಸರಿಯಾದ ಅರ್ಥ ಎಲ್ಲರಿಗೂ ಆಗಬೇಕೆಂದೂ ಸರಸ್ವತಿ ತಿಳಿಸಿದಳು.

ಈ ಅಲೌಕಿಕ ಅನುಭವದಿಂದ ವೆಂಕಟನಾಥನ ಸಂದೇಹ ಮತ್ತು ಗೊಂದಲಗಳು ನಿವಾರಣೆಯಾದವು. ದೈವದ ಇಚ್ಛೆಯಂತೆ ತನಗೆ ಒದಗಿ ಬಂದಿರುವ ಅವಕಾಶವನ್ನು ತಿರಸ್ಕರಿಸಬಾರದೆಂದೂ ಮತ್ತು ಅದನ್ನು ಒಪ್ಪಿಕೊಳ್ಳಬೇಕೆಂದೂ ಅವನು ತೀರ್ಮಾನಿಸಿದನು. ಮಾರನೆಯ ಬೆಳಿಗ್ಗೆ ಸುಧೀಂಧ್ರತೀರ್ಥರಲ್ಲಿಗೆ ಹೋಗಿ ಸನ್ಯಾಸ ಸ್ವೀಕಾರಕ್ಕೆ ತನ್ನ ಒಪ್ಪಿಗೆಯನ್ನು ತಿಳಿಸಿದನು. ತಕ್ಷಣವೇ ಸುಧೀಂದ್ರ ತೀರ್ಥರು ವೆಂಕಟನಾಥನ ಪುತ್ರನ ಉಪನಯನಕ್ಕೆ ಏರ್ಪಾಟು ಮಾಡಿದರು. ತನ್ನ ಗಂಡನು ಸನ್ಯಾಸ ಸ್ವೀಕರಿಸುತ್ತಾರೆಂಬ ಸುಳಿವು ಹೆಂಡತಿ ಸರಸ್ವತಿಗೆ ಸಿಕ್ಕುತ್ತದೆ ಮತ್ತು ಅದರಿಂದ ಅವಳ ಮನಸ್ಸಿಗೆ ಆಘಾತ ಉಂಟಾಗುತ್ತದೆ ಎಂದು ಭಾವಿಸಿದ ಸುಧೀಂದ್ರ ತೀರ್ಥರು

ಸನ್ಯಾಸ ಕಾರ್ಯವನ್ನು ಕುಂಭಕೋಣದಲ್ಲಿ ಮಾಡದೆ, ತಂಜಾವೂರಿನಲ್ಲಿ ಮಾಡಿದರು. ಅಲ್ಲಿನ ದೊರೆ ರಘುನಾಥ ಭೂಪಾಲನು ಅರಮನೆಯಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿದನು. ೧೬೨೪ನೇ ಇಸವಿಯ ಫಾಲ್ಗುಣ ಶುದ್ಧ ದ್ವಿತೀಯ ದಿನದಂದು ಸುಧೀಂದ್ರ ತೀರ್ಥರು ವೆಂಕಟನಾಥನಿಗೆ ಪವಿತ್ರ ಸನ್ಯಾಸ ದೀಕ್ಷೆಯನ್ನು ನೀಡಿದರು. ಇದರಿಂದಾಗಿ ದೇವರೇ ಅಪೇಕ್ಷೆ ಪಟ್ಟಂತೆ ತಿಮ್ಮಣ್ಣಭಟ್ಟರ ಕಿರಿಯ ಮಗ ವೆಂಕಟನಾಥನು ಶ್ರೀಮಠದ ಆಧ್ಯಾತ್ಮಿಕ ಗುರುವಾಗಿ ಶ್ರೀ ರಾಘವೇಂದ್ರ ತೀರ್ಥ ಎಂಬ ಹೊಸ ಹೆಸರನ್ನು ಪಡೆದನು.

ಇಂತಹ ಮಹತ್ತರ ತೀರ್ಮಾನವು ಕೆಲವು ದುರದೃಷ್ಟಕರ ಘಟನೆಗಳಿಗೆ ಎಡೆಮಾಡಿ ಕೊಟ್ಟಿತು. ಅವರ ಪತ್ನಿ ದುಃಖವನ್ನು ಸಹಿಸಲಾರದೆ ಬಾವಿಗೆ ಹಾರಿ ಜೀವನವನ್ನು ಕೊನೆಗಾಣಿಸಿಕೊಂಡಳು. ಮಗ ಲಕ್ಷ್ಮೀನಾರಾಯಣನನ್ನು ಮುಂದಿನ ಜೀವನಕ್ಕಾಗಿ ಸೋದರಮಾವನ ಮನೆಗೆ ಕಳುಹಿಸಲಾಯಿತು. ಈ ಮಧ್ಯೆ ಯಾದವೇಂದ್ರ ತೀರ್ಥರು ಕುಂಭಕೋಣಕ್ಕೆ ಹಿಂದಿರುಗಿ ಬಂದರು. ಅಷ್ಟು ಹೊತ್ತಿಗಾಗಲೇ ತಮ್ಮ ಅನುಪಸ್ಥಿತಿಯಲ್ಲಿ ಶ್ರೀ ರಾಘವೇಂದ್ರ ತೀರ್ಥರು ಪೀಠಾಧಿಪತಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ್ದುದನ್ನು ಗಮನಿಸಿದರು. ಅವರು ಕುಂಭಕೋಣವನ್ನು ಬಿಟ್ಟು ಮುದಮಲೆ ಎಂಬ ಸ್ಥಳದಲ್ಲಿ ವಾಸಿಸುತ್ತಲಿದ್ದು, ಸ್ವಲ್ಪ ಕಾಲಾನಂತರ ಮರಣ ಹೊಂದಿದರು.

ಇತ್ತ ಕುಂಭಕೋಣದಲ್ಲಿ ಶ್ರೀ ರಾಘವೇಂದ್ರ ತೀರ್ಥರು ಪೀಠಾಧಿಪತಿಗಳಾಗಿ ಕಾರ್ಯ ನಿರ್ವಹಿಸಲು ಆರಂಭಿಸಿದರು. ಅವರು ದ್ವೈತಸಿದ್ಧಾಂತದ ತಲಸ್ಪರ್ಶಿ ಅಧ್ಯಯನವನ್ನು ಮುಂದುವರಿಸಿದರು ಮತ್ತು ವೈದಿಕ ಗ್ರಂಥಗಳಿಗೆ ಭಾಷ್ಯವನ್ನು ಬರೆಯಲು ಮತ್ತು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದನ್ನು ಮಾಡಲು ಆರಂಭಿಸಿದರು. ಶ್ರೀ ರಾಘವೇಂದ್ರರಿಗೆ ಪವಾಡಗಳನ್ನು ಮಾಡುವ ಶಕ್ತಿ ಇರುವುದು ಜನಗಳಿಗೆ ಶೀಘ್ರದಲ್ಲೇ ತಿಳಿಯಿತು. ಒಂದು ಸಂದರ್ಭದಲ್ಲಿ ಮದುವೆಯ ದಿನವೇ ಶಿಷ್ಯನೊಬ್ಬನು ಮರಣಹೊಂದಿದನು. ಶ್ರೀ ರಾಘವೇಂದ್ರರು ಅವನ ಶರೀರದ ಮುಖಕ್ಕೆ ಕಮಂಡಲದಿಂದ ನೀರನ್ನು ಚಿಮುಕಿಸಿ ಅವನಿಗೆ ಜೀವದಾನ ಮಾಡಿದರು. ಇದು ಎಲ್ಲೆಲ್ಲೂ ಸುದ್ದಿ ಮಾಡಿತು. ಜನಗಳು ಇವರ ಅನುಗ್ರಹಕ್ಕಾಗಿ ಕುಂಭಕೋಣಕ್ಕೆ ಬರಲು ಆರಂಭಿಸಿದರು.

ಕ್ರಿ.ಶ. ೧೬೪೨ರಲ್ಲಿ ಚೋಳವಂಶದ ವಿಜಯ ರಾಘವ ನಾಯಕನಿಗೆ ತುಂಬ ಕಷ್ಟಗಳು ಬಂದೊದಗಿದವು. ಹೆಚ್ಚುತ್ತಲಿದ್ದ ಕ್ಷಾಮ ಮತ್ತು ಬರಗಳ ಜೊತೆಗೆ ಅಕ್ಕಪಕ್ಕದ ರಾಜರುಗಳ ದಾಳಿಗಳಿಂದ, ಇವನ ರಾಜ್ಯ ಪತನದ ಹಾದಿಯಲ್ಲಿತ್ತು. ನಾಯಕನ ಪ್ರಾರ್ಥನೆಯ ಮೇರೆಗೆ ಶ್ರೀ ರಾಘವೇಂದ್ರರು ಅವನ ರಾಜಧಾನಿ ತಂಜಾವೂರಿಗೆ ಹೋಗಿ ಪೂಜೆ ಮತ್ತು ಯಜ್ಞಗಳನ್ನು ನೆರವೇರಿಸಿದರು. ರಾಜ್ಯವು



ಸಂಕಷ್ಟಗಳಿಂದ ಮುಕ್ತವಾಯಿತು. ರಾಜನು ಜೀವನಪರ್ಯಂತ ಶ್ರೀ ರಾಘವೇಂದ್ರರಿಗೆ ಕೃತಜ್ಞನಾಗಿದ್ದನು.

ತಂಜಾವೂರಿನಲ್ಲಿ ಹನ್ನೆರಡು ವರ್ಷಗಳ ಕಾಲ ಇದ್ದು, ಶ್ರೀ ರಾಘವೇಂದ್ರರು ಕುಂಭಕೋಣಕ್ಕೆ ಹಿಂದಿರುಗಿದರು. ಪ್ರಖ್ಯಾತ ಸಂತರು ಸಾಮಾನ್ಯವಾಗಿ ಒಂದೇ ಕಡೆ ಬಹಳವರ್ಷ ಇರುವುದಿಲ್ಲ. ಸಾಮಾನ್ಯ ಜನಗಳು ತಮ್ಮ ಸಂಪರ್ಕಕ್ಕೆ ಬಂದು ಮಾರ್ಗದರ್ಶನ ಪಡೆಯಲಿ ಎಂಬ ಉದ್ದೇಶದಿಂದ ಪ್ರಯಾಣ ಮಾಡುತ್ತಲಿರುತ್ತಾರೆ.

ಇದೇ ಪದ್ಧತಿಯಂತೆ ಶ್ರೀ ರಾಘವೇಂದ್ರರೂ ಮೊದಲು ಪೂರ್ವದ ಕಡೆಗೂ ನಂತರ ದಕ್ಷಿಣದ ರಾಮೇಶ್ವರಂ ಹಾಗೂ ತಿರುವನಂತಪುರಂವರೆಗೆ ಪ್ರವಾಸಗಳನ್ನು ಕೈಗೊಂಡರು. ಅವರು ಹೋದಲ್ಲೆಲ್ಲ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದರು. ಮಧುರೈನಲ್ಲಿ ಮೀನಾಕ್ಷಿ ದೇವಿಗೂ, ಶ್ರೀರಂಗಂನಲ್ಲಿ ಶ್ರೀ ರಂಗನಾಥನಿಗೂ ಪೂಜೆ ಸಲ್ಲಿಸಿದರು. ಮಧ್ವಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಕೃಷ್ಣನ ವಿಗ್ರಹವನ್ನು ಉಡುಪಿಯ ದೇವಾಲಯದಲ್ಲಿ ನೋಡಿ ಆನಂದದಿಂದ ಪುಳಕಿತರಾದರು. ಉಡುಪಿಯಲ್ಲಿ ಹೆಚ್ಚಿನ ಕಾಲ ವಾಸವಾಗಿದ್ದು, ಈ ಸಮಯದಲ್ಲಿ ಚಂದ್ರಿಕ ಪ್ರಕಾಶಿಕ ಮತ್ತು ಸುಧಾ–ಪರಿಮಳ ಮುಂತಾದ ಗ್ರಂಥಗಳನ್ನು ರಚಿಸಿದರು.

ಉಡುಪಿಯಿಂದ ಉತ್ತರಕ್ಕೆ ಹೊರಟು ಶ್ರೀ ರಾಘವೇಂದ್ರರು ಮೈಸೂರು, ಶ್ರೀರಂಗಪಟ್ಟಣ, ಚಿತ್ರದುರ್ಗಗಳನ್ನು ಸಂದರ್ಶಿಸಿ, ಕಿರೀಟಗಿರಿ ಎಂಬಲ್ಲಿಗೆ ಆಗಮಿಸಿದರು. ಇಲ್ಲಿ ಒಂದು ಗಮನಾರ್ಹ ಸಂಗತಿ ನಡೆಯಿತು. ಈ ಗ್ರಾಮದ ಮುಖ್ಯಸ್ಥನಾದ ವೆಂಕಟದೇಸಾಯಿಯು ಶ್ರೀ ರಾಘವೇಂದ್ರರನ್ನು ತನ್ನ ಮನೆಯಲ್ಲಿ ಒಂದು ದಿನ ಅತಿಥಿಯಾಗಿರಬೇಕೆಂದು ಪ್ರಾರ್ಥಿಸಿದನು. ಇವರಿಗಾಗಿ ದೇಸಾಯಿಯು ಮಾವಿನಹಣ್ಣಿನ ರಸವನ್ನು ತಯಾರಿಸಿ ದೊಡ್ಡ ಪಾತ್ರೆಗಳಲ್ಲಿ ತುಂಬಿಟ್ಟಿದ್ದನು. ಹಿರಿಯರೆಲ್ಲರೂ ಪೂಜಾ ಪುನಸ್ಕಾರಗಳಲ್ಲಿ ನಿರತರಾಗಿದ್ದಾಗ, ದೇಸಾಯಿಯವರ ಪುಟ್ಟ ಬಾಲಕ ಈ ಹಣ್ಣಿನ ರಸದ ಪಾತ್ರೆಯಲ್ಲಿ ಬಿದ್ದುಬಿಟ್ಟು ಸತ್ತುಹೋದನು. ಇಡೀ ಕುಟುಂಬ ಮತ್ತು ಅಲ್ಲಿ ಸೇರಿದ್ದ ಭಕ್ತರೂ ದುಃಖದಲ್ಲಿ ಮುಳುಗಿದರು. ಇದು ಶ್ರೀ ರಾಘವೇಂದ್ರರಿಗೆ ತಿಳಿದ ತಕ್ಷಣ ಆ ಬಾಲಕನ ಶರೀರವನ್ನು ತೆಗೆದುಕೊಂಡು ಬಂದು ತಮ್ಮ ಮುಂದೆ ಇಡಬೇಕೆಂದು ಆಜ್ಞಾಪಿಸಿದರು. ಅನಂತರ ಪವಿತ್ರ ನೀರನ್ನು ಶರೀರದ ಮೇಲೆ ಚುಮುಕಿಸಿದರು. ಪವಾಡವಾಯಿತೋ ಎಂಬಂತೆ, ಸತ್ತುಹೋಗಿದ್ದ ಬಾಲಕನು ಮೇಲೆದ್ದು ಏನೂ ಆಗಿಲ್ಲವೆಂಬಂತೆ ಆ ಕಡೆಯಿಂದ ಈ ಕಡೆಗೆ ಓಡಾಡಲು ಆರಂಭಿಸಿದನು. ಇದರಿಂದ ಸಂತೋಷಗೊಂಡ ದೇಸಾಯಿಯು ಕೃತಜ್ಞತೆಯ ಕುರುಹಾಗಿ ಕಿರೀಟಗಿರಿ ಗ್ರಾಮವನ್ನು ಶ್ರೀ ರಾಘವೇಂದ್ರ ಮಠಕ್ಕೆ ದಾನವಾಗಿ ನೀಡಿದನು.

ಹುಬ್ಬಳ್ಳಿ, ಸವಣೂರು, ಪಂಡರಪುರ ಮತ್ತು ಕೊಲ್ಲಾಪುರದ ಮಾರ್ಗವಾಗಿ ಶ್ರೀ ರಾಘವೇಂದ್ರರು ಉತ್ತರದ ನಾಸಿಕದವರೆಗೆ ಪ್ರಯಾಣ ಬೆಳೆಸಿದರು. ದಾರಿಯುದ್ದಕ್ಕೂ ಕಿರೀಟಗಿರಿಯಲ್ಲಿ ಆದಂತಹ ಪವಾಡಗಳೇ ನಡೆಯುತ್ತಿದ್ದವು. ಇದರಿಂದ ರಾಘವೇಂದ್ರರು ದೈವೀ ಅವತಾರವೆಂಬ ಭಾವನೆ ಜನಗಳಲ್ಲಿ ದೃಢಪಟ್ಟಿತು. ನಾಸಿಕದಿಂದ ದಕ್ಷಿಣದ ಕಡೆಗೆ ಹೊರಟು ಬಿಜಾಪುರಕ್ಕೆ ಹೋದರು. ಅಲ್ಲಿ ರಾಜ್ಯವಾಳುತ್ತಿದ್ದ ಇಮ್ಮಡಿ ಇಬ್ರಾಹಿಂ ಆದಿಲ್‌ಷಾ ಇವರ ಶ್ರೇಷ್ಠತೆಯನ್ನು ಅರಿತು ಶ್ರೀ ರಾಘವೇಮದ್ರರಿಗೆ ಶ್ವೇತಚ್ಛತ್ರಿಯನ್ನು ನೀಡಿದನು. ಇನ್ನೂ ಕೆಲವು ಸ್ಥಳಗಳಿಗೆ ಭೇಟಿನೀಡಿ ಅದೋನಿ ರಾಜ್ಯಕ್ಕೆ ಆಗಮಿಸಿದರು. ಇಲ್ಲಿನ ಕಂದನತಿ ಎಂಬ ಗ್ರಾಮದಲ್ಲಿ ಶ್ರೀ ರಾಘವೇಂದ್ರರ ಮುಂದಿನ ಜೀವನದ ಮೇಲೆ ವಿಶೇಷ ಪ್ರಭಾವ ಬೀರಿದ ಘಟನೆಯೊಂದು ನಡೆಯಿತು.

ಕಂದನತಿ ಎಂಬ ಗ್ರಾಮದಲ್ಲಿ ವೆಂಕಟ ಎಂಬ ಅನಾಥ ಬಾಲಕನಿದ್ದನು. ಅವನ ಸೋದರಮಾವನು ವೆಂಕಣ್ಣನ ಭೂಮಿ ಕಾಣಿಯನ್ನೆಲ್ಲ ಮೋಸದಿಂದ ತನ್ನದಾಗಿ ಮಾಡಿಕೊಂಡಿದ್ದನು. ಬಾಲಕನು ಇತರ ಗೋಪಾಲಕರ ಜೊತೆಯಲ್ಲಿ ಸೋದರಮಾವನ ಹಸುಕರುಗಳನ್ನು ಹುಲ್ಲುಮೇಯಿಸಲು ಕರೆದುಕೊಂಡು ಹೋಗುತ್ತಿದ್ದನು. ಒಂದು ದಿನ ಮಧ್ಯಾಹ್ನ ಎಲ್ಲ ಹುಡುಗರೂ ನಿದ್ರೆ ಮಾಡುತ್ತಿದ್ದಾಗ, ವೆಂಕಣ್ಣನು ಮಾತ್ರ ಎದ್ದಿದ್ದನು. ಆಗ ರಸ್ತೆಯಲ್ಲಿ ಶ್ರೀ ರಾಘವೇಂದ್ರರ ಮೆರವಣಿಗೆಯು ತೆರಳುತ್ತಿದ್ದುದನ್ನು ನೋಡಿದನು. ಇಂತಹ ಶ್ರೇಷ್ಠರ ದರ್ಶನ ತನ್ನ ಅದೃಷ್ಟವೆಂದು ಭಾವಿಸಿ, ವೆಂಕಣ್ಣನು ಏನೂ ಮಾಡಲು ತೋಚದೆ ಕಣ್ಣೀರನ್ನು ಸುರಿಸುತ್ತ ನಿಂತನು. ಇದನ್ನು ಗಮನಿಸಿದ ರಾಘವೇಂದ್ರರು ಹುಡುಗನನ್ನು ಸಮಾಧಾನ ಮಾಡಿ, ಯಾವುದಕ್ಕೂ ಚಿಂತಿಸಬಾರದೆಂದು ತಿಳಿಸಿದರು. ಇನ್ನು ಮುಂದೆ ಜೀವನದಲ್ಲಿ ಏನಾದರೂ ತೊಂದರೆಗಳು ಬಂದರೆ ಶ್ರೀ ರಾಘವೇಂದ್ರರನ್ನು ನೆನೆಸಿಕೊಂಡರೆ ಸಾಕು, ಅವರು ಬಂದು ಅವನ ಕಷ್ಟವನ್ನು ಪರಿಹರಿಸುತ್ತಾರೆ ಎಂದು ಹೇಳಿದರು.

ಕಂದನತಿ ಗ್ರಾಮದಿಂದ ಹೊರಟು ಹತ್ತಾರು ಸ್ಥಳಗಳಿಗೆ ಭೇಟಿ ನೀಡಿ ಕೊನೆಗೆ ಕುಂಭಕೋಣಕ್ಕೆ ಬಂದರು. ಕೆಲವು ವರ್ಷಗಳ ಕಾಲ ಅಲ್ಲಿಯೇ ಇದ್ದು, ಮತ್ತೊಮ್ಮೆ ಆದೋನಿಯ ಕಡೆಗೆ ಹೊರಟರು. ಅಲ್ಲಿಗೆ ಬಂದಾಗ ಶ್ರೀ ರಾಘವೇಂದ್ರರನ್ನು ದಿವಾನ್ ವೆಂಕಣ್ಣನು ಸ್ವಾಗತಿಸಿದನು. ಹಿಂದೆ ಅನಾಥ ಬಾಲಕನಾಗಿದ್ದ ವೆಂಕಣ್ಣನೇ ಈಗ ಶ್ರೀ ರಾಘವೇಂದ್ರರ ಅನುಗ್ರಹದಿಂದ ಆದೋನಿಯ ನವಾಬರಲ್ಲಿ ದಿವಾನನಾಗಿ ಸೇರಿದ್ದನು. ದಿವಾನ್ ವೆಂಕಣ್ಣನು ಆದೋನಿಯಲ್ಲಿ ರಾಘವೇಂದ್ರರು ಇರುವವರೆಗೂ ಎಲ್ಲ ಅನುಕೂಲಗಳನ್ನೂ ಮಾಡಿಕೊಟ್ಟಿದ್ದನು. ನವಾಬನಾದ ಸೀರಿ ಮಸೂದ್‌ಖಾನ್ ಶ್ರೀ ರಾಘವೇಂದ್ರರ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಕೃತಜ್ಞತಾ ಪೂರ್ವಕವಾಗಿ ಒಂದು ಇಡೀ ಹಳ್ಳಿಯನ್ನು ದಾನವಾಗಿ ನೀಡಿದನು. ತುಂಗಭದ್ರಾ



ನದಿಯ ದಡದಲ್ಲಿರುವ ಮಂಚಾಲೆ ಎಂಬ ಗ್ರಾಮವೇ, ನವಾಬನು ದಾನವಾಗಿ ನೀಡಿದ ಗ್ರಾಮ. ಈ ಗ್ರಾಮವನ್ನು ಆರಿಸುವುದಕ್ಕೆ ಕಾರಣವಿತ್ತು. ಕೃತಯುಗದಲ್ಲಿ ಇಲ್ಲೇ ಪ್ರಹ್ಲಾದನು ಹಾಗೂ ದ್ವಾಪರಯುಗದಲ್ಲಿ ಪಾಂಡವರು ಯಜ್ಞಯಾಗಾದಿಗಳನ್ನು ಮಾಡಿದ್ದರು. ಅಷ್ಟೇ ಅಲ್ಲದೆ ಇಲ್ಲಿ ಮಂಚಾಲಮ್ಮನ ದೇವಾಲಯವೂ ಇದ್ದಿತು; ತಮ್ಮ ಹಿಂದಿನ ಅವತಾರದಲ್ಲಿ ಶ್ರೀ ರಾಘವೇಂದ್ರರು ಪ್ರಹ್ಲಾದನಾಗಿ, ಮಂಚಾಲಮ್ಮನನ್ನು ದುರ್ಗಾ ಎಂದು ಪೂಜಿಸಿದ್ದರು.

ಈ ಸಮಯಕ್ಕೆ ಶ್ರೀ ರಾಘವೇಂದ್ರರಿಗೆ ತಮ್ಮ ಈ ಭೌತಿಕ ಶರೀರವನ್ನು ತ್ಯಜಿಸುವ ಕಾಲ ಬಂದಿತೆಂದು ಭಾಸವಾಯಿತು. ತಮ್ಮ ಬೃಂದಾವನಕ್ಕೆ ಮಂಚಾಲೆಯೇ ಸರಿಯಾದ ಸ್ಥಳವೆಂದು ನಿರ್ಧರಿಸಿದರು. ಈ ಬೃಂದಾವನ ನಿರ್ಮಾಣಕ್ಕೆ ಬೇಕಾದ ಶಿಲೆಯನ್ನು ಶ್ರೀ ರಾಘವೇಂದ್ರರ ಅಪ್ಪಣೆಯಂತೆ ದಿವಾನ್ ವೆಂಕಣ್ಣನು ಮಧ್ವರ ಎಂಬ ಗ್ರಾಮದಿಂದ ತರಿಸಲು ಏರ್ಪಾಟು ಮಾಡಿದನು.

ಆಶಿಸಿದ್ದ ಮುಹೂರ್ತದಲ್ಲಿ ಶ್ರೀ ರಾಘವೇಂದ್ರರು ಜೀವಂತವಾಗಿ ಬೃಂದಾವನವನ್ನು ಹೊಕ್ಕರು. ಅದಕ್ಕೆ ಮುಂಚೆ, ತನ್ನ ಅಣ್ಣ ಗುರುರಾಜರ ಮೊಮ್ಮಗ ವೆಂಕಟಾಚಾರ್ ಎಂಬುವನಿಗೆ, ಶ್ರೀ ಯೋಗೀಂದ್ರತೀರ್ಥ ಎಂಬ ಹೆಸರನ್ನು ಕೊಟ್ಟು, ಶ್ರೀಮಠದ ಪೀಠಾಧಿಪತಿಯಾಗಿ ನಿಯಮಿಸಿದರು. ಶ್ರೀ ರಾಘವೇಂದ್ರರ ಜೀವನದ ಕೊನೆಯ ಘಳಿಗೆಯ ಕಾರ್ಯವು ೧೬೭೧ರ ಶ್ರಾವಣ ಕೃಷ್ಣ ದ್ವಿತೀಯ, ಗುರುವಾರ ನಡೆಯಿತು. ಅದನ್ನು ನೋಡಲು ದುಃಖಿತಪ್ತರಾದ ಜನಗಳು ದೂರ ಮತ್ತು ಹತ್ತಿರದ ಸ್ಥಳಗಳಿಂದ ಬಂದು ಸೇರಿದ್ದರು.

ನಿಗದಿಯಾದ ದಿನದಂದು ಶ್ರೀ ರಾಘವೇಂದ್ರರು ಮೂಲ ರಾಮನಿಗೆ ಪೂಜೆಯನ್ನು ಮಾಡಿ ತಮ್ಮ ಸುತ್ತಲಿದ್ದ ಜನಗಳನ್ನು ಉದ್ದೇಶಿಸಿ ಕೊನೆಯ ಪ್ರವಚನ ನೀಡಿದರು. ತಮ್ಮ ಭೌತಿಕ ಶರೀರವು ಕಾಣದೇ ಹೋದರೂ, ತಾವು ಬೃಂದಾವನದಲ್ಲಿ ೭೦೦ ವರ್ಷಗಳ ಕಾಲ ಇರುವುದಾಗಿಯೂ ಜನಗಳಿಗೆ ಆಶ್ವಾಸನೆ ನೀಡಿ, ಅವರನ್ನು ಅನುಗ್ರಹಿಸಿದರು. ನಂತರ ಅವರು ಶಾಂತಿಯಿಂದ ಬೃಂದಾವನವನ್ನು ಪ್ರವೇಶಿಸಿ, ತುಳಸಿ ಮಣಿಯ ಮಾಲೆಯನ್ನು ಬಲಗೈಯಲ್ಲಿ ಹಿಡಿದುಕೊಂಡು ಮಧ್ಯದಲ್ಲಿ ಕುಳಿತರು. ಸುತ್ತ ನೆರೆದಿದ್ದ ಜನಗಳು ಕಣ್ಣುಗಳಿಂದ ಕಂಬನಿಯನ್ನು ಸುರಿಸುತ್ತಿದ್ದರಂತೆ. ತುಳಸಿಮಣಿಯ ಮಾಲೆಯು ಅವರ ಕೈಯಿಂದ ಕೆಳಗೆ ಬಿದ್ದಿತು. ತಮ್ಮ ಬೃಂದಾವನದ ಸಮಾಧಿಯನ್ನು ಮುಚ್ಚಿಬಿಡಬೇಕೆಂದು ಈ ರೀತಿ ಸೂಚನೆ ನೀಡಿದರು. ಸಾವಿರಾರು ಜನ ದುಃಖದಿಂದ ನೋಡುತ್ತಿರುವಾಗ ವೆಂಕಣ್ಣನು ನೋವು ತರುವ ಈ ಕೆಲಸವನ್ನು ಮಾಡಲು ಆರಂಭಿಸಿದನು. ಇದನ್ನು ಮುಚ್ಚಿದ ನಂತರ ಶ್ರೀ ರಾಘವೇಂದ್ರರ ಭೌತಿಕ ಶರೀರ ಮಾನವರ ಕಣ್ಣಿನಿಂದ ಶಾಶ್ವತವಾಗಿ ಮರೆಯಾಯಿತು.

ಈ ಶ್ರೇಷ್ಠ ಸಂತ ಶ್ರೀ ರಾಘವೇಂದ್ರ ಸ್ವಾಮಿಗಳ ಭೌತಿಕ ಶರೀರ ಈಗ ಇಲ್ಲ. ಆದರೆ ಅವರ ಭಕ್ತರಿಗೆ ಅವರ ಚೈತನ್ಯವು ಕ್ರಿಯಾಶೀಲವಾಗಿ ಮಂಚಾಲೆಯ ಬೃಂದಾವನದಲ್ಲಿ ಇಂದಿಗೂ ಜೀವಂತವಾಗಿದೆ.

ಮಂಚಾಲೆಯು ಈಗ ಮಂತ್ರಾಲಯ ಎನ್ನುವ ಹೆಸರನ್ನು ಪಡೆದಿದೆ. ೩೨೫ ವರ್ಷಗಳಾದನಂತರವೂ ಈ ಸ್ಥಳ ಪರಮಪವಿತ್ರ ಸ್ಥಳವಾಗಿ ಕಂಗೊಳಿಸುತ್ತಿದ್ದು, ಪ್ರತಿವರ್ಷವೂ ಲಕ್ಷಾಂತರ ಆಸ್ತಿಕರನ್ನು ಆಕರ್ಷಿಸುತ್ತಿದೆ. ಶ್ರೀ ರಾಘವೇಂದ್ರ ಸ್ವಾಮಿಗಳು ಅವರ ಇಷ್ಟಾರ್ಥಗಳನ್ನು ಈಡೇರಿಸಿಕೊಡುತ್ತಾರೆ ಮತ್ತು ಸಂಕಷ್ಟಗಳನ್ನು ದೂರ ಮಾಡುತ್ತಾರೆ ಎನ್ನುವುದೇ ಜನಗಳ ನಂಬಿಕೆ. ಶ್ರೀ ರಾಘವೇಂದ್ರ ಸ್ವಾಮಿಗಳೇ ಈ ಹಿಂದೆ ತಾವು ಬೃಂದಾವನದಲ್ಲಿ ಶಾಶ್ವತವಾಗಿ ನೆಲೆಸಿ ಜನಗಳ ಕಷ್ಟನಷ್ಟಗಳನ್ನು ನಿವಾರಿಸುತ್ತೇನೆ ಎಂಬ ಆಶ್ವಾಸನೆಯನ್ನು ನೀಡಿದ್ದರಲ್ಲವೇ?

ಮಂತ್ರಾಲಯವು ಆಂಧ್ರಪ್ರದೇಶದಲ್ಲಿ ತುಂಗಭದ್ರಾ ನದಿಯ ದಡದಲ್ಲಿ ಕರ್ನಾಟಕದಲ್ಲಿರುವ ರಾಯಚೂರು ನಗರಕ್ಕೆ ೪೫ ಕಿ.ಮೀ. ದೂರದಲ್ಲಿದೆ. ಮತ್ತೊಂದು ಪಾರ್ಶ್ವದಲ್ಲಿ ೪೯ ಕಿ.ಮೀ. ದೂರದಲ್ಲಿ ಆದೋನಿಯಿದೆ. ದಕ್ಷಿಣ ಭರತದ ಪ್ರಮುಖ ನಗರಗಳಾದ ಬೆಂಗಳೂರು, ಚೆನ್ನೈ ಮತ್ತು ಹೈದರಾಬಾದ್‌ಗಳಿಂದ ಮಂತ್ರಾಲಯಕ್ಕೆ ಬಸ್ಸಿನ ಮೂಲಕ ಬರಬಹುದು. ಆಂಧ್ರಪ್ರದೇಶಕ್ಕೆ ಸೇರಿದ ಹಾಗೂ ಕರ್ನಾಟಕಕ್ಕೆ ಸೇರಿದ ಬಸ್ಸುಗಳು ಮಂತ್ರಾಲಯದಿಂದ ಕರ್ನೂಲು, ವಿಜಯವಾಡ, ನೆಲ್ಲೂರು, ಧರ್ಮಾವರಂ, ಶ್ರೀಶೈಲಂ, ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಮಂಗಳೂರು ಮತ್ತು ಬಿಜಾಪುರಗಳಿಗೆ ಹೋಗುತ್ತವೆ. ಮಂತ್ರಾಲಯ ರೋಡ್ ಎನ್ನುವ ರೈಲು ನಿಲ್ದಾಣದಿಂದ ಮಂತ್ರಾಲಯಕ್ಕೆ (ರಾಯಚೂರಿನ ನಂತರ ಚೆನ್ನೈ, ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿ ಸಿಕ್ಕುವ) ವ್ಯವಸ್ಥಿತ ರೈಲು ಸಂಪರ್ಕವಿದೆ. ಬಹಳ ಅನುಕೂಲಕರವಾದ ಮಾರ್ಗವೆಂದರೆ ಮಂತ್ರಾಲಯಂ ರೋಡ್ ಸ್ಟೇಷನ್ನಿನಲ್ಲಿ ಇಳಿದು ೧೬ ಕಿ.ಮೀ. ದೂರದಲ್ಲಿರುವ ಮಂತ್ರಾಲಯಕ್ಕೆ ಬಸ್ಸಿನಲ್ಲಿ ಹೋಗುವುದು.

ಮಂತ್ರಾಲಯದಲ್ಲಿ ಅನೇಕ ವಸತಿ ಗೃಹಗಳಿವೆ. ಅವುಗಳಲ್ಲಿ ಜನಗಳು ತಂಗಬಹುದು. ಕೆಲವು ಉತ್ತಮ ಮಟ್ಟದ್ದಾಗಿದ್ದು, ಹವಾನಿಯಂತ್ರಿತ ಕೊಠಡಿಗಳು ಹಾಗೂ ಟಿವಿ ಸಹ ಇವೆ. ಆಂಧ್ರಪ್ರದೇಶದ ಟೂರಿಸಂ ವಿಭಾಗಕ್ಕೆ ಸೇರಿದ ಒಂದು ಅತಿಥಿ ಗೃಹವೂ ಅಲ್ಲಿದೆ. ಇತ್ತೀಚೆಗೆ ಭಕ್ತರ ಅನುಕೂಲಕ್ಕಾಗಿ ರಾಘವೇಂದ್ರ ಸ್ವಾಮಿಗಳ ಮಠದವರೇ ಒಳ್ಳೆಯ ವಸತಿ ಸಮುಚ್ಚಯಗಳನ್ನು ನಿರ್ಮಿಸಿದ್ದಾರೆ.

ಮಂತ್ರಾಲಯಕ್ಕೆ ಹೋಗುವವರು ಅಲ್ಲಿ ಯಾವ ರೀತಿ ಆಧುನಿಕತೆ ಬೆಳೆಯುತ್ತಿದೆ ಎನ್ನುವುದನ್ನು ಗಮನಿಸಬಹುದು. ಬಸ್ ಡಿಪೋದಿಂದ ರಾಘವೇಂದ್ರ ಸ್ವಾಮಿಗಳ ಬೃಂದಾವನವನ್ನು ಸೇರುವ ಪ್ರಮುಖ ರಸ್ತೆಯ ಇಕ್ಕೆಲಗಳಲ್ಲಿಯೂ ಹತ್ತಾರು ಅಂಗಡಿಗಳಿದ್ದು, ಮಿನರಲ್ ವಾಟರ್, ಬಗೆಬಗೆಯ ಐಸ್‌ಕ್ರೀಂ, ಫೀಲ್ಮ್ ರೋಲ್ಸ್, ಕೆಸೆಟ್ಸ್‌ಗಳನ್ನು ಮಾರುತ್ತವೆ. ಹತ್ತಾರು ಎಸ್‌ಟಿಡಿ ಮತ್ತು ಐಎಸ್‌ಡಿ ಬೂತ್‌ಗಳಿವೆ. 'ಊಟ ಸಿದ್ಧವಾಗಿದೆ', 'ತಿಂಡಿ ಸಿದ್ಧವಾಗಿದೆ' ಎಂಬ ಬೋರ್ಡುಗಳನ್ನು ಹೊತ್ತ ಹತ್ತಾರು ಹೋಟೆಲ್‌ಗಳೂ ಇವೆ. ಒಟ್ಟಿನಲ್ಲಿ ಮಂತ್ರಾಲಯವು ಇಂದಿನ ಗುಂಪುಗುಂಪಾಗಿ ಬರುವ ಸಂದರ್ಶಕರನ್ನು ಸ್ವಾಗತಿಸಲು ತಯಾರಾಗಿದೆ.



ಬೃಂದಾವನದಿಂದ ಸ್ವಲ್ಪ ದೂರದಲ್ಲಿ ತುಂಗಭದ್ರಾ ನದಿಯು ಗಂಭೀರವಾಗಿ ಕಲ್ಲಿನ ತಳದ ಮೇಲೆ ಹರಿಯುತ್ತಿದೆ. ಪಾತ್ರವು ಅಗಲವಾಗಿರುವ ಕಡೆ ಅಲ್ಲಲ್ಲಿ ಕಲ್ಲುಬಂಡೆಗಳ ಸಣ್ಣ ದ್ವೀಪಗಳು ಕಾಣಬರುತ್ತವೆ. ಸಣ್ಣ ದೋಣಿಗಳು ಜನರನ್ನು ಆಚೆ ದಡಕ್ಕೆ ಸಾಗಿಸುವ ವ್ಯವಸ್ಥೆಯೂ ಇದೆ.

ಮಂತ್ರಾಲಯದ ಅತ್ಯಂತ ಪ್ರಮುಖ ಆಕರ್ಷಣೆ ಎಂದರೆ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ. ಭಕ್ತರು ಬೃಂದಾವನ ಸಮುಚ್ಚಯವನ್ನು ಪ್ರವೇಶಿಸುವುದಕ್ಕೆ ಮುಂಚೆ ಪ್ರಮುಖ ಹೆಬ್ಬಾಗಿಲಿನ ಬಲಭಾಗದಲ್ಲಿರುವ ಮಂಚಾಲಮ್ಮ ಅಥವಾ ಮಂತ್ರಾಲಯಾಂಬಿಕಾ ದೇವಾಲಯಕ್ಕೆ ಹೋಗುತ್ತಾರೆ. ಬೃಂದಾವನವು ಒಂದು ಆಯತಾಕಾರದ ಶಿಲಾರಚನೆ. ಧರ್ಮದರ್ಶನ ಸಮಯದಲ್ಲಿ—ಅಂದರೆ ಬೆಳಿಗ್ಗೆ ೬ರಿಂದ ೮; ೧೦ರಿಂದ ಮಧ್ಯಾಹ್ನ ೨, ಮತ್ತು ಸಂಜೆ ೪ರಿಂದ ೯.೩೦ರವರೆಗೆ—ಬೃಂದಾವನವನ್ನು ಸಂದರ್ಶಿಸಬಹುದು. ಹೊರ ಅಂಕಣದಲ್ಲಿ ನಾಲ್ಕಾರು ಫಲಕಗಳನ್ನು ಹಾಕಿ ಇಲ್ಲಿನ ರೀತಿನೀತಿಗಳನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತಾರೆ. ಉದಾಹರಣೆಗೆ, ಸ್ತ್ರೀಯರು ಅಂಗಪ್ರದಕ್ಷಿಣೆ ಮತ್ತು ಸಾಷ್ಟಾಂಗ ನಮಸ್ಕಾರವನ್ನು ಮಾಡಬಾರದೆಂದು ತಿಳಿಸುತ್ತದೆ. ಮತ್ತೊಂದು ಫಲಕ ಏಕಾದಶಿ ದಿನ ಯಾವ ಪೂಜೆಗಳು, ಸೇವೆಗಳನ್ನೂ ಮಾಡುವುದಿಲ್ಲ ಹಾಗೂ ಪ್ರಸಾದವೂ ದೊರಕುವುದಿಲ್ಲವೆಂದು ಸೂಚಿಸುತ್ತದೆ. ಪಕ್ಕದಲ್ಲಿರುವ ಒಂದು ಸಣ್ಣ ಬಾಗಿಲಿನ ಮೂಲಕ ಹೋದರೆ ಹಿಂದಿನ ಯತಿವರ್ಯರ ಬೃಂದಾವನಗಳು ಕಾಣಬರುತ್ತವೆ. ಅದನ್ನು ದಾಟಿದರೆ ಭೋಜನಶಾಲೆಗೆ ಪ್ರವೇಶ.

ಇತರ ಸಂತರ ವಿಷಯದಲ್ಲಿರುವಂತೆ ಶ್ರೀ ರಾಘವೇಂದ್ರ ಸ್ವಾಮಿಗಳಿಗೂ ಸಂಬಂಧಿಸಿದಂತೆ ಅನೇಕ ಪವಾಡಗಳು ದಾಖಲಾಗಿವೆ. ಅವರು ಬೃಂದಾವನಸ್ಥರಾದ ಮೇಲೂ ಹತ್ತಾರು ಪವಾಡಗಳನ್ನು ಮಾಡುತ್ತಿರುವರೆಂದು, ತಮ್ಮ ವೈಯಕ್ತಿಕ ಅನುಭವದಿಂದ ಅನೇಕರು ಹೇಳುತ್ತಾರೆ. ಅಂದರೆ ಏಕಾಗ್ರಚಿತ್ತದಿಂದ ಪೂರ್ಣ ನಂಬಿಕೆಯಿಂದ ಪ್ರಾರ್ಥನೆ ಸಲ್ಲಿಸಿದರೆ ಶ್ರೀ ರಾಘವೇಂದ್ರರು ಅನುಗ್ರಹ ಮಾಡುತ್ತಾರೆ ಎಂಬುದು ಭಕ್ತರ ನಂಬಿಕೆ.

ಮಠದವರು ನೀಡಿದ ಒಂದು ಕರಪತ್ರದಲ್ಲಿ ೩೫ ವಿವಿಧ ರೀತಿಯ ಸೇವೆಗಳನ್ನು ಪಟ್ಟಿ ಮಾಡಿದ್ದಾರೆ. ಒಂದು ಮಂಗಳಾರತಿಯಿಂದ ಹಿಡಿದು ಚಿನ್ನದ ರಥದ ಸೇವೆಯವರೆಗೆ ನಡೆಯುವ ಎಲ್ಲ ಸೇವೆಗಳಿಗೆ ತಗಲುವ ವೆಚ್ಚವನ್ನು ಇಲ್ಲಿ

ಪಟ್ಟಿ ಮಾಡಿದ್ದಾರೆ. ಇವುಗಳ ಜೊತೆಗೆ ಹದಿನೆಂಟು ನಿಗದಿತ ಪುದುವಟ್ಟು ಸೇವೆಗಳನ್ನೂ ಪಟ್ಟಿ ಮಾಡಿದ್ದಾರೆ. ಇವುಗಳಲ್ಲಿ ಯಾವುದನ್ನಾದರೂ ಭಕ್ತರು ನೆರವೇರಿಸಬಹುದು, ಇಲ್ಲಿನ ಸೇವೆಗಳು ವೈಯಕ್ತಿಕವಾಗಿದ್ದು, ಶ್ರೀ ರಾಘವೇಂದ್ರ ಸ್ತೋತ್ರಗಳ ಪಠಣ ಇಲ್ಲವೇ ಸಹಸ್ರನಾಮಗಳೂ ಆಗಬಹುದು.

ಆದರೆ ಮುಖ್ಯವಾದುದೆಂದರೆ, ಯಾವ ಸೇವೆಯನ್ನೇ ಮಾಡಿಸಲಿ, ಅದನ್ನು ಪೂರ್ಣ ಭಕ್ತಿ ಮತ್ತು ನಂಬಿಕೆಗಳಿಂದ ಮಾಡಿಸಬೇಕು. ಇಲ್ಲದಿದ್ದರೆ ಯಾವ ಪೂಜೆಯೂ ಪೂರ್ಣಗೊಳ್ಳುವುದಿಲ್ಲ. ಸರಿಯಾಗಿ ಹೇಳಿರುವಂತೆ ಯಾವ ಪೂಜೆಯನ್ನಾದರೂ ನಂಬಿಕೆ ಇಲ್ಲದೆ ಮಾಡಿದರೆ ಅದು ಅರ್ಥಹೀನವಾಗುತ್ತದೆ. ಆದುದರಿಂದ ಮುಖ್ಯವಾಗಿ ಬೇಕಾದದ್ದು ಶ್ರದ್ಧೆ.

* * * *



## ೨. ಶೇಗಾಂವಿನ ಶ್ರೀ ಗಜಾನನ ಮಹಾರಾಜ್

ನಾವು ಸಂತರು ಎಂದು ಗುರುತಿಸಿದಾಗ, ಇವರಲ್ಲಿ ಎರಡು ರೀತಿಯನ್ನು ಗುರುತಿಸಬಹುದು. ಅನುಗ್ರಹ ಹೊಂದಿದ ಕೆಲವರು ತಮ್ಮ ಸಾಧನೆಗಳಿಂದ ಸಂತರಾದವರು. ಇನ್ನೊಂದು ಗುಂಪಿನವರು ಭೂಮಿಯ ಮೇಲೆ ಜನಿಸಿದಾಗಿನ ಸಮಯದಿಂದ ದೇವರಿಗೆ ಸಮನಾದ ಗುಣಗಳನ್ನು ಮತ್ತು ಲಕ್ಷಣಗಳನ್ನು ಹೊಂದಿದವರು. ಈ ಎರಡನೆಯ ಗುಂಪಿನವರನ್ನು ಸಿದ್ಧರೆಂದು ಕರೆಯುತ್ತೇವೆ. ಅವರು ತಮ್ಮ ಈ ಜನ್ಮದಲ್ಲಿ ಸಾಧಕನ ಹಂತವನ್ನು ಹಾದು ಹೋಗಬೇಕಿಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ಶ್ರೀ ಶಿರಡಿ ಸಾಯಿಬಾಬ. ಈಗ ಇವರ ಪ್ರಸಿದ್ಧಿ ಇಡೀ ಭಾರತಾದ್ಯಂತ ಹರಡಿದೆ. ಈ ರೀತಿಯ ಇನ್ನೊಬ್ಬ ದೇವಾಂಶ ಸಂಭೂತರೆಂದರೆ ಶ್ರೀ ಗಜಾನನ ಮಹಾರಾಜ್ ಅವರು. ಇವರು ಮಹಾರಾಷ್ಟ್ರದ ವಿದರ್ಭದ ಶೇಗಾಂವ್‌ನಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಜನಿಸಿದರು. ಶ್ರೀ ಗಜಾನನ ಮಹಾರಾಜರ ಜೀವನ ಚರಿತ್ರೆಯ ವಿವರಗಳು ಶ್ರೀ ದಾಸ್ ಗಣು ರಚಿಸಿದ 'ಶ್ರೀ ಗಜಾನನ್ ವಿಜಯ್' ಎಂಬ ಪ್ರಖ್ಯಾತ ಗ್ರಂಥದಲ್ಲಿ ದೊರೆಯುತ್ತವೆ.

ಈ ಕಥೆಯು ಆರಂಭವಾಗುವುದು ೧೮೭೮ರ ಫೆಬ್ರವರಿ ೨೩ರಂದು; ಅಂದರೆ ಶಕವರ್ಷ ೧೮೦೦ರ ಮಾಘ ಸಪ್ತಮಿಯಂದು. ಆ ದಿನ ಶೇಗಾಂವ್ ನಿವಾಸಿ ದೇವಿದಾಸ್ ಮನೆಯಲ್ಲಿ ಒಂದು ಔತಣವನ್ನಿಟ್ಟುಕೊಂಡು, ಹೆಚ್ಚಿನ ಸಂಖ್ಯೆಯ ಅತಿಥಿಗಳನ್ನು ಆಹ್ವಾನಿಸಿದ್ದನು. ಒಂದು ಪಂಕ್ತಿಯ ಊಟವಾದ ಮೇಲೆ ಇನ್ನೊಂದು ಪಂಕ್ತಿಯ ಊಟ ಆರಂಭವಾಗುತ್ತಿತ್ತು. ಇವರು ಊಟ ಮಾಡಿದ ಎಲೆಗಳನ್ನು ದೇವಿದಾಸನ ಮನೆ ಮುಂಭಾಗದಲ್ಲಿದ್ದ ಕಸ ಹಾಕುವ ಜಾಗದಲ್ಲಿ ಹಾಕುತ್ತಿದ್ದರು. ಒಳಗಡೆ ಭೂರಿ ಭೋಜನವು ನಡೆಯುತ್ತಿದ್ದರೆ, ಹೊರಗಡೆ ಎಂಜಲೆಲೆಗಳನ್ನು ಎಸೆದಿದ್ದ ಜಾಗದಲ್ಲಿ ಹರಕಲು ಬಟ್ಟೆಯನ್ನು ಹಾಕಿಕೊಂಡಿದ್ದ ಮನುಷ್ಯನು ಎಲೆಯಲ್ಲಿ ಮಿಕ್ಕಿದ್ದ ಆಹಾರವನ್ನು ತಿನ್ನುತ್ತಿದ್ದನು. ಆ ಕಡೆ ಓಡಾಡುತ್ತಿದ್ದ ಜನಗಳು ಈ ವಿಚಿತ್ರ ದೃಶ್ಯವನ್ನು ನೋಡಿ, ಯಾವನೋ ಹುಚ್ಚನು ಎಂಜಲು ತಿನ್ನುತ್ತಿರಬೇಕೆಂದು ಭಾವಿಸಿ, ಅವನ ಕಡೆ ತಿರುಗಿ ನೋಡದೆ ಮುಂದೆ ಸಾಗುತ್ತಿದ್ದರು. ಆದರೆ ಇಬ್ಬರು ಮಾತ್ರ ವಿಭಿನ್ನವಾಗಿ ಯೋಚಿಸಿದರು.

ಈ ಇಬ್ಬರಲ್ಲಿ ಒಬ್ಬರು ವೆಂಕಟ್‌ಲಾಲ್ ಅಗರ್‌ವಾಲ್; ಮತ್ತೊಬ್ಬರು ದಾಮೋದರ್ ಕುಲಕರ್ಣಿ. ಯಾವ ಆತಂಕವೂ ಇಲ್ಲದೆ, ಶಾಂತವಾಗಿದ್ದ ಆ ಮನುಷ್ಯನನ್ನು ನೋಡಿ ಇವನು ನಿಜವಾಗಿಯೂ ಹುಚ್ಚನೇ ಎಂಬ ಸಂಶಯ ಅವರಿಗೆ ಬಂದಿತು. ಕುತೂಹಲದಿಂದ ವೆಂಕಟ್‌ಲಾಲನು ದೇವೀದಾಸನ ಮನೆಯಿಂದ ಊಟವನ್ನು ಬಡಿಸಿಕೊಂಡು ಬಂದು ಆ ಮನುಷ್ಯನಿಗೆ ನೀಡಿದನು. ಅದನ್ನೂ ಯಾವ ಭೇದವೂ ಇಲ್ಲದೆ ಅವನು ತಿನ್ನಲು ಆರಂಭಿಸಿದನು. ತಿಂದಾದ ನಂತರ ಅವನು ದಾಮೋದರನು ನೀಡಿದ ಶುದ್ಧ ನೀರನ್ನು ಕುಡಿಯದೆ ಪಕ್ಕದಲ್ಲಿದ್ದ ಹೊಂಡದ ಕೊಳೆ ನೀರನ್ನು ಕುಡಿದನು. ಇದನ್ನು ಗಮನಿಸಿದ ಈ ಇಬ್ಬರೂ ಇವನು ಯೋಗಿಯೇ ಹೊರತು ಹುಚ್ಚನಲ್ಲವೆಂದು ತೀರ್ಮಾನಿಸಿದರು. ಈ ರೀತಿ ಇವರು ಯೋಚಿಸುತ್ತಿದ್ದಾಗ ಅವನು ಯಾರಿಗೂ ಕಾಣದಂತೆ ಓಡಿಹೋದನು.

ಇದರಿಂದ ಪ್ರಭಾವಿತನಾದ ವೆಂಕಟ್‌ಲಾಲನಿಗೆ ಏನಾದರೂ ಮಾಡಿ ಈ ಯೋಗಿಯನ್ನು ಮತ್ತೆ ನೋಡಬೇಕೆಂಬ ಆಸೆ ಹೆಚ್ಚಾಯಿತು. ತನ್ನ ತಂದೆಗೆ ಈ ವಿಷಯವನ್ನು ತಿಳಿಸಲು ಧೈರ್ಯವಿಲ್ಲದೆ, ತನಗೆ ಪರಿಚಿತರಾಗಿದ್ದ ರಾಮಾಜಿಪಂತ್ ದೇಶಮುಖಿ ಎಂಬ ಹಿರಿಯರಿಗೆ ಹೇಳಿದನು. ನಾಲ್ಕು ದಿನಗಳ ನಂತರ, ಮಹದೇವ ದೇವಾಲಯದಲ್ಲಿ ಗೋವಿಂದಬುವ ತಕಲೀಕರ್ ಎಂಬುವವರು ನಡೆಸಿಕೊಡುತ್ತಿದ್ದ ಭಜನೆಯ ಕಾರ್ಯಕ್ರಮದಲ್ಲಿ, ಇದನ್ನು ಪೀತಾಂಬರ್ ಎನ್ನುವ ದರ್ಜಿಗೆ ತಿಳಿಸಿದನು. ಆಗ ಈ ಇಬ್ಬರೂ ಇದೇ ಮನುಷ್ಯನು ದೇವಾಲಯದಲ್ಲಿ ಕೀರ್ತನೆಯನ್ನು ಕೇಳುತ್ತ ಕುಳಿತಿದ್ದುದನ್ನು ನೋಡಿದರು. ಆ ಮನುಷ್ಯನು ವೆಂಕಟಲಾಲನನ್ನು ಕರೆದು ಒಂದು ಚೂರು ಬ್ರೆಡ್ ತರುವಂತೆಯೂ ಮತ್ತು ಪೀತಾಂಬರನನ್ನು ಕರೆದು, ಹತ್ತಿರದಲ್ಲಿದ್ದ ನಾಲೆಯಿಂದ ಕುಡಿಯಲು ನೀರು ತರುವಂತೆ ಹೇಳಿದನು. ನಾಲೆಯಲ್ಲಿ ನೀರಿಲ್ಲವೆಂದು ಪೀತಾಂಬರನು ಹೇಳಿದನು. ಆಗ ಆ ಮನುಷ್ಯನು ಹೇಳಿದಷ್ಟು ಮಾಡು ಎಂದು ಮತ್ತೆ ಆಜ್ಞಾಪಿಸಿದನು. ಪೀತಾಂಬರನು ಪಾತ್ರೆಯನ್ನು ನಾಲೆಯಲ್ಲಿ ಇಟ್ಟಾಗ, ಅದರಲ್ಲಿ ಶುಭ್ರವಾದ ನೀರು ಪೂರ್ತಿ ತುಂಬಿಕೊಂಡದ್ದು ನೋಡಿ ಅವನಿಗೆ ಆಶ್ಚರ್ಯ ಉಂಟಾಯಿತು. ಇವನು ನಿಜವಾಗಿಯೂ ಸಾಧಾರಣ ಮನುಷ್ಯನಲ್ಲ, ಆದರೆ ಮಹಾಯೋಗಿ ಎಂದು ವೆಂಕಟ್‌ಲಾಲನಿಗೆ ತಿಳಿಯಿತು. ಕೂಡಲೆ ಮನೆಗೆ ಹೋಗಿ ಈ ಯೋಗಿಯನ್ನು ಮನೆಗೆ ಕರೆದುಕೊಂಡು ಬರಲು ತನ್ನ ತಂದೆಯ ಅಪ್ಪಣೆ ಕೇಳಿದನು. ತಂದೆಯು ಇದಕ್ಕೆ ಒಪ್ಪಿಕೊಂಡನು. ನಾಲ್ಕು ದಿನಗಳ ನಂತರ ಅವನು ಮತ್ತೆ ಸಿಕ್ಕಿದಾಗ ಅವನನ್ನು ಮನೆಗೆ ಕರೆದುಕೊಂಡು ಹೋದನು. ಜನಗಳು ಗುಂಪುಗುಂಪಾಗಿ ಇವನನ್ನು ನೋಡಲು ಬರಲು ಆರಂಭಿಸಿದರು. ಇವನು ಭಜನೆಯ ರೂಪದಲ್ಲಿ 'ಗಣ್ ಗಣ್ ಗಣತ್ ಬೋಟೆ' ಎಂಬ ಪದಗಳನ್ನು ಭಜನೆಯ ರೂಪದಲ್ಲಿ ಹೇಳುತ್ತಿದ್ದನು. ಆದುದರಿಂದ ಇವನನ್ನು 'ಗಜಾನನ ಮಹಾರಾಜ್' ಎಂದು ಕರೆಯಲು ಆರಂಭಿಸಿದರು.



ಇವನ ಪ್ರಸಿದ್ಧಿ ಹೆಚ್ಚಿದಂತೆ ದೂರದಿಂದ ಜನಗಳು ಶೇಗಾಂವ್‌ಗೆ ಬರಲು ಆರಂಭಿಸಿದರು. ಒಬ್ಬ ಸನ್ಯಾಸಿಯು ತಾನು ಕಾಶಿಯಲ್ಲಿದ್ದಾಗ ಈ ಮನುಷ್ಯನು ಗಾಂಜವನ್ನು ಅವನಿಗೆ ಸಮರ್ಪಿಸಬೇಕೆಂಬ ವಿಚಿತ್ರ ವ್ರತವನ್ನು ಕೈಗೊಂಡನು. ಅವನು ಶೇಂಗಾವ್‌ಗೆ ಬಂದು ಮನೆಯಲ್ಲಿ ಸೇರುತ್ತಿದ್ದ ಜನಗಳ ಗುಂಪಿನಲ್ಲಿ ಕುಳಿತಿದ್ದು ತನ್ನ ಗಾಂಜದ ವಿಷಯವನ್ನು ಹೇಳಲು ಧೈರ್ಯವಿಲ್ಲದೆ ಸುಮ್ಮನಿರುತ್ತಿದ್ದನು. ಆದರೆ ಗಜಾನನ ಮಹಾರಾಜನಿಗೆ ಈ ವಿಷಯ ತಿಳಿಯಿತು. ಅವನನ್ನು ಹತ್ತಿರಕ್ಕೆ ಕರೆದು ಅವನು ಕೊಡಬೇಕೆಂದಿದ್ದ ಗಾಂಜದ ಹುಕ್ಕವನ್ನು ಕೊಡುವಂತೆ ಕೇಳಿದನು. ಅಂದಿನಿಂದ ಗಜಾನನ ಮಹಾರಾಜನು ಗಾಂಜ ಸೇದುವುದನ್ನು ಅಭ್ಯಾಸ ಮಾಡಿಕೊಂಡನು. ಹೀಗೆ ಭಕ್ತರ ಕೋರಿಕೆಯನ್ನು ತೀರಿಸುವುದಕ್ಕಾಗಿ ನಿಜವಾದ ಸಂತನು ಏನನ್ನುಬೇಕಾದರೂ ಮಾಡುತ್ತಾರೆ. ಆದರೆ ಕೋರಿಕೆಯ ಹೃದಯದಿಂದ ಹೊರಹೊಮಿದ್ದು ಅದರಲ್ಲಿ ನಿಜವಾದ ಭಕ್ತಿ ಇರಬೇಕು, ಅಷ್ಟೆ.

ಆದರೆ ಅಂತಹ ಸಂತನು ಬುದ್ಧಿಯನ್ನು ಕಲಿಸಲು ಹಾಗೂ ತಪ್ಪನ್ನು ತೋರಿಸಲು ತೀರ ಕಠಿಣವಾಗಿಯೂ ವರ್ತಿಸಬಲ್ಲನು ಎಂಬುದನ್ನು ಇವರು ಅಕ್ಕಸಾಲಿಯೊಬ್ಬನ ವಿಷಯದಲ್ಲಿ ತೋರಿಸಿಕೊಟ್ಟರು. ಜಾನಕಿರಾಮನೆಂಬ ಅಕ್ಕಸಾಲಿಯು, ಇವರು ಹುಕ್ಕಾಗೆ ಕೆಂಡ ಬೇಕೆಂದು ಕೇಳಿದಾಗ ಅದನ್ನು ಕೊಡದೆ ತೀರ ಹೀನಾಯವಾಗಿ ಇವರನ್ನು ನಿಂದಿಸಿದನು. ಅಂದು ಹಬ್ಬದ ದಿನವಾದುದರಿಂದ ಅಕ್ಕಸಾಲಿ ಜಾನಕಿರಾಮನು ಸ್ನೇಹಿತರನ್ನು ಭೋಜನಕ್ಕೆ ಕರೆದಿದ್ದನು. ಅವರಿಗೆ ವಿಶೇಷ ತಿಂಡಿಯನ್ನು ಬಡಿಸಿದಾಗ, ಅದು ಹುಳಗಳಿಂದ ಕೂಡಿದ್ದಿತು. ಇದು ಗಜಾನನ ಮಹಾರಾಜರು ತನಗೆ ನೀಡಿದ ಶಾಪದ ಫಲವಿದೆಂದು ತಿಳಿದು, ಕ್ಷಮಾಪಣೆಯನ್ನು ಕೇಳಿದನು. ಅವನ ಪಶ್ಚಾತ್ತಾಪವನ್ನು ಒಪ್ಪಿಕೊಂಡು ಗಜಾನನ ಮಹಾರಾಜರು, ಜಾನಕಿರಾಮನನ್ನು ಮನೆಗೆ ಹೋಗುವಂತೆ ಹೇಳಿದರು. ಅಲ್ಲಿ ಹೋಗಿ ನೋಡಿದಾಗ ವಿಶೇಷ ತಿಂಡಿಯಲ್ಲಿ ಕಂಡುಬಂದಿದ್ದ ಹುಳುಗಳು ಪವಾಡ ರೀತಿಯಲ್ಲಿ ಮಾಯವಾಗಿದ್ದವು.

ಇದ್ದಕ್ಕಿದ್ದಂತೆ ಗಜಾನನ ಮಹಾರಾಜರು, ಶೇಗಾಂವ್ ಬಿಟ್ಟು ಇತರ ಹತ್ತಿರದ ಜಾಗಗಳಿಗೆ ಹೊರಟು ಹೋಗುತ್ತಿದ್ದರು. ಒಂದು ಬೇಸಿಗೆಯ ದಿನ ಅವರು ಅಕೋಲಿ ಎಂಬ ಗ್ರಾಮಕ್ಕೆ ಬಂದರು. ಅಲ್ಲಿ ಒಬ್ಬ ರೈತನು ಹೊಲವನ್ನು ಉಳುತ್ತಿದ್ದನು. ಅವನನ್ನು ಕುಡಿಯಲು ನೀರನ್ನು ಕೊಡುವಂತೆ ಇವರು ಕೇಳಿದರು. ಇಲ್ಲಿ ನೀರು ಸುಲಭವಾಗಿ ದೊರೆಯುತ್ತಿರಲಿಲ್ಲವಾದುದರಿಂದ ಭಾಸ್ಕರನೆಂಬ ಈ ರೈತನು, ಒಂದು ಮಡಿಕೆಯಲ್ಲಿ ನೀರನ್ನು ತಂದು ಅದು ಯಾರಿಗೂ ಕಾಣಿಸದಂತೆ ಒಂದು ಪೊದೆಯಲ್ಲಿ

ಮುಚ್ಚಿಟ್ಟಿದ್ದನು. ಆದರೆ ಈ ಸಂತನಿಗೆ ಕೊಡಲು ನಿರಾಕರಿಸಿದನು. ಸಂತನು ಅಲ್ಲಿದ್ದ ಬಾವಿಯ ಕಡೆಗೆ ಹೋಗಲು ಆರಂಭಿಸಿದನು. ಆಗ ಭಾಸ್ಕರನು ಅಲ್ಲಿಗೆ ಹೋಗುವುದು ಉಪಯೋಗವಿಲ್ಲ. ಏಕೆಂದರೆ ಅಲ್ಲಿ ನೀರು ಬತ್ತಿಹೋಗಿ ಎಷ್ಟೋ ವರ್ಷಗಳಾದವು ಎಂದನು. ಗಜಾನನ ಮಹಾರಾಜರು ಆ ಬಾವಿಯ ಹತ್ತಿರ ಬಂದು, ಪಕ್ಕದಲ್ಲಿದ್ದ ಒಂದು ಕಲ್ಲುಬಂಡೆಯ ಮೇಲೆ ಕುಳಿತು, ಇಲ್ಲಿ ನೀರು ಬರುವಂತೆ ಅನುಗ್ರಹಿಸು ಎಂದು ದೇವರನ್ನು ಪ್ರಾರ್ಥಿಸಿದನು. ಕೂಡಲೆ ಬುಗ್ಗೆಯಂತೆ ಸಿಹಿಯಾದ ಕುಡಿಯುವ ನೀರು ಮೇಲೆ ಬಂದಿತು. ಪಶ್ಚಾತ್ತಾಪದಿಂದ ಕೊರಗಿದ ಭಾಸ್ಕರನು ಅವರಿಗೆ ನಮಸ್ಕರಿಸಿ ತನ್ನ ತಪ್ಪನ್ನು ಮನ್ನಿಸಬೇಕೆಂದು ಪ್ರಾರ್ಥಿಸಿಕೊಂಡನು. ಮತ್ತು ಅವರ ಶಿಷ್ಯನಾದನು. ಗಜಾನನ ಮಹಾರಾಜರು ಶೇಗಾಂವ್‌ಗೆ ವಾಪಸ್ ಹೊರಟಾಗ, ಭಾಸ್ಕರನು ಅವರ ಜೊತೆಯಲ್ಲಿಯೇ ಹೋದನು. ಒಂದೇ ಸ್ಥಳದಲ್ಲಿ ಹೆಚ್ಚು ಕಾಲ ಇರಲು ಇಚ್ಛಿಪಡದ ಗಜಾನನ ಮಹಾರಾಜರು ವೆಂಕಟಲಾಲನ ಮನೆಯನ್ನು ತ್ಯಜಿಸಿ ಮಾರುತಿ ದೇವಾಲಯಕ್ಕೆ ಹೋದರು.

ಒಮ್ಮೆ ಗಜಾನನ ಮಹಾರಾಜರು ಕೃಷ್ಣ ಪಾಟೀಲ್ ಎಂಬುವವರಿಗೆ ಸೇರಿದ್ದ ತೋಟದ ಮನೆಯಲ್ಲಿದ್ದ ಶಿವ ದೇವಾಲಯದಲ್ಲಿದ್ದಾಗ, ರಾಮೇಶ್ವರಕ್ಕೆ ಯಾತ್ರೆಗಾಗಿ ಹೋಗುತ್ತಿದ್ದ ಸನ್ಯಾಸಿಗಳ ಗುಂಪೊಂದು ಅವರನ್ನು ನೋಡಲು ಅಲ್ಲಿ ಬಂದಿತು. ಅವರ ನೇತಾರ ಬ್ರಹ್ಮಗಿರಿಗೆ ತನ್ನ ವೇದಾಂತ ಜ್ಞಾನದ ಮೇಲೆ ತುಂಬ ಅಹಂಕಾರವಿತ್ತು. ಭಗವದ್ಗೀತೆಯಲ್ಲಿರುವ ಒಂದು ಶ್ಲೋಕದ ಮೇಲೆ ಪ್ರವಚನ ನೀಡುತ್ತಿದ್ದನು. ಆತ್ಮನಿಗೆ ಯಾವ ಆಯುಧಗಳೂ ಹಾನಿ ಉಂಟುಮಾಡುವುದಿಲ್ಲ; ವಾಯುವು ಅವನನ್ನು ಒಣಗಿಸುವುದಿಲ್ಲ; ನೀರು ಅವನನ್ನು ತೋಯಿಸುವುದಿಲ್ಲ ಮತ್ತು ಬೆಂಕಿಯು ಅವನನ್ನು ಸುಡುವುದಿಲ್ಲ ಎಂಬ ಭಾಗವನ್ನು ವಿವರಿಸುತ್ತಿದ್ದನು. ಗಜಾನನ ಮಹಾರಾಜರು ಮರದ ಮಂಚದ ಮೇಲೆ ಕುಳಿತು ಹುಕ್ಕ ಸೇದುತ್ತ ಈ ಪ್ರವಚನ ಕೇಳುತ್ತಿದ್ದರು. ಇದ್ದಕ್ಕಿದ್ದಂತೆ ಹುಕ್ಕದಿಂದ ಒಂದು ಕಿಡಿಯು ಮಂಚದ ಮೇಲೆ ಬಿದ್ದು, ಬೆಂಕಿ ಹತ್ತಿಕೊಂಡಿತು. ಗಜಾನನ ಮಹಾರಾಜರು ಶಾಂತವಾಗಿದ್ದರು. ಬ್ರಹ್ಮಗಿರಿಯನ್ನು ಹಿಡಿದುಕೊಂಡು ಬಂದು ಈ ಉರಿಯುತ್ತಿರುವ ಮಂಚದ ಮೇಲೆ ಕೂರಿಸು; ಇದರಿಂದ ಅವನು ಮಾಡುತ್ತಿದ್ದ ಪ್ರವಚನವನ್ನು ಪ್ರಾಯೋಗಿಕವಾಗಿ ಮಾಡಿ ತೋರಿಸಬಹುದು ಎಂದು ಭಾಸ್ಕರನಿಗೆ ಹೇಳಿದರು. ಬ್ರಹ್ಮಗಿರಿಯು ಭಯಭೀತನಾಗಿ ತನ್ನನ್ನು ಕಾಪಾಡಬೇಕೆಂದು ಗಜಾನನ ಮಹಾರಾಜರನ್ನು ಪ್ರಾರ್ಥಿಸಲು ಆರಂಭಿಸಿದನು. ಎಲ್ಲ ಜನಗಳೂ ದಿಕ್ಕಾಪಾಲಾಗಿ ಓಡಿಹೋದರು. ಯಾರೋ ಭಕ್ತರು ಗಜಾನನ ಮಹಾರಾಜರನ್ನು ಉರಿಯುತ್ತಿದ್ದ ಮಂಚದಿಂದ ಎಳೆದರು. ಇದಾದನಂತರ ಮಂಚವು ಉರಿದು ಬೂದಿಯಾಯಿತು. ಆಗ ಗಜಾನನ ಮಹಾರಾಜರು ಬ್ರಹ್ಮಗಿರಿಯನ್ನು



ಬೈದು, ಪ್ರಾಯೋಗಿಕವಾಗಿ ಮಾಡಿ ತೋರಿಸಲಾಗಲು ಅಸಮರ್ಥರಾಗಿದ್ದು, ಕೇವಲ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಪ್ರವಚನ ಮಾಡುವುದು ತಪ್ಪೆಂದು ತೋರಿಸಿದರು.

ಗೋವಿಂದ ಬುವ ಎನ್ನುವ ಕೀರ್ತನಕಾರನು ಕುದುರೆಯ ಮೇಲೆ ಪ್ರಯಾಣ ಮಾಡುತ್ತ ಶೇಗಾಂವ್‌ಗೆ ಬಂದು ಅಲ್ಲಿದ್ದ ಮೋಟೆಮಂದಿರ್ ಎಂದು ಖ್ಯಾತವಾಗಿದ್ದ ಶಿವ ದೇವಾಲಯಕ್ಕೆ ಆಗಮಿಸಿದನು. ಅವನ ಕುದುರೆಯು ಕ್ರೂರವಾಗಿದ್ದು, ಎಲ್ಲರಿಗೂ ಒದೆಯುತ್ತಿತ್ತು ಮತ್ತು ಕಚ್ಚುತ್ತಿತ್ತು ಹಾಗೂ ಗಟ್ಟಿಯಾಗಿ ಕೆನೆಯುತ್ತಿತ್ತು ಮತ್ತು ಕಟ್ಟಿಹಾಕಿದ್ದರೆ, ಅದನ್ನು ಕಿತ್ತುಕೊಂಡು ಓಡಿಹೋಗುತ್ತಿತ್ತು. ಆ ರಾತ್ರಿ ದೇವಾಲಯದಲ್ಲಿ ಮಲಗಿದ್ದ ಗೋವಿಂದ ಬುವ ಮಧ್ಯರಾತ್ರಿ ಎದ್ದು ನೋಡಿದಾಗ, ಅದು ಗಲಾಟೆ ಮಾಡದೆ ಶಾಂತವಾಗಿದ್ದುದು ಅವನಿಗೆ ತಿಳಿಯಿತು. ಇದನ್ನು ಪರಿಶೀಲಿಸಲು ಬಂದಾಗ ಅವನಿಗೆ ಆಶ್ಚರ್ಯ ಕಾದಿತ್ತು. ಗಜಾನನ ಮಹಾರಾಜರು ಆ ಕುದುರೆಯ ನಾಲ್ಕು ಕಾಲುಗಳ ಮಧ್ಯೆ ಮಲಗಿದ್ದು ತಮಗೆ ಪ್ರಿಯವಾದ ಗಣ್, ಗಣ್ ಗಣತ್ ಬೋಟೆ ಎಂಬ ಭಜನೆಯನ್ನು ಹಾಡುತ್ತಿದ್ದರು. ಗೋವಿಂದ ಬುವನನ್ನು ನೋಡಿದ ಗಜಾನನ ಮಹಾರಾಜರು ಎದ್ದುನಿಂತು ನಾಲ್ಕು ಬುದ್ಧಿಮಾತುಗಳನ್ನು ಕುದುರೆಗೆ ಹೇಳಿ ಹೊರಟುಹೋದರು. ಅಂದಿನಿಂದ ಕುದುರೆಯ ಸಮಾಧಾನಚಿತ್ತವುಳ್ಳದ್ದಾಯಿತು, ಕುರಿಮರಿಯಂತೆ ಶಾಂತವಾಯಿತು ಮತ್ತು ಯಾವತ್ತೂ ತೊಂದರೆಯನ್ನು ಕೊಡಲಿಲ್ಲ. ಒಬ್ಬ ಶ್ರೇಷ್ಠ ಸಂತನು ತನ್ನ ಪ್ರೀತಿಯಿಂದ ಕೇವಲ ನೋಡುವುದರಿಂದ, ಸ್ಪರ್ಶದಿಂದ ಅಥವಾ ಸಮೀಪಕ್ಕೆ ಹೋಗುವುದರಿಂದ ಮನುಷ್ಯ ಹಾಗೂ ಪ್ರಾಣಿಗಳಲ್ಲಿ ಯಾವ ರೀತಿಯ ಬದಲಾವಣೆಯನ್ನು ತರಬಹುದು ಎನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ.

ಬಾಲಾಪುರ ಎಂಬಲ್ಲಿ ಸಂತ ಸಮರ್ಥ ರಾಮದಾಸರ ಶಿಷ್ಯನಾದ ಬಾಲಕೃಷ್ಣ ಎಂಬುವವನು ಇದ್ದನು. ದಶನವಮಿ ಹಬ್ಬದ ಸಮಯದಲ್ಲಿ ತನ್ನ ಹೆಂಡತಿ ಪುತಲಬಾಯಿಯ ಸಮೇತ ಸಜ್ಜನ್‌ಗಡಕ್ಕೆ ಹೋಗುವುದು ಅವನ ಪದ್ಧತಿಯಾಗಿತ್ತು. ವಯಸ್ಸಾದಂತೆ ಪ್ರತಿವರ್ಷವೂ ಅಲ್ಲಿಗೆ ಹೋಗುವುದು ಕಷ್ಟವೆನಿಸುತ್ತಿತ್ತು. ಆದುದರಿಂದ ಒಂದು ವರ್ಷ ಸಜ್ಜನ್ ಗಡಕ್ಕೆ ಹೋದಾಗ ಸಮರ್ಥ ರಾಮದಾಸರ ಸಮಾಧಿಯ ಮುಂದೆ ನಿಂತುಕೊಂಡು ತನ್ನ ಈ ಕಷ್ಟವನ್ನು ಹೇಳಿಕೊಂಡನು. ಅದೇ ರಾತ್ರಿ ರಾಮದಾಸರು ಅವನ ಸ್ವಪ್ನದಲ್ಲಿ ಕಾಣಿಸಿಕೊಂಡು ಇನ್ನುಮುಂದೆ ಅವನು ಸಜ್ಜನ್‌ಗಡಕ್ಕೆ ಬರುವ ಅವಶ್ಯಕತೆ ಇಲ್ಲ. ಬಾಲಾಪುರದ ಮನೆಯಲ್ಲೇ ಹಬ್ಬವನ್ನು ಆಚರಿಸಬಹುದು ಎಂದು ತಿಳಿಸಿದರು. ಹಾಗೂ ಅಂತಹ ದಿನ ತಾವು ಸ್ವತಃ ಬಾಲಾಪುರದಲ್ಲಿ ಹಾಜರಿರುವುದಾಗಿ ಆಶ್ವಾಸನೆ ನೀಡಿದರು. ಇದರಂತೆ ಬಾಲಕೃಷ್ಣನು ಬಾಲಾಪುರದಲ್ಲೇ ದಶನವಮಿ ಹಬ್ಬವನ್ನು ಆಚರಿಸಲು ಏರ್ಪಾಟುಗಳನ್ನು ಮಾಡಿದನು. ನವಮಿ

ದಿನದಂತೂ ಶ್ರೀರಾಮನಿಗೆ ಪೂಜೆ ನಡೆಯುತ್ತಿದ್ದಾಗ ಗಜಾನನ ಮಹಾರಾಜರು ಬಾಲಕೃಷ್ಣನ ಮನೆಯ ಹೊರಗೆ ನಿಂತಿದ್ದುದು ಕಂಡುಬಂದಿತು. ಎಲ್ಲರಿಗೂ ಆಶ್ಚರ್ಯವಾಯಿತು. ಆದರೆ ಸಮರ್ಥ ರಾಮದಾಸರೇ ಸ್ವತಃ ಬರುತ್ತಾರೆ ಎಂದು ಬಾಲಕೃಷ್ಣನು ನಂಬಿದ್ದನು. ಗಜಾನನ ಮಹಾರಾಜರನ್ನು ಸ್ವಾಗತಿಸುವುದಕ್ಕಾಗಿ ಮನೆಯಿಂದ ಹೊರಬಂದಾಗ, ಬಾಲಕೃಷ್ಣನು ಕಂಡಿದ್ದು ಗಜಾನನ ಮಹಾರಾಜರನ್ನಲ್ಲ; ಅವರ ಬದಲು ಸಮರ್ಥರಾಮದಾಸರನ್ನು. ಆನಂತರ ಗಜಾನನ ಮಹಾರಾಜರು ತಮ್ಮ ಮೂಲ ರೂಪವನ್ನು ಧರಿಸಿ ರಾಮದಾಸರ ಆಶ್ವಾಸನೆಯಂತೆ ತಾವು ಬಂದಿರುವುದಾಗಿ ತಿಳಿಸಿದರು. ತಮಗೂ ರಾಮದಾಸರಿಗೂ ಹೆಸರನ್ನು ಬಿಟ್ಟರೆ ಯಾವ ಭಿನ್ನತೆಯೂ ಇಲ್ಲ ಎಂದು ಹೇಳಿದರು. ಮಾರನೆಯ ರಾತ್ರಿ ಬಾಲಕೃಷ್ಣನ ಕನಸಿನಲ್ಲಿ ರಾಮದಾಸರೇ ಕಾಣಿಸಿಕೊಂಡು, ಅವನ ಮನೆಗೆ ಬಂದಿದ್ದು, ತಾನೇ ಎಂದು ಖಚಿತಪಡಿಸಿದರು. ಇದನ್ನು ಕೇಳಿ ಬಾಲಕೃಷ್ಣನಿಗೆ ತುಂಬ ಸಂತೋಷವಾಯತು. ಇದರಿಂದ ಬಾಲಕೃಷ್ಣನಿಗೆ ಒಂದು ಹೊಸ ಪಾಠವನ್ನು ಕಲಿಸಿದಂತಾಯ್ತು. ಅದೇನೆಂದರೆ ಹೊರಗೆ ಭಿನ್ನವಾಗಿ ಕಂಡರೂ ಚೈತನ್ಯವು ಒಂದೇ, ಹಾಗೂ ಅದರಲ್ಲಿ ಯಾವ ಭಿನ್ನತೆಯೂ ಇಲ್ಲ ಎಂಬುದು. ಅದೇ ಸತ್ಯ.

೧೯೦೮ನೆಯ ಇಸವಿಯಲ್ಲಿ ಬಾಲಗಂಗಾಧರ ಟಿಳಕರು ಶಿವಾಜಿ ಜಯಂತಿಯ ಅಂಗವಾಗಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲು ಅಕೋಲಕ್ಕೆ ಬರಬೇಕಾಗಿತ್ತು. ಗಜಾನನ ಮಹಾರಾಜರನ್ನೂ ಆಮಂತ್ರಿಸಿ, ಅವರಿಂದ ಸಭೆಗೂ ಮತ್ತು ಟಿಳಕರು ಭಾಗವಹಿಸುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮಕ್ಕೂ ಅನುಗ್ರಹ ಪಡೆಯಬೇಕೆಂದು ವ್ಯವಸ್ಥಾಪಕರಲ್ಲಿ ಕೆಲವರು ಯೋಚಿಸಿದರು. ಗಜಾನನ ಮಹಾರಾಜರನ್ನು ಆಮಂತ್ರಿಸಿದಾಗ ಅವರು ಸಂತೋಷದಿಂದ ಒಪ್ಪಿಕೊಂಡದ್ದೇ ಅಲ್ಲದೆ, ಸಂದರ್ಭಕ್ಕೆ ತಕ್ಕ ರೀತಿಯಲ್ಲಿ ವರ್ತಿಸುವುದಾಗಿ ಆಶ್ವಾಸನೆ ನೀಡಿದರು. ಸರಿಯಾದ ಸಮಯಕ್ಕೆ ಅವರು ಶುಭ್ರವಾದ ಬಟ್ಟೆಯನ್ನು ಧರಿಸಿ ಬಂದು ಕುಳಿತು ಟಿಳಕರ ಭಾಷಣವನ್ನು ಕೇಳಿದರು. ಆನಂತರ ಟಿಳಕರನ್ನು ದಸ್ತಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ಹೂಡಿದಾಗ, ಕೆಲವರು ಗಜಾನನ ಮಹಾರಾಜರಲ್ಲಿಗೆ ಒಂದು ಟಿಳಕರನ್ನು ಕಾಪಾಡಬೇಕೆಂದು ಪ್ರಾರ್ಥಿಸಿದರು. ಮೂರು ದಿನಗಳು ಗಜಾನನ ಮಹಾರಾಜರು ಏನೂ ಪ್ರತಿಕ್ರಿಯೆ ತೋರಿಸಲಿಲ್ಲ; ಟಿಳಕರನ್ನು ಶಿಕ್ಷೆಯಿಂದ ಕಾಪಾಡಲು ಸಾಧ್ಯವಿಲ್ಲ ಎಂದು ನಾಲ್ಕನೆಯ ದಿನ ಹೇಳಿದರು. ಆದರೆ ಇದು ಒಳ್ಳೆಯದಕ್ಕೇ ಆಯಿತು: ಇದರಿಂದ ಅವರು ಇದುವರೆಗೂ ಮಾಡದೇ ಇರುವ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ ಎಂದೂ ತಿಳಿಸಿದರು. ಅವರ ಭವಿಷ್ಯವಾಣಿ ನಿಜವಾಯಿತು. ಟಿಳಕರು ಮಾಂಡಲೆ ಜೈಲಿನಲ್ಲಿ ಗೀತಾರಹಸ್ಯವೆಂಬ ಭಗವದ್ಗೀತೆಯ ಮೇಲಿನ



ಭಾಷ್ಯವನ್ನು ಬರೆದರು. ಇದು ಎಷ್ಟೊಂದು ಮಹತ್ಕಾರ್ಯವೆಂದರೆ, ಅವರಿಗೆ ವಿಶೇಷ ಖ್ಯಾತಿಯನ್ನೂ ತಂದಿತು. ಸ್ವಾತಂತ್ರ್ಯ ಸಂಗ್ರಾಮದ ಅವರ ಕೊಡುಗೆಗಿಂತಲೂ ಇದು ಮುಖ್ಯವೆಂದು ಕೆಲವರು ಭಾವಿಸಿದ್ದಾರೆ.

ಮೂರ್ತಿಜಪುರಕ್ಕೆ ಸಮೀಪದಲ್ಲಿರುವ ಕುರಂ ಎಂಬ ನಗರದ ಮಹತಬ್‌ಷಾ ಎಂಬ ಮುಸ್ಲಿಂ ಸಂತನು ಗಜಾನನ ಮಹಾರಾಜರ ಬಗ್ಗೆ ವಿಶೇಷವಾಗಿ ಕೇಳಿ ತಿಳಿದುಕೊಂಡಿದ್ದನು. ಅಕೋಲದ ಬಾಪುರಾವ್ ಅವರನ್ನು ಭೇಟಿ ಮಾಡಿ ತಾನು ಗಜಾನನ ಮಹಾರಾಜ್ ಅವರನ್ನು ಭೇಟಿಯಾಗಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದನು. ಮುಂದಿನ ಸಾರಿ ಗಜಾನನ ಮಹಾರಾಜರು ಅಕೋಲಕ್ಕೆ ಬಂದಾಗ ಬಾಪುರಾವ್, ಮಹತಬ್‌ಷಾಗೆ ಸುದ್ದಿಯನ್ನು ತಿಳಿಸಿದನು. ಆದರೆ ಮಹತಬ್‌ಷಾ ತನ್ನ ಅಂತರ್ದೃಷ್ಟಿಯಿಂದ ಅವರು ಬರುವುದನ್ನು ತಿಳಿದು, ತನ್ನ ಕೆಲವು ಅನುಯಾಯಿಗಳೊಂದಿಗೆ ಅಕೋಲಕ್ಕೆ ಬಂದೇ ಬಿಟ್ಟಿದ್ದನು. ಮಾರನೆಯ ದಿನ ಗಜಾನನ ಮಹಾರಾಜರು ಮಹತಬ್‌ಷಾನನ್ನು ಬಾಪುರಾವ್‌ನ ಮನೆಯಲ್ಲಿ ಭೇಟಿಯಾದರು. ಇನ್ನೊಬ್ಬ ಭಕ್ತ ಬಚ್ಚುಲಾಲ್ ಎಂಬುವನು ಗಜಾನನ ಮಹಾರಾಜರನ್ನು ಮಾರನೆಯ ದಿನ ತನ್ನ ಮನೆಗೆ ಭೋಜನಕ್ಕೆ ಆಹ್ವಾನಿಸಿದನು. ಗಜಾನನ ಮಹಾರಾಜರು ಬಚ್ಚುಲಾಲನ ಮನೆಗೆ ಬಂದು ಟಾಂಗ ಗಾಡಿಯಿಂದ ಕೆಳಗಿಳಿಯಲು ನಿರಾಕರಿಸಿದರು. ಬಚ್ಚುಲಾಲನು ಮಹತಬ್‌ಷನನ್ನು ಭೋಜನಕ್ಕೆ ಆಹ್ವಾನಿಸದೇ ಇರುವುದರಿಂದ ಹೀಗಾಗಿರಬೇಕೆಂದು ಸರಿಯಾಗಿ ಊಹಿಸಿ, ಗಾಡಿಯನ್ನು ಬಾಪುರಾವ್ ಮನೆಗೆ ಹಿಂದಕ್ಕೆ ಕಳುಹಿಸಲಾಯಿತು. ಗಾಡಿಯು ಗಜಾನನ ಮಹಾರಾಜ್ ಮತ್ತು ಮಹತಬ್‌ಷಾ, ಇಬ್ಬರನ್ನೂ ಕರೆದುಕೊಂಡು ಬಂದಾಗ ಗಜಾನನ ಮಹಾರಾಜರು ಟಾಂಗ ಗಾಡಿಯಿಂದ ಇಳಿದು, ಮನೆಯೊಳಕ್ಕೆ ಹೋಗಿ ಮಹತಬ್‌ಷಾ ಅವರ ಜೊತೆಯಲ್ಲಿ ಕುಳಿತು ಊಟ ಮಾಡಿದರು.

ಮಹತಬ್‌ಷಾ ಇನ್ನು ಮುಂದೆ ಕುರಂನಲ್ಲಿ ಮುಂದುವರಿಯಬಾರದೆಂದು ಗಜಾನನ ಮಹಾರಾಜರು ಸಲಹೆ ನೀಡಿದರು. ಇದರ ಪ್ರಕಾರ ಮಹತಬ್‌ಷಾ ಕುರಂನಿಂದ ಹೊರಹೋಗಲು ಯೋಚಿಸಿದಾಗ, ಅವರು ಕಟ್ಟಲು ಆರಂಭಿಸಿದ್ದ ಮಸೀದಿಯು ಇನ್ನೂ ಪೂರ್ಣವಾಗಿಲ್ಲದೇ ಇರುವುದರಿಂದ ಅವರು ಹೋಗಕೂಡದೆಂದು ಪ್ರತಿಭಟಿಸಿದರು. ಆಗ ಅವರು ಗಜಾನನ ಮಹಾರಾಜರ ಅನುಗ್ರಹದಿಂದ ಮಸೀದಿಯು ಪೂರ್ಣಗೊಳ್ಳುವುದೆಂದು ಹೇಳಿದನು. ಏಕೆಂದರೆ ಗಜಾನನ ಮಹಾರಾಜರು ಧರ್ಮಗಳನ್ನು ಮೀರಿ ನಡೆಯುವವರಲ್ಲಿ ಒಬ್ಬರು ಹಾಗೂ ಸಂಕುಚಿತ ಮನೋಭಾವದವರಲ್ಲವೆಂದೂ, ಅಂತಹವರು ಎಲ್ಲ ಧರ್ಮಗಳಿಗೂ ಸೇರಿದವರೆಂದು ಮನವರಿಕೆ ಮಾಡಿಕೊಟ್ಟನು.

ಒಂದು ಸಾರಿ ಗಜಾನನ ಮಹಾರಾಜರು ಪಂಡರಾಪುರ ಕ್ಷೇತ್ರಕ್ಕೆ ಹೋಗಬೇಕೆಂದು ತೀರ್ಮಾನಿಸಿದರು. ಹರಿಪಾಟೀಲ್ ಮತ್ತು ಬಪುನ ಕಾಳೆ ಸೇರಿದಂತೆ ಅನೇಕ ಭಕ್ತರು ಅವರನ್ನು ಹಿಂಬಾಲಿಸಿದರು. ಪಂಡರಾಪುರದಲ್ಲಿ ಏಕಾದಶಿಯ ದಿನ ಭಕ್ತರ ಮಧ್ಯೆ ವಿಠ್ಠಲನ ದರ್ಶನಕ್ಕಾಗಿ ಹೋಗುತ್ತಿದ್ದರು. ಸ್ನಾನಕ್ಕಾಗಿ ಹೋಗಿದ್ದ ಬಪುನ ಕಾಳೆ ಬರುವುದು ತಡವಾಯಿತು. ಈ ಜನಜಂಗುಳಿಯ ಮಧ್ಯೆ ವಿಠಲನ ದರ್ಶನ ಮಾಡುವುದು ಸಾಧ್ಯವಾಗಲಿಲ್ಲ. ಅವನು ಸರಿಯಾದ ಭಕ್ತನಲ್ಲವೆಂದೂ, ಕಪಟಿಯೆಂದೂ, ತಮಾಷೆಗೋಸ್ಕರ ಪಂಡರಾಪುರಕ್ಕೆ ಬಂದವನೆಂದೂ ಅವನ ಸ್ನೇಹಿತರು ಹಾಸ್ಯ ಮಾಡಿದರು. ಅದನ್ನು ಕೇಳಿದ ಗಜಾನನ ಮಹಾರಾಜರು, ಬಪುನ ಕಾಳೆಯನ್ನು ಸಮಾಧಾನ ಮಾಡಿ, ಈಗಲೇ ಇಲ್ಲೇ ಅವನಿಗೆ ವಿಠಲನ ದರ್ಶನ ಮಾಡಿಸುವುದಾಗಿ ಹೇಳಿದರು. ಹಾಗೆಂದು ಹೇಳಿ ಅವರು, ಕೈಗಳನ್ನು ಸೊಂಟದಮೇಲೆ ಇಟ್ಟುಕೊಂಡು ಎರಡು ಕಾಲುಗಳನ್ನು ಸೇರಿಸಿಕೊಂಡು ಬಪುನನ ಮುಂದೆ ನಿಂತರು. ಅಲ್ಲಿ ಬಪುನ ಕಂಡಿದ್ದೇನು? ದೇವಾಲಯದ ಗರ್ಭಗೃಹದಲ್ಲಿರುವ ವಿಠಲನ ವಿಗ್ರಹವೇ ಗಜಾನನ ಮಹಾರಾಜರ ಜಾಗದಲ್ಲಿ ನಿಂತಿದ್ದಿತು. ತನ್ನ ಆಸೆಯನ್ನು ಇವರು ಯಾವ ರೀತಿ ನಿಜ ಮಾಡಿದರು ಎಂಬುದನ್ನು ತಿಳಿದು ಸಂತೋಷಿಸಿದನು. ಸಂತರು ನಿಜವಾದ ಭಕ್ತರ ಆಸೆ–ಆಕಾಂಕ್ಷೆಗಳನ್ನು ಈಡೇರಿಸುತ್ತಾರೆಂಬ ಸತ್ಯ, ಬಪುನನಿಗೆ ಗೊತ್ತಾಯಿತು.

ತಮ್ಮ ಸಹೋದರ ವಾಸುದೇವಾನಂದ ಸರಸ್ವತಿಯು ಮಾರನೆಯ ದಿನ ಭೇಟಿಗಾಗಿ ಬರುವನೆಂದೂ, ಅವನು ತುಂಬ ಆಸ್ತಿಕನೂ ಹಾಗೂ ಕೋಪಿಷ್ಠನೆಂದೂ ತಿಳಿಸಿದರು. ಆದುದರಿಂದ ಅವನು ಬರುವುದಕ್ಕೆ ಮುಂಚೆ ಮಠದ ಸುತ್ತಮುತ್ತ ಸ್ವಚ್ಛ ಮಾಡಬೇಕೆಂದೂ ಹೇಳಿದರು. ವಾಸುದೇವಾನಂದ ಸರಸ್ವತಿ ಅಥವಾ ಟೆಂಬೆಸ್ವಾಮಿಯು ಶ್ರೀ ದತ್ತಾತ್ರೇಯರ ಭಕ್ತನಾಗಿದ್ದು, ಶಾಸ್ತ್ರಗಳಲ್ಲಿ ಹೇಳಿರುವಂತೆ ಪೂಜೆ ಪುನಸ್ಕಾರಗಳನ್ನು ಮಾಡುವುದರಲ್ಲಿ ತುಂಬಾ ಕಟ್ಟುನಿಟ್ಟಾಗಿದ್ದನು. ಇವನಿಗೆ ಇಷ್ಟವಾಗದೇ ಇದ್ದುದನ್ನು ಇವನು ಸಹಿಸುತ್ತಿರಲಿಲ್ಲ. ವಾಸುದೇವಾನಂದನು ಮಠಕ್ಕೆ ಆಗಮಿಸಿದನು. ಗಜಾನನ ಮಹಾರಾಜರು ಕುಳಿತಿದ್ದ ಸ್ಥಳವನ್ನು ನೋಡಿದನು. ಕೂಡಲೇ ಹೊರಟುಹೋಗಲು ಅನುಮತಿ ಬೇಡಿದನು ಮತ್ತು ಹೊರಟುಹೋದನು. ನಿಮ್ಮ ಮತ್ತು ಸಹೋದರನ ರೀತಿನೀತಿಗಳಲ್ಲಿ ಇಷ್ಟೊಂದು ಅಂತರವಿರುವುದರಿಂದ, ಅವನನ್ನು ನಿಮ್ಮ ಸಹೋದರ ಎಂದು ಹೇಗೆ ಪರಿಗಣಿಸುವುದು ಎಂದು ಒಬ್ಬ ಭಕ್ತನು ಕೇಳಿದನು. ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಮೂರು ಮಾರ್ಗಗಳಿವೆ; ಅವೇ ಕರ್ಮ, ಭಕ್ತಿ ಮತ್ತು ಜ್ಞಾನ ಮಾರ್ಗಗಳು. ಕರ್ಮಮಾರ್ಗವನ್ನು ಅನುಸರಿಸುವವನು ಕರ್ಮಗಳಿಗೆ ಸಂಬಂಧಿಸಿದ ವಿಷಯಗಳಿಗೆ ಪ್ರಾಮುಖ್ಯ ನೀಡುತ್ತಾನೆ. ಭಕ್ತಿ ಮಾರ್ಗವನ್ನು ಅನುಸರಿಸುವವನು ಪೂಜಾ ಕೈಂಕರ್ಯವನ್ನು



ಮಾಡಿ ದೇವರ ಹೆಸರನ್ನು ಸಾವಿರಾರು ಬಾರಿ ಜಪ ಮಾಡುತ್ತಾನೆ. ಜ್ಞಾನಮಾರ್ಗವನ್ನು ಅನುಸರಿಸುವವನು ಯೋಗದ ಮೂಲಕ ಅಂತರ್ದೃಷ್ಟಿಯನ್ನು ಬೆಳೆಸಿಕೊಳ್ಳುತ್ತಾನೆ. ವಾಸುದೇವಾನಂದ ಸರಸ್ವತಿಯು ಕರ್ಮಮಾರ್ಗವನ್ನು ಮೊದಲು ಆರಿಸಿಕೊಂಡು ನಂತರ ಭಕ್ತಿಮಾರ್ಗದ ಕಡೆಗೆ ನಡೆದನು. ಹೊರಗಡೆಯಿಂದ ನೋಡಲು ಭಿನ್ನವೆನಿಸಿದರೂ ಈ ಎಲ್ಲ ಮಾರ್ಗಗಳೂ ಒಂದೇ ಗುರಿಯನ್ನು ಮುಟ್ಟುತ್ತವೆ. ಈ ಅರ್ಥದಲ್ಲಿ ವಾಸುದೇವಾನಂದ ಸರಸ್ವತಿ ಮತ್ತು ತಾನು ಸಹೋದರರಿದ್ದಂತೆ ಎಂದು ವಿಶ್ಲೇಷಿಸಿದನು.

ಕೆಲವು ದಿನಗಳ ನಂತರ ಹರಿಪಾಟೀಲನೊಡಗೂಡಿ ಮತ್ತೊಮ್ಮೆ ಗಜಾನನ ಮಹಾರಾಜರು ಪಂಡರಾಪುರಕ್ಕೆ ಆಗಮಿಸಿದರು. ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡಿದ ನಂತರ, ತಮ್ಮ ಪ್ರಿಯ ವಿಠಲನ ಮುಂದೆ ನಿಂತುಕೊಂಡರು. ಇದೇ ತಮ್ಮ ವಿಠಲನ ಅಂತಿಮ ದರ್ಶನವೆಂದು ಅವರಿಗೆ ಗೊತ್ತಾಯಿತು. ತಮ್ಮ ಭೌತಿಕಶರೀರದ ಅವಸಾನ ಕಾಲ ಸಮೀಪಿಸಿದೆಯೆಂದು ಅವರು ಹರಿಪಾಟೀಲನಿಗೆ ತಿಳಿಸಿದರು. ಇದನ್ನು ಕೇಳಿದ ಹರಿಪಾಟೀಲನಿಗೆ ದುಃಖವಾಯಿತು. ಶೇಗಾಂವ್‌ಗೆ ಹಿಂದಿರುಗಿದ ಕೂಡಲೆ ಹರಿಪಾಟೀಲನು ಎಲ್ಲರಿಗೂ ಈ ವಿಷಯವನ್ನು ತಿಳಿಸಿದನು. ಗಣೇಶ ಚತುರ್ಥಿಯ ದಿನದಂದು ಗಜಾನನ ಮಹಾರಾಜರು ಎಲ್ಲರನ್ನೂ ಕರೆದು, ಇದೇ ತಮ್ಮ ಕೊನೆಯ ದಿನವೆಂದೂ, ಯಾರೂ ತಮ್ಮ ನಿರ್ಗಮನಕ್ಕಾಗಿ ದುಃಖಿಸ ಬಾರದೆಂದು ಹೇಳಿದರು. ಏಕೆಂದರೆ ತಾವು ಈ ಶರೀರವನ್ನು ಬಿಟ್ಟುಹೋದ ನಂತರವೂ ತಮ್ಮ ಶಿಷ್ಯರ ಹಿತವನ್ನು ಗಮನಿಸುವುದಾಗಿಯೂ ಹೇಳಿದರು. ೧೯೧೦ ಅಥವಾ ಶಕವರ್ಷ ೧೮೩೨ರ ಭಾದ್ರಪದ ಶುದ್ಧ ಪಂಚಮಿ ಗುರುವಾರ, ಮುಕ್ತಿ ಹೊಂದಿದರು. ಶೇಗಾಂವ್‌ಗೆ ಇದ್ದಕ್ಕಿದ್ದಂತೆ ಯಾರಿಗೂ ಏನೂ ಗೊತ್ತಿಲ್ಲದೆ ಬಂದು, ಬದುಕಿದ್ದಾಗ ಸಂತನೆಂಬ ಖ್ಯಾತಿಗೆ ಪಾತ್ರರಾಗಿದ್ದ ಗಜಾನನ ಮಹಾರಾಜರು ಶೇಗಾಂವ್‌ನಲ್ಲಿಯೇ ಮುಕ್ತಿಹೊಂದಿದರು. ಮಾರನೆಯ ಬೆಳಿಗ್ಗೆ ಅವರನ್ನು ಸಮಾಧಿ ಮಾಡಲಾಯಿತು.

ಗಜಾನನ ಮಹಾರಾಜರು ಮುಕ್ತಿ ಹೊಂದಿ ೮೮ ವರ್ಷಗಳಾಗಿವೆ. ಪಶ್ಚಿಮ ಮಹಾರಾಷ್ಟ್ರಕ್ಕೆ ಶಿರಡಿ ಇರುವಂತೆ ವಿದರ್ಭ ಮಹಾರಾಷ್ಟ್ರದಲ್ಲಿ ಶೇಗಾಂವ್ ಒಂದು ಪ್ರಖ್ಯಾತ ಯಾತ್ರಾ ಸ್ಥಳವಾಗಿದೆ. ಮಹಾರಾಷ್ಟ್ರದ ಬುಲ್ಧನ ಜಿಲ್ಲೆಗೆ ಸೇರಿದ ಶೇಗಾಂವ್ ಸೆಂಟ್ರಲ್ ರೈಲ್ವೆಗೆ ಸೇರಿದ ಮುಂಬಯ ಹೌರಾ ರೈಲು ಮಾರ್ಗ ಮಧ್ಯದಲ್ಲಿದೆ. ಅನೇಕ ನಗರಗಳಿಂದ ಶೇಗಾಂವ್‌ಗೆ ಬಸ್ಸಿನ ಸೌಕರ್ಯವಿದೆ. ಪುಣೆ, ನಾಸಿಕ್, ನಾಗಪುರ, ಶಿರಡಿ ಮುಂತಾದ ನಗರಗಳಿಗೆ ಸಂಪರ್ಕ ಕಲ್ಪಿಸುವ ಖಾಸಗಿ ಬಸ್ಸುಗಳೂ ಇವೆ. ದಿನದಿನವೂ ಹೆಚ್ಚುತ್ತಿರುವ ಭಕ್ತರ ಅನುಕೂಲಕ್ಕಾಗಿ ಅನೇಕ ಹೋಟೆಲ್‌ಗಳೂ

ಮತ್ತು ವಸತಿ ಗೃಹಗಳೂ ಇಲ್ಲಿವೆ. ಗಜಾನನ ಮಹಾರಾಜ ಟ್ರಸ್ಟ್‌ವತಿಯಿಂದ ನಡೆಸಲಾಗುತ್ತಿರುವ ಭಕ್ತ ನಿವಾಸ ಸಮುಚ್ಚಯಗಳೂ ಇಲ್ಲಿವೆ.

ಸಣ್ಣದಾಗಿ ಪ್ರಾರಂಭವಾದ ಗಜಾನನ ಮಹಾರಾಜ್ ಸಂಸ್ಥಾನವು ಈಗ ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಇದು ಸಾಮಾಜಿಕ ಸೇವೆ, ಶಿಕ್ಷಣ, ವೈದ್ಯಕೀಯ ಪರಿಹಾರ ಮತ್ತು ಇವುಗಳ ಜೊತೆಗೆ ಶೇಗಾಂವ್ ದೇವಾಲಯಕ್ಕೆ ಬರುವ ಅಸಂಖ್ಯಾತ ಭಕ್ತರ ಅಗತ್ಯಗಳನ್ನು ಪೂರೈಸುವ ಕಾರ್ಯಗಳಲ್ಲಿ ನಿರತವಾಗಿದೆ. ಗಜಾನನ ಮಹಾರಾಜರು ಇಲ್ಲಿಗೆ ಬಂದ ದಿನ, ರಾಮಜನ್ಮ ಹಾಗೂ ಅವರು ಮುಕ್ತಿ ಹೊಂದಿದ ವಾರ್ಷಿಕ ದಿನಗಳು ಮುಂತಾದ ವಿಶೇಷ ದಿನಗಳಲ್ಲಿ ದೊಡ್ಡ ಜಾತ್ರೆಗಳೇ ಇಲ್ಲಿ ನಡೆಯುತ್ತವೆ.

ಶೇಗಾಂವ್ ದೇವಾಲಯದ ವೈಶಿಷ್ಟ್ಯವೆಂದರೆ ಅದನ್ನು ಕಟ್ಟುವುದರ ಆರಂಭ, ಗಜಾನನ ಮಹಾರಾಜರು ಬದುಕಿದ್ದಾಗಲೇ, ಅವರೇ ತೋರಿಸಿದ್ದ ಜಾಗದಲ್ಲಿ ಆರಂಭವಾಯಿತು. ಈ ದೇವಾಲಯವು ಪ್ರತಿದಿನ ಬೆಳಿಗ್ಗೆ ೫ರಿಂದ ರಾತ್ರಿ ೧೦ರವರೆಗೆ ದರ್ಶನಕ್ಕಾಗಿ ತೆರೆದಿರುತ್ತದೆ. ಭಕ್ತರು ಸರತಿ ಸಾಲಿನಲ್ಲಿ ಹೋಗಿ, ಗಜಾನನ ಮಹಾರಾಜರು ಪೂಜಿಸುತ್ತಿದ್ದ ಶ್ರೀರಾಮ, ಲಕ್ಷ್ಮಣ ಮತ್ತು ಸೀತೆಯವರ ವಿಗ್ರಹಗಳಿಗೆ ನಮಸ್ಕರಿಸುತ್ತಾರೆ. ನಂತರ ಈ ಮೇಲಿನ ವಿಗ್ರಹಗಳಿಗಿಂತ ಸ್ವಲ್ಪ ಕೆಳಗಿರುವ ಗಜಾನನ ಮಹಾರಾಜರ ಸಮಾಧಿಯ ಸಮೀಪ ಹೋಗುತ್ತಾರೆ. ಹೆಚ್ಚು ಹಣವನ್ನು ತೆಗೆದುಕೊಂಡು ಮಾಡಿಸುವ ವಿಶೇಷ ದರ್ಶನ ಪದ್ಧತಿ ಇಲ್ಲಿಲ್ಲ. ಇಲ್ಲಿ ಎಲ್ಲರೂ ಸಮಾನರು. ಪ್ರತಿಯೊಬ್ಬರೂ ಸರತಿ ಸಾಲಿನಲ್ಲಿಯೇ ಬಂದು ದರ್ಶನ ಪಡೆಯಬೇಕು.

ದೇವಾಲಯದ ಹಿಂಭಾಗದಲ್ಲಿ ಅಮೃತಶಿಲೆಯನ್ನು ಹಾಸಿರುವ ಹಜಾರವಿದೆ. ಇಲ್ಲಿ ಗಜಾನನ ಮಹಾರಾಜರು ತಮ್ಮ ಶರೀರವನ್ನು ತ್ಯಜಿಸಿದರು. ಇಲ್ಲಿ ಧ್ಯಾನ ಮಾಡಬಹುದು. ಅವರು ಉಪಯೋಗಿಸುತ್ತಿದ್ದ ಧುನಿ, ಪಾದುಕೆಗಳು, ಮಂಚ ಮತ್ತು ಹಾಸಿಗೆಗಳನ್ನು ಇಲ್ಲಿ ಇಡಲಾಗಿದೆ. ಗಜಾನನ ಮಹಾರಾಜರಿಗೆ ಸಂಬಂಧಿಸಿದ ಶ್ರೀ ಗಜಾನನ ವಿಜಯವನ್ನು ಪಠಿಸಲು ಜನಗಳಿಗೆ ಪ್ರತ್ಯೇಕ ಜಾಗವನ್ನು ಗುರುತಿಸಲಾಗಿದೆ. ಸಮಾಧಿ ಮಂದಿರದ ಹೊರಭಾಗದಲ್ಲಿ ನಾಗ ದೇವತೆಯ ದೇವಾಲಯವಿದೆ ಮತ್ತು ಗಜಾನನ ಮಹಾರಾಜರ ಶಿಷ್ಯರಾದ ಶ್ರೀ ನಾರಾಯಣ ಮಹಾರಾಜ್ ಮತ್ತು ಶ್ರೀ ಬಲಭೌ ಮಹಾರಾಜರ ಸಮಾಧಿಗಳಿವೆ.

ಪ್ರತಿನಿತ್ಯವೂ ಬೆಳಿಗ್ಗೆ ೧೧ ಗಂಟೆಗೆ ಪ್ರಮುಖ ದೇವಾಲಯಗಳಲ್ಲಿ ಭಕ್ತರ ದಂಡು ಆರತಿಗಾಗಿ ಸೇರಿರುತ್ತದೆ. ಇದಾದ ನಂತರ ಮಹಾಪ್ರಸಾದವನ್ನು ನೀಡಲಾಗುತ್ತದೆ. ಒಣಗಿದ ಎಲೆಗಳ ಮೇಲೆ ನೀಡುವ ಪ್ರಸಾದವನ್ನು ಭಕ್ತರು ಭಕ್ತಿ ಮತ್ತು ನಮ್ರತೆಗಳಿಂದ ಸ್ವೀಕರಿಸುತ್ತಾರೆ.



ಇದೇ ರೀತಿ ಪ್ರತಿ ದಿನವೂ ದೈನಂದಿನ ಪೂಜೆಗಳು ನೆರವೇರುತ್ತವೆ. ಗಜಾನನ ಮಹಾರಾಜರು ಕಾಣಿಸಿಕೊಂಡ ಹಾಗೂ ಬಹಳ ಸಮಯ ಜೀವನ ನಡೆಸಿದ ನಂತರ ಮುಕ್ತಿ ಹೊಂದಿದ ಶೇಗಾಂವ್ ಅನ್ನು ಸಂದರ್ಶಿಸಲು ಜನಗಳ ದಂಡೇ ಬರುತ್ತದೆ. ಇಂದಿಗೂ ಅವರ ಸಮಾಧಿಯು ನಿಜವಾದ ಭಕ್ತರಿಗೆ ಗಜಾನನ ಮಹಾರಾಜರು ಬದುಕಿದ್ದಾಗ ಏನು ಅನುಗ್ರಹ ಮಾಡುತ್ತಿದ್ದರೋ ಅದನ್ನು ಈಗಲೂ ಮಾಡುತ್ತಿದ್ದಾರೆ.

* * * * *

# ೩. ಶ್ರೀ ವಾಸುದೇವಾನಂದ ಸರಸ್ವತಿ

ಹಿಂದೂ ಧರ್ಮದಲ್ಲಿ ದತ್ತಾತ್ರೇಯ ದೇವರಿಗೆ ಒಂದು ಪ್ರಮುಖ ಸ್ಥಾನ ಉಂಟು. ವಾರ್ಕರಿ ಸಂಪ್ರದಾಯದಲ್ಲಿ ವಿಠಲನ ಉಪಾಸನೆ ಹಾಗೂ ಸಮರ್ಥ ರಾಮದಾಸರ ಉಪಾಸನೆ ಇರುವಂತೆ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ದತ್ತಾತ್ರೇಯ ಆರಾಧನೆಯು ಅನೇಕ ಶತಮಾನಗಳಿಂದ ಪ್ರಚಲಿತವಾಗಿದೆ. ಈ ಸಂಪ್ರದಾಯವು ಕರ್ನಾಟಕ, ಆಂಧ್ರಪ್ರದೇಶ, ಗುಜರಾತ್ ಮಧ್ಯಪ್ರದೇಶ ಮತ್ತು ದೂರದ ನೇಪಾಳದಲ್ಲಿಯೂ ಪ್ರಚಲಿತವಾಗಿದೆ. ನೇಪಾಳದಲ್ಲಿ ದತ್ತಾತ್ರೇಯನಿಗಾಗಿ ಒಂದು ದೇವಾಲಯವೂ ಇದೆ. ಅನೇಕ ಪುರಾಣಗಳಲ್ಲಿ ದತ್ತಾತ್ರೇಯನ ಬಗ್ಗೆ ಕಥೆಗಳಿವೆ. ಅವನು ವಿಷ್ಣುವಿನ ಅವತಾರವಾಗಿ ಅತ್ರಿ ಮುನಿ ಮತ್ತು ಮಹಾಸತಿ ಅನಸೂಯರಿಗೆ ಜನಿಸಿದವನೆಂದು ಪುರಾಣಗಳು ತಿಳಿಸುತ್ತವೆ. ಇತ್ತೀಚೆಗೆ ಅಂದರೆ ಕ್ರಿ.ಶ. ಹದಿನಾಲ್ಕು ಮತ್ತು ಹದಿನೈದನೆಯ ಶತಮಾನಗಳಲ್ಲಿ ಆಂಧ್ರಪ್ರದೇಶದ ಪೀಠಾಪುರಂನಲ್ಲಿ ಜನಿಸಿದ ಶ್ರೀ ಶ್ರೀಪಾದ ಶ್ರೀವಲ್ಲಭ ಹಾಗೂ ನರಸೋಬವಾಡಿ ಮತ್ತು ಗಾಣಿಗಾಪುರಗಳಲ್ಲಿ ತಮ್ಮ ಆನಂತರದ ಜೀವನವನ್ನು ಕಳೆದ ಹಾಗೂ ಕಾರಂಜದಲ್ಲಿ ಜನಿಸಿದ ಶ್ರೀ ನರಸಿಂಹ ಸರಸ್ವತಿಗಳು ಅವತಾರವೆತ್ತಿದರು. ಇವರನ್ನು ಕ್ರಮವಾಗಿ ದತ್ತಾತ್ರೇಯನ ಎರಡನೆಯ ಮತ್ತು ಮೂರನೆಯ ಅವತಾರವೆಂದು ಭಾವಿಸಲಾಗಿದೆ. ಶ್ರೀ ಜನಾರ್ದನಸ್ವಾಮಿ, ಅಕ್ಕಲಕೋಟೆಯ ಶ್ರೀ ಸ್ವಾಮಿ ಸಮರ್ಥರು, ಶ್ರೀ ಮಾಣಿಕ್ ಪ್ರಭು, ಶ್ರೀ ದೇಶೋಪಂತ್ ಮತ್ತು ನಿರಂಜನ್ ರಘುನಾಥ್ ಅವರುಗಳು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು. ಇಂದಿಗೂ ಇವರಲ್ಲಿ ಕೆಲವರನ್ನು ದತ್ತಾತ್ರೇಯನ ಅವತಾರವೆಂದೇ ಪರಿಗಣಿಸಲಾಗುತ್ತದೆ. ದತ್ತಾತ್ರೇಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋದ ಸಂತರಲ್ಲಿ ಶ್ರೀ ವಾಸುದೇವಾನಂದ ಸರಸ್ವತಿ ಒಬ್ಬರು. ಅವರನ್ನು ಶ್ರೀ ಟೆಂಬೇಸ್ವಾಮಿ ಎಂದೂ ಕರೆಯುತ್ತಾರೆ.

ಮುಂದೆ ಸಂತನಾಗಲಿರುವ ಇವರು, ದಕ್ಷಿಣ ಮಹಾರಾಷ್ಟ್ರದ ಸಾವಂತವಾಡಿ ಎಂಬ ರಾಜ ಸಂಸ್ಥಾನಕ್ಕೆ ಸೇರಿದ ಮನಗಾಂವ್ ಎಂಬ ಸಣ್ಣ ಪಟ್ಟಣದಲ್ಲಿ ಜನಿಸಿದರು. ಮನಗಾಂವ್‌ಗೆ ಸಮೀಪದ ಹಳ್ಳಿಯೊಂದರಲ್ಲಿ ಹರಿಭಟ್ ಟೆಂಬೆ ಎಂಬ ಹೆಸರಿನ ಪುರೋಹಿತನು ವಾಸವಾಗಿದ್ದನು. ಅವನು ವೈದಿಕ ಜ್ಞಾನದಲ್ಲಿ ನಿಷ್ಣಾತನಾಗಿದ್ದು, ಜನಗಳ ಗೌರವಕ್ಕೆ ಪಾತ್ರನಾಗಿದ್ದರೂ, ಇವನಿಗೆ ಸಂಸಾರವನ್ನು ತೂಗಿಸುವಷ್ಟು



ಆದಾಯ ಬರುತ್ತಿರಲಿಲ್ಲ. ಆದುದರಿಂದ ಗ್ರಾಮವನ್ನು ಬಿಟ್ಟು ಮನಗಾಂವ್‌ಗೆ ಹೋಗಲು ನಿರ್ಧರಿಸಿದನು. ಅಲ್ಲಿ ಅವನಿಗೆ ಸೀತಾರಾಂ ಕೊಂಕರ್ ಎಂಬ ಜಮೀನ್ದಾರನು ಆಶ್ರಯ ನೀಡಿದನು. ಸ್ವಲ್ಪ ದಿನಗಳ ನಂತರ ಹರಿಭಟ್ ತನ್ನ ಇಡೀ ಕುಟುಂಬವನ್ನು ಮನಗಾಂವ್‌ಗೆ ಬರಮಾಡಿಕೊಂಡನು. ಇಲ್ಲಿ ಹರಿಭಟ್ಟನ ಮತ್ತು ಕೊಂಕರ್ ಕುಟುಂಬಕ್ಕೂ ಸ್ನೇಹ ಬೆಳೆಯಿತು. ಕೊನೆಗೆ ಹರಿಭಟ್ಟನ ಮಗಳು ಕಾಶಿಯನ್ನು ಕೊಂಕರ್‌ನ ಮೊದಲನೆಯ ಪತ್ನಿ ಮರಣಿಸಿದ ನಂತರ, ಎರಡನೆಯ ಪತ್ನಿಯಾಗಿ ವಿವಾಹ ಮಾಡಿಕೊಡಲಾಯಿತು. ಅಷ್ಟೇ ಅಲ್ಲದೆ, ಮೊದಲನೆಯ ಪತ್ನಿಯಿಂದ ಕೊಂಕರ್‌ಗೆ ಜನಿಸಿದ ಪುತ್ರಿ ರಮಾ, ಹರಿಭಟ್ಟನ ಮಗ ಗಣೇಶ, ಇವರ ಮದುವೆಯೂ ನಡೆಯಿತು. ಈ ರೀತಿ ಎರಡು ಕುಟುಂಬಗಳು ತೀರ ನಿಕಟವಾದವು. ಕೊಂಕರನ ಮರಣಾನಂತರ ಅವನ ಪತ್ನಿಯು ಮನೆಯ ವ್ಯವಹಾರವನ್ನೇ ಹರಿಭಟ್ಟನಿಗೆ ವಹಿಸಿದಳು. ಹೀಗಾಗಿ ಇವನಿಗೆ ಹೆಚ್ಚಿನ ಆಸ್ತಿ ಹೊರಕಿತು. ಅದನ್ನು ಅವನು ನೋಡಿಕೊಳ್ಳಲು ಒಪ್ಪಿಕೊಂಡನು.

ಹರಿಭಟ್ಟನ ಮಗ ಗಣೇಶಭಟ್ಟನೂ ತಂದೆಯಂತೆ ದತ್ತಾತ್ರೇಯನ ಪರಮಭಕ್ತನಾಗಿದ್ದನು. ರಮಾ ಜೊತೆ ಅವನ ಮದುವೆಯಾಗಿದ್ದರೂ, ಅವನು ಗಾಣಗಾಪುರದಲ್ಲೇ ವಿಶೇಷವಾಗಿ ವಾಸವಾಗಿದ್ದು, ದತ್ತಾತ್ರೇಯನ ಪೂಜೆಯೊಡನೆ ಸಂತೋಷದಿಂದಿದ್ದನು. ಈ ರೀತಿ ಹನ್ನೆರಡು ವರ್ಷಗಳ ಕಾಲ ಅಲ್ಲಿ ವಾಸವಾಗಿರಲು, ಒಂದು ದಿನ ದತ್ತಾತ್ರೇಯನು ಪ್ರತ್ಯಕ್ಷನಾಗಿ, ಇನ್ನು ಇವನು ಗಾಣಗಾಪುರಕ್ಕೆ ಬರಕೂಡದೆಂದೂ, ಗೃಹಸ್ಥ ಜೀವನವನ್ನು ಸಾಗಿಸಿಕೊಂಡು ತನ್ನ ಕುಟುಂಬದೊಡನೆ ವಾಸಿಸಬೇಕೆಂದು ಆಜ್ಞೆ ಮಾಡಿದನು. ಗಣೇಶ ಭಟ್ಟನು ಈ ಆಜ್ಞೆಯನ್ನು ಪರಿಪಾಲಿಸಿದನು. ಕಾಲಕ್ರಮದಲ್ಲಿ ಶಕವರ್ಷ ೧೭೭೬ ಅಂದರೆ ಕ್ರಿ.ಶ. ೧೮೫೪ರ ಶ್ರಾವಣ ಕೃಷ್ಣ ಪಂಚಮಿಯಂದು ಗಣೇಶ ಭಟ್ ಮತ್ತು ರಮಾಬಾಯಿಯವರಿಗೆ ಒಬ್ಬ ಮಗನು ಹುಟ್ಟಿದನು. ಅವನಿಗೆ ವಾಸುದೇವ ಎಂದು ಹೆಸರಿಟ್ಟರು.

ಬಾಲಕ ವಾಸುದೇವನು ತನ್ನ ಅಜ್ಜ ಹರಿಭಟ್ಟನ ನೇತೃತ್ವದಲ್ಲಿ ಬೆಳೆದನು. ಅವನಿಗೆ ಸಕಾಲದಲ್ಲಿ ಉಪನಯನ ಮಾಡಲಾಯಿತು. ನಂತರ ವಾಸುದೇವನು ತಥ್ಯಭಟ್ಟ ಯುಕಿದವೆಯವರಲ್ಲಿ ವೈದಿಕ ವಿದ್ಯೆಯನ್ನು ಹಾಗೂ ಶ್ರೀ ಶಂಭುಶಾಸ್ತ್ರಿ ಸಾಧನೆಯವರಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನೂ ಕಲಿಯಲು ಪ್ರಾರಂಭಿಸಿದನು. ಬಾಲಕನು ಕಷ್ಟಕರವಾದ ವಿಷಯಗಳನ್ನು ಬಹಳ ಬೇಗ ಕಲಿಯುವುದರಲ್ಲಿ ಪರಿಶ್ರಮ ತೋರಿಸಿದನು ಮತ್ತು ಶೀಘ್ರ ಸಮಯದಲ್ಲೇ ಮಂತ್ರ ವಿದ್ಯೆ ಮತ್ತು ಜ್ಯೋತಿಷ್ಯ ಶಾಸ್ತ್ರಗಳಲ್ಲಿ ನಿಷ್ಣಾತನಾದನು. ಒಂದು ಸಾರಿ ತನ್ನ ಗುರು ಶುಭಕಾರ್ಯಕ್ಕಾಗಿ ನಿರ್ಧರಿಸಿದ ಮುಹೂರ್ತ ಸರಿಯಲ್ಲವೆಂದು ತಿಳಿಸಿದನು. ಇದರಿಂದ ಅಸಮಾಧಾನಗೊಂಡ ಗುರುಗಳು ಇವನಿಗೆ ಪಾಠ ಹೇಳುವುದನ್ನು ನಿಲ್ಲಿಸಿದರು.

ಈ ಮಧ್ಯೆ ಹರಿಭಟ್ ಮರಣಹೊಂದಿದರು. ತನ್ನ ತಂದೆ ಗಣೇಶಭಟ್ ಗೃಹಕೃತ್ಯದ ವಿಷಯದಲ್ಲಿ ಯಾವ ಆಸಕ್ತಿಯನ್ನೂ ತೋರಿಸುತ್ತಿರಲಿಲ್ಲವಾದುದರಿಂದ ಮನೆಯ ಭಾರವೆಲ್ಲ ಯುವ ವಾಸುದೇವನ ಹೆಗಲಿಗೇ ಬಿದ್ದಿತು. ತಮ್ಮ ಮನೆತನದ ಪೌರೋಹಿತ್ಯ ವೃತ್ತಿಯನ್ನು ಇವನು ಮುಂದುವರಿಸಿದನು. ಅವನ ವಿದ್ವತ್ತು, ಜ್ಞಾನ ಮತ್ತು ವಿನಯಗಳು ಮನಗಾಂವ್ ಜನಗಳಿಗೆ ತುಂಬ ಹಿಡಿಸಿತು. ಅದರಿಂದ ಅವರುಗಳು ಅವನ ಮಾರ್ಗದರ್ಶನ ಅರಸುತ್ತಿದ್ದರು.

ವಾಸುದೇವನಿಗೆ ಇಪ್ಪತ್ತೊಂದು ವರ್ಷವಾದಾಗ, ಅವನನ್ನು ಕೇಳದೆ ಅವನ ಮದುವೆಯನ್ನು ಹಿರಿಯರು ೧೮೭೫ರಲ್ಲಿ ನಿರ್ಧರಿಸಿದರು. ರಂಗನಗಡದ ಬಾಬಾ ಗೋಡೆಯವರ ಪುತ್ರಿ ಅನ್ನಪೂರ್ಣಳೇ ವಧು. ತನ್ನ ಹಿರಿಯರಿಗೆ ವಿಧೇಯನಾಗಿರುವ ದೃಷ್ಟಿಯಿಂದ ಈ ಮದುವೆಗೆ ವಾಸುದೇವನು ಒಪ್ಪಿಗೆ ನೀಡಿದನು. ತನಗೆ ನಿಜವಾದ ಆಸಕ್ತಿ ಇಲ್ಲದಿದ್ದರೂ, ಶಾಸ್ತ್ರಗಳು ತಿಳಿಸಿರುವಂತೆ ಗೃಹಸ್ಥಾಶ್ರಮದ ಎಲ್ಲ ಕೆಲಸ ಕಾರ್ಯಗಳನ್ನೂ ಶ್ರದ್ಧೆಯಿಂದ ನೆರವೇರಿಸುತ್ತಿದ್ದನು. ತನ್ನ ಗಂಡನ ಮನೋಭಾವವನ್ನು ತಿಳಿದಿದ್ದ ಅನ್ನಪೂರ್ಣೆಯು, ಅವನನ್ನು ದೂಷಿಸದೆ ಅವನ ಎಲ್ಲ ಬೇಕು–ಬೇಡಗಳನ್ನು ಒಳ್ಳೆಯ ಪತ್ನಿಯಂತೆ ಸರಿಯಾಗಿ ನೋಡಿಕೊಳ್ಳುತ್ತಿದ್ದಳು.

ಈಗ ಇವನನ್ನು ವಾಸುದೇವ ಶಾಸ್ತ್ರಿ ಎಂದು ಜನಗಳು ಕರೆಯುತ್ತಿದ್ದರು. ಇವನು ತನ್ನ ವಿದ್ಯಾಭ್ಯಾಸವನ್ನು ಎಂದಿನಂತೆ ಮುಂದುವರಿಸುತ್ತಿದ್ದನು. ಎರಡು ವರ್ಷಗಳ ನಂತರ ಇವನು ಹೆಚ್ಚಿನ ಜ್ಯೋತಿಷ್ಯಶಾಸ್ತ್ರ ಶಿಕ್ಷಣಕ್ಕಾಗಿ ಗೋವೆಗೆ ಹೋಗಿದ್ದಾಗ ಇವನ ತಂದೆ ಗಣೇಶಭಟ್ಟನು ತೀವ್ರ ಅನಾರೋಗ್ಯಕ್ಕೆ ಒಳಗಾದನು. ವಾಸುದೇವ ಶಾಸ್ತ್ರಿಯು ತನ್ನ ಶಿಕ್ಷಣವನ್ನು ಬಿಟ್ಟು ಕೊನೆಗಾಲದಲ್ಲಿ ತನ್ನ ತಂದೆಯ ಹತ್ತಿರ ಇರುವ ದೃಷ್ಟಿಯಿಂದ ಊರಿಗೆ ಹಿಂದಿರುಗಿದನು. ೧೮೭೭ರಲ್ಲಿ ಗಣೇಶಭಟ್ಟನು ಗಾಣಗಾಪುರದಲ್ಲಿ ಮರಣ ಹೊಂದಿದನು.

ಮನಗಾಂವ್‌ನಲ್ಲಿ ಮನೆಯ ಸ್ಥಿತಿ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಅನ್ನಪೂರ್ಣ ಮತ್ತು ಅವಳ ಅತ್ತೆಗೆ ಆಗಾಗ್ಗೆ ಜಗಳಗಳಾಗುತ್ತಿದ್ದವು. ಇಷ್ಟಾದರೂ ಕರ್ತವ್ಯ ಪ್ರಜ್ಞೆಯುಳ್ಳ ಮಗನಂತೆ ವಾಸುದೇವನು ತನ್ನ ತಾಯಿಗೆ ವಿರುದ್ಧವಾಗಿ ಒಂದು ಮಾತನ್ನೂ ಆಡಲಿಲ್ಲ. ಆದರೂ ಇದರಿಂದ ಬೇಸತ್ತ ಇವನಿಗೆ ಸನ್ಯಾಸವನ್ನು ತೆಗೆದುಕೊಳ್ಳುವ ವಿಷಯ ಆಗಾಗ್ಗೆ ಮನಸ್ಸಿಗೆ ಬರುತ್ತಿತ್ತು. ದತ್ತಾತ್ರೇಯನ ಭಕ್ತನಾದುದರಿಂದ ನರಸೋಬವಾಡಿಯನ್ನು ಸಂದರ್ಶಿಸುವ ಆಸೆ ಇವನಿಗೆ ಉಂಟಾಯಿತು. ಒಂದು ದಿನ ಸ್ವಪ್ನದಲ್ಲಿ ಒಬ್ಬನು ಕಾಣಿಸಿಕೊಂಡು, ನರಸೋಬವಾಡಿಗೆ ಹೋಗಿ ಗೋವಿಂದಸ್ವಾಮಿ ಎಂಬ ಸಂತನನ್ನು ಭೇಟಿಯಾಗಲು ಹೇಳಿದನು. ಇದು ನಿಜವಾಗಿ ದೈವ ಪ್ರೇರಿತವೇ ಆಗಿದ್ದಿತು. ಏಕೆಂದರೆ ವಾಸುದೇವನು ಅಲ್ಲಿಗೆ ಹೋಗಿ ಆ ಸಂತನನ್ನು ಕಂಡಾಗ, ನಾನು ನಿನ್ನ ಬರುವಿಕೆಗಾಗಿ ಕಾಯುತ್ತಿದ್ದೆ



ಎಂದು ಹೇಳಿದನು. ವಾಸುದೇವನು ಗೋವಿಂದ ಸ್ವಾಮಿಗಳ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿ ವಹಿಸಲು ಆರಂಭಿಸಿದನು. ಇದಾದನಂತರ ವಾಸುದೇವನು ಆಗಾಗ್ಗೆ ನರಸೋಬವಾಡಿಗೆ ಹೋಗಿ ಋಷಿ ಸದೃಶ ಮೌನಸ್ವಾಮಿಯವರ ಸಂಪರ್ಕ ಉಂಟಾಯಿತು.

ಇತ್ತ ಕಡೆ ಇವನ ತಾಯಿ ಮತ್ತು ಹೆಂಡತಿಯರಲ್ಲಿ ನಡೆಯುತ್ತಿದ್ದ ಕಲಹಗಳು, ಇವನನ್ನು ಸನ್ಯಾಸದ ಕಡೆಗೆ ಆಸಕ್ತಿ ವಹಿಸುವಂತೆ ಮಾಡುತ್ತಿದ್ದವು. ತನ್ನನ್ನು ಗೃಹಕೃತ್ಯ ಜೀವನದಿಂದ ಮುಕ್ತಿಗೊಳಿಸಬೇಕೆಂದು ಆಗಾಗ್ಗೆ ಇವನು ದತ್ತಾತ್ರೇಯನನ್ನು ಪ್ರಾರ್ಥಿಸುತ್ತಲೇ ಇದ್ದನು. ಆದರೆ ದೇವರ ಇಚ್ಛೆ ಬೇರೆಯದಾಗಿತ್ತು. ಅವನು ಇನ್ನೂ ಏಳು ವರ್ಷಗಳ ಕಾಲ ಮನಗಾಂನಲ್ಲೇ ಇರಬೇಕೆಂದೂ ತಾನೂ ಅವನ ಜೊತೆಯಲ್ಲಿಯೇ ವಾಸಿಸಲು ಇಚ್ಛಿಸುವುದಾಗಿಯೂ ದತ್ತಾತ್ರೇಯನು ತಿಳಿಸಿದನು. ಇದು ನಿಜವೇ ಆಯಿತು. ಇವನು ನರಸೋಬವಾಡಿಯಿಂದ ಮನಗಾಂವ್‌ಗೆ ಹಿಂದಿರುಗುತ್ತಿದ್ದಾಗ ಕೊಲ್ಲಾಪುರದ ಮಹಾಲಕ್ಷ್ಮಿಗೆ ಪೂಜೆಯನ್ನು ಸಲ್ಲಿಸಿ ಕಗಲ್ ಎಂಬ ಸ್ಥಳಕ್ಕೆ ಬಂದನು. ಇಲ್ಲಿ ಒಬ್ಬ ಅಕ್ಕಸಾಲಿಗನು ದತ್ತಾತ್ರೇಯನ ಒಂದು ವಿಗ್ರಹವನ್ನು ಮಾಡಿ ವಾಸುದೇವಶಾಸ್ತ್ರಿಗೆ ತಾನೇ ತಂದುಕೊಟ್ಟನು. ಇದನ್ನು ಎಲ್ಲಿ ಪ್ರತಿಷ್ಠಾಪನೆ ಮಾಡಬೇಕು ಎಂದು ಯೋಚಿಸುತ್ತಿದ್ದಾಗ ಒಬ್ಬ ಮಹಿಳೆಯು ದೇವಾಲಯಕ್ಕಾಗಿ ಭೂಮಿಯನ್ನು ದಾನ ನೀಡಿದಳು. ಮನಗಾಂವ್‌ನ ಈ ದೇವಾಲಯದಲ್ಲಿ ದತ್ತಾತ್ರೇಯನ ವಿಗ್ರಹವನ್ನು ೧೮೮೩ರಲ್ಲಿ ಪ್ರತಿಷ್ಠಾಪಿಸಲಾಯಿತು.

ಅಂದಿನಿಂದ ವಾಸುದೇವ ಶಾಸ್ತ್ರಿಯು ದೇವಾಲಯದಲ್ಲಿ ದತ್ತಾತ್ರೇಯನಿಗಾಗಿ ತನ್ನ ಎಲ್ಲ ಶ್ರಮವನ್ನೂ ವಿನಿಯೋಗಿಸಲು ಆರಂಭಿಸಿದನು. ಮನೆಯನ್ನು ಬಿಟ್ಟು ದೇವಾಲಯದಲ್ಲಿ ವಾಸ ಮಾಡಿಕೊಂಡು, ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳಲು, ಪಾತ್ರೆ ತೊಳೆಯಲು ಆರಂಭಿಸಿದನು. ಅಲ್ಲಿಯೇ ರಾತ್ರಿ ಮಲಗಲೂ ಪ್ರಾರಂಭಿಸಿದನು. ತನ್ನ ಚಾರಿತ್ರ್ಯದ ಬಗ್ಗೆ ವಿಶೇಷ ನಿಷ್ಠೆಯಿಂದ ಇದ್ದು, ದೇವರಿಗೆ ಮಾಡಬೇಕಾದ ಎಲ್ಲ ಕಾರ್ಯಗಳನ್ನು ಸಮರ್ಪಕವಾಗಿ ಮಾಡಲು ಆರಂಭಿಸಿದನು. ಪ್ರತಿದಿನ ಬೆಳಿಗ್ಗೆ ಪೂಜಾದಿ ಇತರ ಕೈಂಕರ್ಯಗಳಲ್ಲಿ ನಿರತನಾಗಿರುತ್ತಿದ್ದನು. ಹಾಗೂ ಸಾಯಂಕಾಲದ ಆರತಿಯನ್ನು ಪ್ರತಿ ಶನಿವಾರವೂ ಭಕ್ತಿಯಿಂದ ನೆರವೇರಿಸುತ್ತಿದ್ದನು. ಮಧ್ಯಾಹ್ನದ ಸಮಯದಲ್ಲಿ ಜನಗಳಿಗೆ ಮಾರ್ಗದರ್ಶನ, ಅವರ ಸಮಸ್ಯೆಗಳನ್ನು ಬಿಡಿಸುವುದು, ಅವರಿಗೆ ಉತ್ತರ ನೀಡುವುದು ಮತ್ತು ಪ್ರವಚನಗಳನ್ನು ನೀಡುವುದು, ಭೂತ ಪಿಶಾಚಿಗಳಿಂದ ಜನಗಳನ್ನು ಬಿಡಿಸುವುದು ಮುಂತಾದವನ್ನು ಮಾಡುತ್ತಿದ್ದನು. ತಾನು ಏನಾದರೂ ಮಾಡಿ, ಜನಗಳಿಗೆ ಅದರ ಫಲ ಬಂದರೆ, ಅದಕ್ಕೆ ತಾನೇ ಕಾರಣ ಎಂದು ಹೇಳಿಕೊಳ್ಳದೆ, ಮನಗಾಂವ್

ದೇಗುಲದಲ್ಲಿರುವ ದತ್ತಾತ್ರೇಯನ ಕೃಪೆ ಎಂದು ಹೇಳಿ ಬಿಡುತ್ತಿದ್ದನು. ಈ ಸಮಯದಲ್ಲಿ ಅವನು ಮರಾಠೀ ಗುರುಚರಿತ್ರೆಯನ್ನು ಸಂಸ್ಕೃತದಲ್ಲಿ ರಚಿಸಿದನು.

ಕೆಲವು ವರ್ಷಗಳ ಕಾಲ ಅವನು ಮನೆಗೆ ಬಂದು ಹೆಂಡತಿಯೊಡನೆ ವಾಸಿಸಲು ಆರಂಭಿಸಿದನು. ದತ್ತಾತ್ರೇಯನ ಆಜ್ಞೆಯ ಪ್ರಕಾರ ಹೀಗೆ ಮಾಡುತ್ತಿರುವುದಾಗಿಯೂ, ತಾನು ನೇರವಾಗಿ ದತ್ತಾತ್ರೇಯನೊಡನೆ ಮಾತನಾಡುತ್ತೇನೆಂದೂ ಹೇಳುತ್ತಿದ್ದನು. ಕೊನೆಗೆ ೧೮೮೯ರಲ್ಲಿ ಏಳು ವರ್ಷಗಳ ಅವಧಿಯು ಮುಗಿಯುತ್ತದೆ ಎಂದು ತಿಳಿದು, ತನ್ನ ಗರ್ಭಿಣಿ ಹೆಂಡತಿಯನ್ನೂ ಕರೆದುಕೊಂಡು ಮನಗಾಂವ್ ಬಿಟ್ಟು, ನರಸೋಬವಾಡಿಗೆ ಹೊರಟನು. ಅಲ್ಲಿ ನಾರಾಯಣಸ್ವಾಮಿ ಮಠದಲ್ಲಿ ತಂಗಿದನು. ಇಲ್ಲಿ ಅನ್ನಪೂರ್ಣ ಮಗನಿಗೆ ಜನ್ಮ ನೀಡಿದಳು. ಆದರೆ ಮಗುವು ತಕ್ಷಣವೇ ಸತ್ತುಹೋಯಿತು. ಸ್ವಲ್ಪ ಸಮಯದ ನಂತರ ಗೋವಿಂದಸ್ವಾಮಿಯೂ ಮರಣ ಹೊಂದಿದನು. ವಾಸುದೇವ ಶಾಸ್ತ್ರಿ ಮತ್ತು ಅನ್ನಪೂರ್ಣ ನರಸೋಬವಾಡಿಯನ್ನು ಬಿಟ್ಟು, ಕೊಲ್ಲಾಪುರ, ಭಿಲ್ವಾಡಿ, ಔದುಂಬರ್, ಪಂಡರಪುರ, ಬಾರ್ಸಿ ಮುಂತಾದ ಸ್ಥಳಗಳನ್ನು ನೋಡಿಕೊಂಡು ಗಂಗಾಖೇಡ್ ಎನ್ನುವ ಸ್ಥಳಕ್ಕೆ ಬಂದರು. ೧೮೯೧ರಲ್ಲಿ, ಈ ಸ್ಥಳದಲ್ಲಿ ಅನಾರೋಗ್ಯದಿಂದ ಅನ್ನಪೂರ್ಣ ಮರಣ ಹೊಂದಿದಳು. ಅವಳು ಮರಣ ಹೊಂದಿದ ಹದಿನಾಲ್ಕನೆಯ ದಿನದಂದು ವಾಸುದೇವ ಶಾಸ್ತ್ರಿಯು ತನ್ನ ಕುಟುಂಬದೊಡನೆ ಎಲ್ಲ ಸಂಬಂಧಗಳನ್ನೂ ತ್ಯಜಿಸಿ ಸನ್ಯಾಸಿಯಾದನು. ಸ್ವಲ್ಪ ದಿನಗಳ ನಂತರ ಉಜ್ಜಯಿನಿಯಲ್ಲಿ ಸನ್ಯಾಸಿಯ ದಂಡವನ್ನು ಶ್ರೀ ನಿತ್ಯಾನಂದ ಸರಸ್ವತೀ ಸ್ವಾಮಿಗಳಿಂದ ಪಡೆದು ವಾಸುದೇವ ಶಾಸ್ತ್ರಿಯು ಶ್ರೀ ವಾಸುದೇವಾನಂದ ಸರಸ್ವತಿಯಾದನು.

ಆಗಲೇ ಹೇಳಿರುವಂತೆ ವಾಸುದೇವಾನಂದ ಸರಸ್ವತಿಯವರು ವೈದಿಕ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ನಿಯಮಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದರು. ಆದುದರಿಂದ ವೈಯಕ್ತಿಕ ಚಾರಿತ್ರ್ಯಕ್ಕೆ ಸನ್ಯಾಸಿಯ ಜೀವನದಲ್ಲೂ ಪ್ರಾಮುಖ್ಯ ನೀಡುತ್ತಿದ್ದರು. ಚಾತುರ್ಮಾಸ ಸಮಯವನ್ನು ಬಿಟ್ಟರೆ, ಎಲ್ಲಿಯೂ ಮೂರು ದಿನಗಳಿಗೆ ಹೆಚ್ಚು ಸಮಯ ಒಂದು ಸ್ಥಳದಲ್ಲಿರುತ್ತಿರಲಿಲ್ಲ. ಅವರು ಯಾವ ಆಸ್ತಿಗಳನ್ನೂ ಗಳಿಸಲಿಲ್ಲ; ದೈನಂದಿನ ಜೀವನಕ್ಕೆ ಬೇಕಾದ ವಸ್ತುಗಳನ್ನು ಮಾತ್ರ ತಮ್ಮ ಹತ್ತಿರ ಇಟ್ಟುಕೊಳ್ಳುತ್ತಿದ್ದರು. ಮೂರು ಮನೆಗಳಿಂದ ಏನು ಭಿಕ್ಷೆ ಸಿಗುತ್ತದೆಯೋ ಅದನ್ನು ಮಾತ್ರ ಸ್ವೀಕರಿಸುತ್ತಿದ್ದರು. ಯಾವ ಪರಿಸ್ಥಿತಿಯಲ್ಲಿಯೂ ದಿನನಿತ್ಯದ ಪೂಜಾ ಕೈಂಕರ್ಯಗಳನ್ನು ಬಿಡುತ್ತಿರಲಿಲ್ಲ. ಈ ಎಲ್ಲ ನಿಯಮಗಳನ್ನು ಪಾಲಿಸುತ್ತ ಪಾದಚಾರಿಯಾಗಿ ಊರಿಂದ ಊರಿಗೆ ಅಲೆಯುತ್ತಿದ್ದರು. ಆದರೆ ಮನಗಾಂವ್‌ಗೆ ಮಾತ್ರ ಮತ್ತೆ ಹೋಗಲಿಲ್ಲ. ವೈದಿಕ ಸಂಪತ್ತಿನ ಬಗ್ಗೆ ಜನಗಳಿಗೆ ತಿಳುವಳಿಕೆ ನೀಡುವುದು ಮತ್ತು ತನ್ನ ಬಳಿಗೆ ಬಂದವರ ನೋವನ್ನು ಕಡಿಮೆ ಮಾಡುವ



ಕಾರ್ಯಗಳನ್ನು ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಮಾಡಬೇಕೆಂದು ದತ್ತಾತ್ರೇಯನೇ ಅಪ್ಪಣೆ ಮಾಡಿದ್ದಾನೆಂದು ಅವರು ಹೇಳುತ್ತಿದ್ದರು.

ವಾಸುದೇವಾನಂದ ಸರಸ್ವತಿಗಳು ಚಾತುರ್ಮಾಸ್ಯ ಸಮಯದಲ್ಲಿ ಒಂದು ಸ್ಥಳದಲ್ಲಿ ಹೆಚ್ಚಿಗೆ ಸಮಯ ತಂಗುತ್ತಿದ್ದರು. ಕ್ರಿ.ಶ. ೧೮೯೧ರಿಂದ ೧೯೧೪ರವರೆಗೆ ಇಪ್ಪತ್ತಮೂರು ಸ್ಥಳಗಳಲ್ಲಿ ತಂಗಿದ್ದರು. ಇದರಲ್ಲಿ ಮೊದಲನೆಯ ಸ್ಥಳವೇ ಉಜ್ಜಯಿನಿ. ಈ ಸಮಯದಲ್ಲಿ ಅವರು ಸಂಸ್ಕೃತದಲ್ಲಿ ದತ್ತ ಪುರಾಣ ಮುಂತಾದ ಗ್ರಂಥಗಳನ್ನು ರಚಿಸಿದರು. ಇದನ್ನು ಬ್ರಹ್ಮಾವರ್ತದಲ್ಲಿ ೧೮೯೨ರಲ್ಲಿ ಬರೆದರು: ಪೆತ್‌ಲಾಡ್ ಎಂಬ ಸ್ಥಳದಲ್ಲಿ ೧೮೯೭ರಲ್ಲಿ ದತ್ತಲೀಲಾಮೃತ ಸಿಂಧುವನ್ನು ಬರೆದರು; ಪ್ರಭಾಸ್ ಮತ್ತು ದ್ವಾರಕಗಳಲ್ಲಿ ೧೮೯೯ರಲ್ಲಿ ಗುರುಚರಿತ್ರೆಯನ್ನು ಭಾಷ್ಯವನ್ನು ರಚಿಸಿದರು; ೧೯೦೨ರಲ್ಲಿ ಬ್ರಹ್ಮಾವರ್ತದಲ್ಲಿ ಸಂಶ್ಲೋಕಿ ಗುರು ಚರಿತ್ರವನ್ನು ಬರೆದರು. ೧೯೦೨ರಲ್ಲಿ ಅವರ ತಾಯಿಯು ಮರಣ ಹೊಂದಿದ ಸುದ್ದಿ ಅವರಿಗೆ ತಲುಪಿತು.

ಈ ರೀತಿಯ ತಿರುಗಾಟದ ಸಮಯದಲ್ಲಿ ವಾಸುದೇವಾನಂದ ಸರಸ್ವತಿಯವರು ಅನೇಕ ಜನಗಳನ್ನು ಭೇಟಿ ಮಾಡಿ, ಅವರ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹಾಗೂ ಅವರ ನಿಜವಾದ ಇಚ್ಛೆಗಳನ್ನು ಪೂರೈಸಿಕೊಳ್ಳುವುದಕ್ಕೂ ಸಹಾಯ ಮಾಡಿದರು. ಅಂತಹ ಜನಗಳಿಗೆ ಔಷಧಿ, ಮಂತ್ರಗಳನ್ನು ನೀಡಿದರು ಮತ್ತು ಪೂಜಾದಿ ಕಾರ್ಯಗಳನ್ನು ಮಾಡುವಂತೆ ಸಲಹೆ ನೀಡಿದರು. ಜೊತೆಗೆ ಅವರು ಸಾಮಾನ್ಯ ಜನಗಳಿಗೆ ಪ್ರವಚನಗಳನ್ನು ನೀಡಿದರು, ಪ್ರಶ್ನೆಗಳಿಗೆ ಉತ್ತರಿಸಿದರು. ಈ ರೀತಿ ದತ್ತಾತ್ರೇಯರೇ ತಮಗೆ ಆಜ್ಞೆ ಮಾಡಿದರೆಂದು ತಾವು ಭಾವಿಸಿದ್ದ ಎಲ್ಲ ಕೆಲಸಗಳನ್ನು ಮಾಡಿ ಮುಗಿಸಿದರು. ಅವರು ಯಾವಾಗಲೂ ಒಳ್ಳೆಯ ಚಾರಿತ್ರ್ಯಕ್ಕೆ ಹಾಗೂ ದೇವರಿಗೆ ನಂಬಿಕೆ ಮತ್ತು ಪೂರ್ಣ ಭಕ್ತಿಯನ್ನು ತೋರಿಸುವುದರ ಬಗ್ಗೆ ಪ್ರಾಮುಖ್ಯ ನೀಡಿದರು. ಇವರ ಜೊತೆ ಸಂಪರ್ಕಕ್ಕೆ ಬಂದವರೆಲ್ಲರೂ ಇವರ ಸಮೀಪವರ್ತಿಗಳಾಗಿ ಕೊನೆಗೆ ಜೀವನಪರ್ಯಂತ ಇವರ ಶಿಷ್ಯರಾಗಿದ್ದರು.

ಇವರಲ್ಲಿ ಒಬ್ಬರು ಶ್ರೀ ಯೋಗಾನಂದ ಸರಸ್ವತಿಯವರು. ಅವರ ಮೂಲ ಹೆಸರು ಕಲ್ಯಾಣ್‌ಜಿ. ಆದರೆ ಇವರ ವಿಚಿತ್ರ ನಡವಳಿಕೆಯಿಂದ ಇವರನ್ನು ಗಂಧ ಎಂದು ಕರೆಯಲಾರಂಭಿಸಿದರು. ಇವರು ಯುವಕರಾಗುವವರೆಗೆ ಮಾಮೂಲಿನಂತೆ ಇದ್ದರು. ಆದರೆ ಇವರ ಆಂತರ್ಯದಲ್ಲಿ ಸನ್ಯಾಸವನ್ನು ಸ್ವೀಕರಿಸಿ ಶ್ರೇಷ್ಠ ಸತ್ಯದ ಕಡೆಗೆ ತಿರುಗಬೇಕೆಂಬ ಆಕಾಂಕ್ಷೆ ಇದ್ದಿತು. ಆಧ್ಯಾತ್ಮಿಕ ಗುರುವನ್ನು ಅರಸಿಕೊಂಡು ಹೋಗುತ್ತಿದ್ದಾಗ ಪಾಂಡುರಂಗ ಸ್ವಾಮಿ ಎಂಬುವರನ್ನು ಭೇಟಿಯಾದರು. ಇವರು ವಾಸುದೇವಾನಂದ ಸರಸ್ವತಿಯವರನ್ನು ಸೂಚಿಸಿದರು. ಬರೋಡಕ್ಕೆ ಸಮೀಪದ ಶಿನೋರ್ ಎಂಬಲ್ಲಿ ಈ ಸಮಯದಲ್ಲಿ ವಾಸುದೇವಾನಂದ ಸರಸ್ವತಿಯವರು ತಂಗಿದ್ದರು. ಮೊದಲನೆಯ ಭೇಟಿಯಲ್ಲೇ ವಾಸುದೇವಾನಂದರು ಊರಿಗೆ ಹಿಂದಿರುಗಿ

ಸಂಸಾರಿಯಾಗಿದ್ದುಕೊಂಡು ಆಧ್ಯಾತ್ಮವನ್ನು ಮುಂದುವರಿಸಬೇಕೆಂದು ಗಂದನಿಗೆ ಸಲಹೆ ನೀಡಿದರು. ಅವರಲ್ಲಿ ಪೂರ್ಣ ನಂಬಿಕೆಯನ್ನಿಟ್ಟುಕೊಂಡು, ಗುರುಗಳು ನೀಡಿದ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆದುದರಿಂದ ಅವರಿಗೆ ಸನ್ಯಾಸ ನೀಡಿ ಯೋಗಾನಂದ ಸರಸ್ವತಿ ಎಂಬ ಹೆಸರನ್ನು ನೀಡಿದರು. ಆದರೆ ಸಾಮಾನ್ಯವಾಗಿ ಇವರನ್ನು ಗಂದಮಹಾರಾಜ್ ಎಂದೇ ಜನರು ಕರೆಯುತಿದ್ದರು. ಅವರು ತಮ್ಮ ಗುರುಗಳ ಅಪ್ಪಣೆಯ ಮೇರೆಗೆ ತಮ್ಮ ಧಾರ್ಮಿಕ ಕೆಲಸವನ್ನು ಗೋದಾವರಿ ನದಿಯ ದಡದ ಪ್ರದೇಶದಲ್ಲಿ ಕೈಗೊಂಡರು. ಕೊನೆಗೆ ಅವರು ಗುಂಜ್ ಎಂಬಲ್ಲಿ ಮುಕ್ತಿ ಹೊಂದಿದರು.

ಶಿನೋರ್ ಎಂಬಲ್ಲಿ ರಾಮಶಾಸ್ತ್ರಿ ಎಂಬ ವೇದಪಾರಂಗತನು ವಾಸುದೇವಾನಂದರನ್ನು ನೋಡಲು ಬಂದನು. ಕೆಲವು ದಿನಗಳ ಹಿಂದೆ ರಾಮಶಾಸ್ತ್ರಿಯು ಇನ್ನೊಬ್ಬ ಸಂತನೊಡನೆ ಸಂಸ್ಕೃತದಲ್ಲಿ ಮಾತನಾಡಿದ್ದಂತೆ ಕನಸು ಬಿದ್ದಿತು. ಆ ಸಂಸ್ಕೃತದ ಮಾತುಗಳನ್ನು ಪೂರ್ತಿಯಾಗಿ ವಾಸುದೇವಾನಂದರು ಪುನರುಚ್ಚಾರಣೆ ಮಾಡಿದರು. ಇದರಿಂದ ರಾಮಶಾಸ್ತ್ರಿಗೆ ವಾಸುದೇವಾನಂದರ ಬಗ್ಗೆ ಇದ್ದ ಸಂದೇಹಗಳು ಮಾಯವಾದವು. ಕೊನೆಗೆ ಅವರು ವಾಸುದೇವಾನಂದ ಸರಸ್ವತಿಯ ಪ್ರಿಯ ಶಿಷ್ಯರಲ್ಲಿ ಒಬ್ಬರಾಗಿ ಉಳಿದರು.

ವಾಸುದೇವಾನಂದ ಸರಸ್ವತಿಯವರ ಪ್ರಭಾವವಲಯಕ್ಕೆ ಒಳಗಾದ ಇನ್ನಿಬ್ಬರೆಂದರೆ ಶ್ರೀರಂಗ ಅವಧೂತರು ಮತ್ತು ದೀಕ್ಷಿತ ಸ್ವಾಮಿಗಳು. ಅವಧೂತರು ನರ್ಮದಾ ತೀರದ ಬರೋಡದ ಸಮೀಪದ ನಾರೇಶ್ವರದಲ್ಲಿ ನೆಲೆನಿಂತ ಸಂತರು. ದೀಕ್ಷಿತ ಸ್ವಾಮಿಗಳಿಗೆ ವಾಸುದೇವಾನಂದ ಸರಸ್ವತಿಯವರು ನರಸೋಬವಾಡಿಯಲ್ಲಿ ಸನ್ಯಾಸ ನೀಡಿ ನೃಸಿಂಹಸರಸ್ವತಿ ಎಂಬ ಹೊಸ ಹೆಸರನ್ನು ಕೊಟ್ಟರು. ವಾಸುದೇವಾನಂದ ಸರಸ್ವತಿಯವರ ಪಾದುಕೆಗಳನ್ನು ಹೊಂದುವ ಭಾಗ್ಯ ದೀಕ್ಷಿತ ಸ್ವಾಮಿಯವರಿಗೆ ಒದಗಿ ಬಂದಿತು. ಈಗ ಈ ಪಾದುಕೆಗಳನ್ನು ನರಸೋಬವಾಡಿಯ ಸಮೀಪದ ಒರ್ವಾದ್ ಎಂಬಲ್ಲಿರುವ ದತ್ತಾತ್ರೇಯ ದೇವಾಲಯದಲ್ಲಿ ಇಡಲಾಗಿದೆ. ವಾಸುದೇವಾನಂದ ಸರಸ್ವತಿಯವರು ತಮ್ಮ ಜೀವಿತಾವಧಿಯಲ್ಲಿ ಮೂರು ದತ್ತಾತ್ರೇಯ ವಿಗ್ರಹಗಳನ್ನು ಆರಾಧಿಸುತ್ತಿದ್ದರು. ಇವುಗಳಲ್ಲಿ ಒಂದು ಮನಗಾಂ ದೇವಾಲಯದಲ್ಲಿದೆ; ಕಗಲ್ ಎಂಬಲ್ಲಿ ಅವರಿಗೆ ನೀಡಲಾದ ಪಾದುಕೆಗಳು ಬಧವಾಯಿನಲ್ಲಿರುವ ವಾಸುದೇವ ದೇವಾಲಯದಲ್ಲಿದೆ. ಅವರು ತಮ್ಮ ಜೊತೆ ತೆಗೆದುಕೊಂಡು ಹೋಗುತ್ತಿದ್ದ ಪಾದುಕೆಗಳು ಗರುಡೇಶ್ವರದ ದತ್ತಾತ್ರೇಯ ದೇವಾಲಯದಲ್ಲಿದೆ.

ಈ ಗರುಡೇಶ್ವರದಲ್ಲಿ ಶ್ರೀ ವಾಸುದೇವಾನಂದ ಸರಸ್ವತಿಯವರು ತಮ್ಮ ಕೊನೆಯ ದಿನಗಳನ್ನು ಕಳೆದರು. ಇದಕ್ಕೆ ಮುಂಚೆ ದಕ್ಷಿಣ ಭಾರತದ ರಾಮೇಶ್ವರ, ಶ್ರೀರಂಗಂ, ಶ್ರೀಶೈಲ, ತಂಜಾವೂರು ಮುಂತಾದ ಸ್ಥಳಗಳನ್ನು ಸಂದರ್ಶಿಸಿದ್ದರು.



ಈ ಸಮಯದಲ್ಲಿ ಅವರು ಶ್ರೀ ಶ್ರೀಪಾದವಲ್ಲಭರ ಜನ್ಮಸ್ಥಳ ಪೀಠಾಪುರಂ (ಆಂಧ್ರಪ್ರದೇಶ)ವನ್ನು ಬೆಳಕಿಗೆ ತಂದರು ಮತ್ತು ಶೃಂಗೇರಿ ಮಠದ ಶ್ರೀ ಶಂಕರಾಚಾರ್ಯರನ್ನು ಭೇಟಿ ಮಾಡಿದರು. ಶೃಂಗೇರಿಯ ಶಂಕರಚಾರ್ಯರು ವಾಸುದೇವಾನಂದ ಸರಸ್ವತಿಯವರನ್ನು ದತ್ತಾತ್ರೇಯನ ಅವತಾರ ಎಂದು ಶ್ಲಾಘಿಸಿದರು.

೧೯೧೩ರಲ್ಲಿ ವಾಸುದೇವಾನಂದ ಸರಸ್ವತಿಯವರು ವಾರ್ಷಿಕ ಬಿಡದಿಗಾಗಿ ಗರುಡೇಶ್ವರದಲ್ಲಿ ತಂಗಿದರು. ಅವಿರತ ಓಡಾಟ, ಅನಾರೋಗ್ಯ ಹಾಗೂ ಕಟ್ಟುನಿಟ್ಟಾದ ಜೀವನಗಳು ಇವರ ಶರೀರವನ್ನು ಅಶಕ್ತವನ್ನಾಗಿಸಿದ್ದವು. ಅವರು ಖಾಯಿಲೆಗೆ ತುತ್ತಾದರು, ಆದರೆ ಔಷಧಿಯನ್ನು ಸೇವಿಸಲು ನಿರಾಕರಿಸಿದರು. ಇದರಿಂದ ಇನ್ನು ನಿಶ್ಶಕ್ತರಾದರು. ಶಕೆ ೧೮೩೬ ಅಥವಾ ಕ್ರಿ.ಶ. ೧೯೧೪ರ ಆಷಾಢ ಶುದ್ಧ ಪಾಡ್ಯದಂದು ಇಹಲೋಕದ ವ್ಯಾಪಾರವನ್ನು ತ್ಯಜಿಸಿದರು. ನರ್ಮದಾ ತೀರದಲ್ಲಿ ಇವರ ಶರೀರಕ್ಕೆ ಸಂಸ್ಕಾರ ಮಾಡಿದರು ಮತ್ತು ನದಿಯ ತೀರದಲ್ಲಿ ಗರುಡೇಶ್ವರದಲ್ಲಿ ಅವರ ಸಮಾಧಿಯನ್ನು ನಿರ್ಮಿಸಿದರು.

ಶಿವ ಮಹಾದೇವನಿಂದ ವರವನ್ನು ಪಡೆಯುವುದಕ್ಕಾಗಿ ಗರುಡನು ಇಲ್ಲಿ ತಪಸ್ಸು ಮಾಡಿದ್ದುದರಿಂದ ಈ ಸ್ಥಳಕ್ಕೆ ಗರುಡೇಶ್ವರ ಎಂಬ ಹೆಸರು ಬಂದಿತು ಎನ್ನುವುದು ಐತಿಹ್ಯ. ನರ್ಮದಾ ದಡದಲ್ಲಿರುವ ಈ ಸ್ಥಳವನ್ನು ರಸ್ತೆಯ ಮೂಲಕ ಸುಲಭವಾಗಿ ತಲುಪಬಹುದು. ಇದು ಬರೋಡದಿಂದ ೯೨ ಕಿ.ಮೀ.ನಲ್ಲಿ ರಾಜಪಿಪ್ಲಕ್ಕೆ ಹೋಗುವ ಮಾರ್ಗದಲ್ಲಿದ್ದು, ಸುಮಾರು ಒಂದೂವರೆ–ಎರಡು ಗಂಟೆಗಳಲ್ಲಿ ತಲುಪಬಹುದು. ವರ್ಷಪೂರ್ತಿ ಇಲ್ಲಿಗೆ ಆಗಮಿಸುವ ಭಕ್ತರಿಗಾಗಿ ಗರುಡೇಶ್ವರ ಸಂಸ್ಥಾನ ಟ್ರಸ್ಟ್ ಎಲ್ಲ ಸೌಕರ್ಯಗಳನ್ನೂ ಮಾಡಿದೆ. ಇಲ್ಲಿ ಧರ್ಮಶಾಲೆಗಳಿವೆ ಮತ್ತು ಸುಲಭ ಬೆಲೆಯಲ್ಲಿ ಊಟವನ್ನೂ ಒದಗಿಸಲಾಗುತ್ತದೆ. ಈಗಿನ ಮಟ್ಟಿಗೆ (೨೦೦೦) ಹೇಳುವುದಾದರೆ ಇಲ್ಲಿ ವಸತಿ ಗೃಹಗಳಾಗಲೀ ಅಥವಾ ಖಾಸಗೀ ಹೋಟೆಲ್‌ಗಳಾಗಲೀ ಇಲ್ಲ.

ನದಿಯ ಸಮೀಪದಲ್ಲಿ ದತ್ತಾತ್ರೇಯನ ದೇವಾಲಯ ದತ್ತ ಮಂದಿರವಿದೆ. ಇಲ್ಲಿನ ಮಂಟಪದ ಮುಂಭಾಗದ ಸ್ಥಳವನ್ನು ಶ್ರೀ ವಾಸುದೇವ ಸಭಾ ಮಂಟಪ ಎಂದು ಕರೆಯಲಾಗಿದೆ. ಇದರ ಗೋಡೆಗಳಮೇಲೆ ಗುರುಚರಿತ್ರೆಗೆ ಸಂಬಂಧಿಸಿದ ವರ್ಣಚಿತ್ರಗಳನ್ನು ಬರೆಯಲಾಗಿದೆ. ಇಲ್ಲಿರುವ ಒಂದು ಫಲಕದಲ್ಲಿ ಈ ದೇವಾಲಯವನ್ನು ಹೇಗೆ ಕಟ್ಟಲಾಯಿತು ಎಂಬುದನ್ನು ವಿವರಿಸಲಾಗಿದೆ. ಶ್ರೀ ವಾಸುದೇವಾನಂದ ಸರಸ್ವತಿ ಯತಿಗಳು ತಮ್ಮ ಅಂತ್ಯ ಸಮೀಪಿಸಿತೆಂದು ತಿಳಿದಾಗ, ತಾವು ಪೂಜಿಸುತ್ತಿದ್ದ ದತ್ತಾತ್ರೇಯನ ವಿಗ್ರಹವನ್ನು ಗಾಣಗಾಪುರ ಅಥವಾ ನರಸೋಬವಾಡಿಗೆ ಕಳುಹಿಸಬೇಕೆಂದು ಅವರು ಹೇಳಿದರು. ಆದರೆ ಪ್ರಮುಖ

ಶಿಷ್ಯ ಗಂದಮಹಾರಾಜರ ಸ್ವಪ್ನದಲ್ಲಿ ದತ್ತಾತ್ರೇಯನೇ ಬಂದು ಗರುಡೇಶ್ವರವನ್ನು ಬಿಟ್ಟು, ಇನ್ನೆಲ್ಲಿಯೂ ಹೋಗಲಿಚ್ಛಿಸುವುದಿಲ್ಲವೆಂದು ತಿಳಿಸಿದರು. ಹಾಗಾಗಿ ಅವರ ಇಚ್ಛೆಗನುಗುಣವಾಗಿ ಗರುಡೇಶ್ವರದಲ್ಲಿರುವ ದತ್ತ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಯಿತು.

ನದಿಯ ಸ್ವಲ್ಪ ಕೆಳಭಾಗದಲ್ಲಿ ಈ ವಾಸುದೇವಾನಂದ ಸರಸ್ವತಿಯವರ ಸಮಾಧಿ ದೇವಾಲಯವಿದೆ. ಇತ್ತೀಚೆಗೆ ರಂಗ ಅವಧೂತ ಕುಟೀರವೆಂಬ ಕಟ್ಟಡವನ್ನು ಶ್ರೀ ರಂಗ ಅವಧೂತರ ಗೌರವಾರ್ಥ ನಿರ್ಮಿಸಲಾಗಿದೆ. ಇದಾದನಂತರ ನರ್ಮದಾ ನದಿಗೆ ಇಳಿಯುವುದಕ್ಕೆ ಕಡಿದಾದ ಕಲ್ಲಿನ ಮೆಟ್ಟಿಲುಗಳಿವೆ.

ತಿರುಪತಿ, ಶಿರಡಿ, ಶೇಗಾಂವ್ ಅಥವಾ ಮಂತ್ರಾಲಯಗಳಂತೆ ಗರುಡೇಶ್ವರವು ಪ್ರಾಮುಖ್ಯವನ್ನು ಪಡೆದಿಲ್ಲ. ಆದರೆ ನಿಷ್ಠರಾಗಿರುವ ಭಕ್ತರಿಗೆ ಈ ಸ್ಥಳವು ಪವಿತ್ರವಾದುದು. ಏಕೆಂದರೆ ಈ ಸ್ಥಳ ಆಧ್ಯಾತ್ಮಿಕ ಗುರುಗಳಾದ ಶ್ರೀ ವಾಸುದವಾನಂದ ಸರಸ್ವತಿ ಶ್ರೀ ಟೆಂಬೆಸ್ವಾಮಿಗಳಿಂದ ಪವಿತ್ರಗೊಳಿಸಲ್ಪಟ್ಟಿದೆ.

* * * *



## ೪. ಸದ್ಗುರು ಶ್ರೀ ಜಂಗಲಿ ಮಹಾರಾಜ್

ಪುಣೆ ನಗರದ ಒಂದು ರಸ್ತೆಗೆ ಜಂಗಲಿ ಮಹಾರಾಜ್ ರೋಡ್ ಎಂದು ಹೆಸರು. ವಿಶಾಲವಾದ ಮಟ್ಟವಾದ ಈ ದಸ್ತೆಯು ಡೆಕ್ಕನ್ ಜಂಖಾನದ ಸಾಂಬಾಜಿ ಚೌಕದಿಂದ ಆರಂಭವಾಗಿ, ಈಶಾನ್ಯ ದಿಕ್ಕಿನಲ್ಲಿ ಮುಂದುವರಿದು ಮುತ ನದಿಗೆ ಸಮಾನಾಂತರವಾಗಿದೆ. ಸಾಂಬಾಜಿ ಉದ್ಯಾನವನ ಮತ್ತು ಬಾಲಗಂಧರ್ವ ರಂಗಮಂದಿರಗಳನ್ನು ದಾಟಿ, ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ನಿಲಯದ ಹತ್ತಿರ ಬರ್ವೆ ರೋಡನ್ನು ಸಂಧಿಸುತ್ತದೆ. ಈ ಚೌಕಕ್ಕೆ ಮುಂಚೆ, ರಸ್ತೆಯ ಎಡ ಭಾಗದಲ್ಲಿ ಪಾತಾಳೇಶ್ವರ ಗುಹೆಗಳ ಪಕ್ಕದಲ್ಲಿ ಹತ್ತೊಂಬತ್ತನೆಯ ಶತಮಾನದ ಸದ್ಗುರು ಜಂಗಲಿ ಮಹಾರಾಜರ ದೇವಾಲಯವಿದೆ. ಇದರಿಂದಾಗಿ ಈ ರಸ್ತೆಗೆ ಈ ಹೆಸರು ಬಂದಿದೆ.

ಭಾರತ ದೇಶದಲ್ಲಿ ಅವತಾರವೆತ್ತಿದ ಹತ್ತಾರು ಸಂತರಲ್ಲಿ ಕೆಲವರಿಗೆ ಹಿಂದೂ ಮತ್ತು ಮುಸ್ಲಿಂ ಭಕ್ತರಿರುತ್ತಾರೆ. ಈ ರೀತಿಯ ಸಂತರಲ್ಲಿ ಶ್ರೀ ಸದ್ಗುರು ಜಂಗಲಿ ಮಹಾರಾಜರು ಒಬ್ಬರು. ಇತರ ಸಂತರ ಆರಂಭಿಕ ಜೀವನವು ತಿಳಿದಿರುವಂತೆ ಶ್ರೀ ಜಂಗಲಿ ಮಹಾರಾಜರ ಜೀವನ ವಿವರಗಳು ತಿಳಿದಿಲ್ಲ. ಅಧಿಕೃತವಾದ ಅವರ ಜೀವನಚರಿತ್ರೆಯ ಗ್ರಂಥಗಳೂ ರಚಿತವಾಗಿಲ್ಲ. ಆದುದರಿಂದ ತಿಳಿದಿರುವ ಮಾಹಿತಿಗಳಿಂದ ಮಾತ್ರ ಇವರ ಜೀವನಚರಿತ್ರೆಯನ್ನು ರಚಿಸಬೇಕಾಗಿದೆ. ಜಂಗಲಿ ಮಹಾರಾಜರ ದೇವಾಲಯದ ಟ್ರಸ್ಟಿನವರು ಗೊತ್ತಿರುವ ಮಾಹಿತಿಗಳನ್ನು ಕಲೆಹಾಕಿ, 'ಸದ್ಗುರು ಶ್ರೀ ಜಂಗಲಿ ಮಹಾರಾಜ್ ಹ್ಯಾಂಚಿ ಜೀವನಗಾಥಾ' ಎಂಬ ಮರಾಠೀ ಪುಸ್ತಕವನ್ನು ರಚಿಸಿ ಉಪಕಾರ ಮಾಡಿದ್ದಾರೆ. ಶ್ರೀ ಬಾಪುರಾವ್ ರ್ಯಾನಡೆ ಅಥವಾ ಯೋಗಿ ಜ್ಞಾನನಾಥಜಿಯವರು ತಮ್ಮ ಗುರುಗಳಾದ ಶ್ರೀ ಹರಿನಾಥಜಿ ಮತ್ತು ಅಳಂದಿಯ ಶ್ರೀ ನೃಸಿಂಹ ಸರಸ್ವತಿ ಸ್ವಾಮಿಗಳು ಪಂಡಿತ್ ರಾಮಚಂದ್ರ ಶಾಸ್ತ್ರಿ ಜೋಷಿಯವರಿಗೆ ನೀಡಿದ ಮಾಹಿತಿಗಳಿಗನುಗುಣವಾಗಿ ಈ ಮರಾಠೀ ಪುಸ್ತಕವನ್ನು ರಚಿಸಲಾಗಿದೆ. ಇವುಗಳ ಜೊತೆಗೆ ಜಂಗಲಿ ಮಹಾರಾಜರ ಶಿಷ್ಯರಾಗಿದ್ದವರಿಂದ ತಿಳಿದುಬಂದ ವಿಷಯಗಳನ್ನು ಆಧರಿಸಿ ಶ್ರೀಮತಿ ಜಾನಕಿಬಾಯಿ ಗೋರೆಯವರು ೧೯೫೨ರಲ್ಲಿ ರಚಿಸಿದ ಪುಸ್ತಕವೂ ಉಪಯುಕ್ತವಾಗಿದೆ. ಇಂತಹ ಗ್ರಂಥಗಳಿಂದ ತಿಳಿದು ಬಂದಿರುವ ವಿಷಯಗಳು, ಪುಣೆಯ ಶಿವಾಜಿನಗರದಲ್ಲಿ ಪ್ರಚಲಿತವಾಗಿರುವ

ಕೌಟುಂಬಿಕ ಐತಿಹ್ಯಗಳು ಹಾಗೂ ಜಂಗಲಿ ಮಹಾರಾಜರ ಟ್ರಸ್ಟಿ ಶ್ರೀ ರಾಜೇಂದ್ರ ಟಂಬೆಕರ್ ವಿವರಿಸಿದ ಕೆಲವು ವಿಚಾರಗಳು– ಈ ಎಲ್ಲವನ್ನೂ ಆಧರಿಸಿ ಈ ಪುಸ್ತಕವನ್ನು ರಚಿಸಲಾಗಿದೆ.

ರಾಣಿ ಝಾನ್ಸಿಗೆ ಸಂಬಂಧಿಸಿದ ಶ್ರೀಮಂತ ಕುಟುಂಬ ಒಂದರಲ್ಲಿ ಗುಜರಾತಿನ ಬರೋಡದ ಸಮೀಪದಲ್ಲಿ ೧೮೦೩ರಲ್ಲಿ ಸದ್ಗುರು ಶ್ರೀ ಜಂಗ್ಲಿ ಮಹಾರಾಜರು ಹುಟ್ಟಿದರು. ಅವರು ವಿದ್ಯಾಭ್ಯಾಸದಲ್ಲಿ ಆಸಕ್ತಿ ತೋರಿಸದೇ ಹೋದರೂ ಶರೀರವನ್ನು ಚೆನ್ನಾಗಿಟ್ಟುಕೊಳ್ಳುವುದರಲ್ಲಿ ವಿಶೇಷ ಆಸಕ್ತಿ ವಹಿಸಿದರು. ಯುವಕನಾಗಿದ್ದಾಗಲೇ ದೇಶದ ಉದ್ದಗಲಕ್ಕೂ ಸಂಚರಿಸಿದರು. ಆಗ ಬ್ರಿಟಿಷರು ನಮ್ಮ ದೇಶವನ್ನು ಆಳುತ್ತಿದ್ದರು. ಇವರ ಆಳ್ವಿಕೆಯಡಿಯಲ್ಲಿ ಭಾರತೀಯರು ಯಾವ ರೀತಿ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆಂದು ತಮ್ಮ ಪ್ರಯಾಣದ ಸಮಯದಲ್ಲಿ ಜಂಗಲಿ ಮಹಾರಾಜ್ ಗಮನಿಸಿದರು. ಇದರಿಂದಾಗಿ ಅವರು ೧೮೫೭ರ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಮ್ಮ ನೆರವನ್ನು ನೀಡಿದರು. ೧೮೫೭ರ ಸಂಗ್ರಾಮವು ವಿಫಲವಾಗಿ ತನ್ನ ಗುರಿಯನ್ನು ಸಾಧಿಸಲಾಗಲಿಲ್ಲ. ಅಷ್ಟೇ ಅಲ್ಲದೆ, ಅನೇಕರು ಬ್ರಿಟಿಷರ ಕ್ರೋಧಕ್ಕೆ ತುತ್ತಾದರು. ಜಂಗಲಿ ಮಹಾರಾಜರು ಇದರಿಂದ ತಪ್ಪಿಸಿಕೊಂಡರು. ಮತ್ತೆ ಅವರು ಸನ್ಯಾಸಿಯಾಗಿ ದೇಶದಲ್ಲೆಲ್ಲ ಓಡಾಡಲು ಆರಂಭಿಸಿದರು. ಈ ಪ್ರಯಾಣದ ಸಮಯದಲ್ಲಿ ಅವರಿಗೆ ಕೆಲವು ವಿಷಯಗಳು ಮನದಟ್ಟಾದವು. ಅವು ಏನೆಂದರೆ ನಮ್ಮಲ್ಲಿ ಒಗ್ಗಟ್ಟಿರಲಿಲ್ಲ; ಪ್ರಾದೇಶಿಕ ಭಾವನೆ, ಜಾತಿ, ಧರ್ಮ ಮುಂತಾದವು ನಮ್ಮಲ್ಲಿ ಭಿನ್ನತೆಯನ್ನು ಹುಟ್ಟಿಹಾಕುತ್ತಿದ್ದುದೇ ನಮ್ಮ ವಿಫಲತೆಗೆ ಕಾರಣ ಎಂದು ಅವರಿಗೆ ಗೊತ್ತಾಯಿತು. ಇದರಿಂದ ಅವರು ಮಾಡಿದ ಮುಂದಿನ ಕಾರ್ಯಗಳಿಗೆ ಬೀಜವನ್ನು ಬಿತ್ತಿದಂತೆ ಆಯಿತು. ಕೊನೆಗೆ ಜಂಗಲಿ ಮಹಾರಾಜರು ಕೃಷ್ಣಾನದಿಯ ದಡದಲ್ಲಿ ಮಹಾರಾಷ್ಟ್ರದ ಕರಾಡ್‌ಗೆ ಸಮೀಪದ ರೇತ್ರೆಹರ್ನಾಕ್ಷೆ ಎಂಬ ಗ್ರಾಮಕ್ಕೆ ಬಂದರು. ಇಲ್ಲಿ ಕೆಲವು ವರ್ಷಗಳವರೆಗೆ ಇದ್ದರು. ಇವರು ಸನ್ಯಾಸಿಯಾಗಿ ಭಿಕ್ಷೆಯನ್ನು ಬೇಡಿ ಜೀವನ ನಡೆಸುತ್ತಿದ್ದರು. ಈ ಸಮಯದಲ್ಲಿ ಅವರು ಪ್ರಾರ್ಥನೆ ಮತ್ತು ಧ್ಯಾನದಲ್ಲಿ ಕಾಲ ಕಳೆಯುತ್ತಿದ್ದರು. ಕೆಲವರಿಗೆ ಇವರು ಆಧ್ಯಾತ್ಮಿಕ ಮಾರ್ಗದರ್ಶನ ಮಾಡಿದರು. ಅವರುಗಳು ಇವರು ಶಿಷ್ಯರಾದರು.

ಅವರು ರೇತ್ರೆಯಿಂದ ಪುಣೆಯಲ್ಲಿರುವ ಭುಂಭರ್ದ ಎಂಬ ಸ್ಥಳಕ್ಕೆ ಬಂದರು. ಈಗ ಈ ಸ್ಥಳವನ್ನು ಶಿವಾಜಿನಗರ ಎಂದು ಕರೆಯುತ್ತಾರೆ. ಆಗಿನ ಸಮಯದಲ್ಲಿ ಇಲ್ಲಿ ಅಷ್ಟೇನೂ ವಿಶೇಷವಾದ ಜನಸಂಖ್ಯೆ ಇರಲಿಲ್ಲ. ಮುಠಾ ನದಿಯ ದಡದಲ್ಲಿದ್ದ ಕೆಲವು ಭಾಗಗಳಲ್ಲಿ ವಿಶೇಷವಾಗಿ ಮರಗಳು ಬೆಳೆದಿದ್ದು, ಕಳ್ಳಿ ಗಿಡಗಳಿಂದ ತುಂಬಿ ಹೋಗಿತ್ತು. ಈ ಗಾಢ ಕಾಡಿನಲ್ಲಿ ಎತ್ತರವಾದ ಹಾಗೂ ಪಾತಾಳೇಶ್ವರ ಗುಹೆಗಳ ಸಮೀಪದ ಸ್ಥಳವೊಂದನ್ನು ಆರಿಸಿ ಅಲ್ಲಿ ವಾಸಿಸಲು ಆರಂಭಿಸಿದರು. ಇಲ್ಲಿ ಯೋಗ



ಮತ್ತು ಧ್ಯಾನವನ್ನು ಮಾಡಲು ಪ್ರಾರಂಭಿಸಿದರು. ಆಗ ಭಂಭುರ್ದದ ಕೆಲವರು ಜಂಗಲಿ ಮಹಾರಾಜರ ಶ್ರೇಷ್ಠತೆಯನ್ನು ಗುರುತಿಸಿದರು. ಅವರು ಯಾರೆಂದು ತಿಳಿಯದಿದ್ದರೂ, ಅವರೊಬ್ಬ ಶ್ರೇಷ್ಠ ಸಂತರೆಂದು ತಿಳಿದು ಇವರನ್ನು ಜಂಗಲಿ ಮಹಾರಾಜ್ ಎಂದು ಕರೆದರು.

ಅವರು ಕಾಡಿನಲ್ಲೇ ವಾಸವಾಗಿದ್ದು, ಆಗಾಗ್ಗೆ ಭಂಭುರ್ದಕ್ಕೆ ಭಿಕ್ಷೆಗಾಗಿ ಹೋಗುತ್ತಿದ್ದರು. ಆ ಗ್ರಾಮದ ಸ್ಥಳೀಯರು ಇವರನ್ನು ಇಲ್ಲಿಯೇ ಬಂದು ವಾಸವಾಗಿರಿ ಎಂದು ಹೇಳಿದರೂ, ಇವರು ಕೇಳುತ್ತಿರಲಿಲ್ಲ. ಸ್ವಲ್ಪ ದಿನಗಳ ನಂತರ ಜನಗಳ ಕೋರಿಕೆಯ ಮೇರೆಗೆ ಅವರ ಇಲ್ಲಿಗೇ ಬಂದು ಹನುಮಾನ್ ದೇವಾಲಯದ ರೋಕ್ಡೋಬ ವಿಗ್ರಹದ ಸಮೀಪದಲ್ಲಿ ವಾಸಿಸಲು ಆರಂಭಿಸಿದರು. ಪ್ರತಿದಿನವೂ ಜನಗಳು ಊಟ ತಂದು ಇವರಿಗೆ ಕೊಡುವುದು ಪದ್ಧತಿಯಾಯಿತು. ಆನಂತರ ಜಂಗಲಿ ಮಹಾರಾಜರು ಸ್ಥಳೀಯರ ಸಹಾಯದಿಂದ ಆ ವಿಗ್ರಹಕ್ಕಾಗಿ, ಒಂದು ರೋಕ್ಡೋಬ ದೇವಾಲಯವನ್ನು ನಿರ್ಮಿಸಿದರು. ಅಂದಿನಿಂದ ಜಂಗಲಿ ಮಹಾರಾಜರು ರೋಕ್ಡೋಬ ದೇವಾಲಯದಲ್ಲಿ ವಾಸಿಸಲು ಆರಂಭಿಸಿದರು.

ಈ ಸಮಯಕ್ಕೆ ಜಂಗಲಿ ಮಹಾರಾಜರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಷ್ಯರಾದರು. ಇವರು ತಮ್ಮ ಸಮಯವನ್ನೆಲ್ಲ ಪ್ರವಚನ ನೀಡುವುದು, ಧಾರ್ಮಿಕ ಚರ್ಚೆ ನಡೆಸುವುದು ಹಾಗೂ ಜನಗಳಿಗೆ ಮಾರ್ಗದರ್ಶನ ಮಾಡುವುದರಲ್ಲಿ ಕಳೆಯುತ್ತಿದ್ದರು. ಆದರೆ ತಮ್ಮ ಶರೀರವನ್ನು ದಷ್ಟಪುಷ್ಟವಾಗಿ ಬೆಳೆಸಿಕೊಳ್ಳುವ ವ್ಯಾಯಾಮವನ್ನು ಕಡೆಗಣಿಸಲಿಲ್ಲ. ಬಂದ ಜನಗಳಿಗೆ ಕುಸ್ತಿ ಮಾಡುವುದು ಮತ್ತು ವ್ಯಾಯಾಮಗಳನ್ನೂ ಕಲಿಸಿಕೊಡುತ್ತಿದ್ದರು. ಅವರು ಶಕ್ತಿ ಆರಾಧನೆಯನ್ನು ಬೋಧಿಸಲು ಆರಂಭಿಸಿದರು. ಅವರು ಯಾವಾಗಲೂ ಶಾರೀರಿಕ ಹಾಗೂ ಆಧ್ಯಾತ್ಮಿಕ ಶಕ್ತಿಯನ್ನು ಬಲಪಡಿಸಿಕೊಳ್ಳುವ ಮಹತ್ವವನ್ನು ಒತ್ತಿಹೇಳುತ್ತಿದ್ದರು.

ಪ್ರತಿದಿನವೂ ಅವರು ರೋಕ್ಡೋಬನಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು ಮತ್ತು ಕಳ್ಳಿಯ ಕಾಡಿನಲ್ಲಿದ್ದ ತಮ್ಮ ಗುರುಗಳ ಸಮಾಧಿಗೆ ಹೋಗಿ ದರ್ಶನ ಮಾಡುತ್ತಿದ್ದರು. ಇವು ಅವರ ದೈನಂದಿನ ಪದ್ಧತಿಯಾಯಿತು. ಅಪರೂಪವಾಗಿ ಜನಗಳನ್ನು ಉದ್ಧಾರ ಮಾಡುವ ದೃಷ್ಟಿಯಿಂದ ಪುಣೆಯ ಆಚೆ ಹೋಗುತ್ತಿದ್ದರು. ಇವರು ಗೇಹು, ಸಜ್ಜನಗಡ ಮತ್ತು ಆಳಂದ್‌ಗಳಿಗೆ ಹೋಗುತ್ತಿದ್ದರು. ಕೆಲವು ಸ್ಥಳಗಳಲ್ಲಿ ತಮ್ಮ ಬೋಧನೆಯ ಪ್ರಚಾರಕ್ಕಾಗಿ ಮಠಗಳನ್ನು ನಿರ್ಮಿಸಿದರು. ಗೆಹುವಿನಲ್ಲಿ ಒಂದು ಧರ್ಮಶಾಲೆಯನ್ನು ಕಟ್ಟಿದರು. ಇವರನ್ನು ನೋಡಲು ಅಳಂದಿಯ ಶ್ರೀ ನೃಸಿಂಹ ಸರಸ್ವತೀ ಸ್ವಾಮಿಗಳು ಬರುತ್ತಿದ್ದರು. ಇವರಿಬ್ಬರಿಗೂ ಮಧುರ ಬಾಂಧವ್ಯವೇರ್ಪಟ್ಟಿತು.

ಜಂಗಲಿ ಮಹಾರಾಜರಿಗಿದ್ದ ಅಸಂಖ್ಯಾತ ಭಕ್ತರಲ್ಲಿ ರಖಾಭಾಯಿ ಗಾಡ್ಗಿಳ್ ಎನ್ನುವ ಮಹಿಳೆ ಪ್ರಮುಖರಾದವರು. ಜಂಗಲಿ ಮಹಾರಾಜರು ಮೀರಜ್‌ಗೆ

ಹೋಗಿದ್ದಾಗ, ಈಕೆಯು ಅವರಿಂದ ಪ್ರಭಾವಿತಳಾಗಿ ತನ್ನ ಆಸ್ತಿಯನ್ನೆಲ್ಲ ತ್ಯಜಿಸಿ, ಜಂಗಲಿ ಮಹಾರಾಜರ ಶಿಷ್ಯೆಯಾದಳು. ಜಂಗಲಿ ಮಹಾರಾಜರು ಈಕೆಯು ತನ್ನ ಜೀವನದ ಎಲ್ಲ ಸುಖಗಳನ್ನೂ ತ್ಯಜಿಸದಂತೆ ಮಾಡಲು ಪ್ರಯತ್ನಿಸಿದರು. ಆದರೆ ಆಕೆಯು ಈ ವಿಷಯದಲ್ಲಿ ಗಟ್ಟಿ ಮನಸ್ಸು ಮಾಡಿಕೊಂಡಿದ್ದಳು. ಆಕೆಯು ಮುಂದಿನ ಹನ್ನೆರಡು ವರ್ಷಗಳ ಕಾಲ ಮೀರಜ್‌ನಲ್ಲೇ ಇದ್ದು, ಭಿಕ್ಷೆಯಿಂದ ಜೀವನ ಮಾಡಿದರೆ, ತಾವು ಆಕೆಯನ್ನು ಶಿಷ್ಯೆಯನ್ನಾಗಿ ಸ್ವೀಕರಿಸುವುದಾಗಿ ಹೇಳಿದರು. ಇದರಿಂದ ಅವಳಿಗೆ ಸನ್ಯಾಸವನ್ನು ತೆಗೆದುಕೊಳ್ಳುವ ವಿಷಯದಲ್ಲಿರುವ ನಿಷ್ಠೆ ವ್ಯಕ್ತವಾಗುತ್ತದೆ ಎಂದು ಭಾವಿಸಿದರು. ಆಕೆಯ ನಿಷ್ಠೆಯು ನಿಜವಾಗಿದ್ದುದಾದ್ದರಿಂದ, ಆಕೆಯು ತನ್ನ ಕುಟುಂಬ, ಮನೆ, ಆಸ್ತಿಪಾಸ್ತಿಗಳನ್ನು ತ್ಯಜಿಸಿ ಜೀವಿಸಲು ಆರಂಭಿಸಿದಳು. ಹನ್ನೆರಡು ವರ್ಷಗಳ ನಂತರ ತುಳಸಕ್ಕ ಎಂಬ ಇನ್ನೊಬ್ಬ ಮಹಿಳೆಯನ್ನೂ ಕರೆದುಕೊಂಡು ಜಂಗಲಿ ಮಹರಾಜರ ಬಳಿಗೆ ಬಂದಳು. ಜಂಗಲಿ ಮಹಾರಾಜರು ಶ್ರೀಮತಿ ಗಾಡ್ಗಿಳ್ ಮತ್ತು ತುಳಸಕ್ಕ ಇಬ್ಬರನ್ನೂ ಶಿಷ್ಯೆಯರನ್ನಾಗಿ ಸ್ವೀಕರಿಸಿದರು. ಆದರೆ ಇನ್ನೊಂದು ನಿಯಮ ವಿಧಿಸಿದರು. ಈ ಇಬ್ಬರೂ ವಾರಕ್ಕೆ ಒಂದು ದಿನ ಭಿಕ್ಷೆಯನ್ನು ಎತ್ತಿ ಊಟ ಮಾಡಬೇಕೆಂದು ಅಪ್ಪಣೆ ಮಾಡಿದರು. ಈ ಇಬ್ಬರೂ ಜಂಗಲಿ ಮಹಾರಾಜರನ್ನು ಅವರ ಜೀವಿತ ಕಾಲದಲ್ಲಿ ಮಾತ್ರವಲ್ಲದೆ, ಅವರ ಮರಣಾ ನಂತರವೂ ಅವರ ಸೇವೆ ಮಾಡಿ, ಅವರು ಆರಂಭಿಸಿದ ಕಾರ್ಯಗಳನ್ನು ಮುಂದುವರಿಸಿದರು. ಜನಗಳು ರಖ್ಮಾಬಾಯಿಯನ್ನು ಆಯಿಸಾಹೆಬ್ ಎಂದು ಕರೆಯಲು ಪ್ರಾರಂಭಿಸಿದರು. ಶ್ರೀ ಜಂಗಲಿ ಮಹಾರಾಜರು ಮುಕ್ತಿ ಹೊಂದಿದ ನಂತರದ ಹತ್ತು ವರ್ಷಗಳ ಕಾಲ ಆಕೆಯು ಸನ್ಯಾಸಿನಿಯಾಗಿದ್ದು ರೊಕ್ಡೋಬ ದೇವಾಲಯದ ಎದುರಿಗೆ ಶ್ರೀರಾಮ ದೇವಾಲಯವನ್ನು ನಿರ್ಮಿಸಿದಳು. ೧೯೦೩ರಲ್ಲಿ ಆಯಿಸಾಹೆಬ್ ಮುಕ್ತಳಾದಳು ಮತ್ತು ಇದಾದ ಎರಡು ದಿನಗಳ ನಂತರ ತುಳಸಕ್ಕನೂ ಮರಣ ಹೊಂದಿದಳು. ಶ್ರೀರಾಮ ದೇವಾಲಯದ ಪ್ರಾಂಗಣದಲ್ಲಿ ಈ ಇಬ್ಬರ ಜ್ಞಾಪಕಾರ್ಥವಾಗಿ ಎರಡು ತುಳಸಿ ಬೃಂದಾವನಗಳನ್ನು ನಿರ್ಮಿಸಲಾಗಿದೆ.

ಆದರೆ ಜಂಗಲಿ ಮಹಾರಾಜರ ಆರಂಭದ ಜೀವನದ ಬಗ್ಗೆ ಬಾಪುರಾವ್ ರ‍್ಯಾನಡೆ ಅಲಿಯಾಸ್ ಯೋಗಿ ಜ್ಞಾನನಾಥಜಿಯವರಿಗೆ ಅವರ ಗುರುಗಳಾಗಿದ್ದ ಹರಿನಾಥಜಿಯವರು ಹೇಳಿದ್ದ ಸಂಗತಿಗಳು ಸ್ವಲ್ಪ ಭಿನ್ನವಾಗಿವೆ. ಇದರ ಪ್ರಕಾರ ಜಂಗಲಿ ಮಹಾರಾಜರು ನಾಥ ಸಂಪ್ರದಾಯಕ್ಕೆ ಸೇರಿದವರು. ನಾಥ ಸಂಪ್ರದಾಯವು ಯೋಗಕ್ಕೆ ಹಾಗೂ ಆಧ್ಯಾತ್ಮಿಕ ಸಾಧನೆಗೆ ಗುರು ಪರಂಪರೆಯನ್ನು ಪಾಲಿಸುವುದಕ್ಕೆ ವಿಶೇಷ ಮಹತ್ವ ನೀಡುತ್ತದೆ. ಶ್ರೀನಾಥ ಪಂಥದ ಯೋಗಿಗಳೆಲ್ಲ ಒಂದುಗೂಡಿ ತ್ರ್ಯಂಬಕೇಶ್ವರದಿಂದ ಮಂಗಳೂರಿನಲ್ಲಿದ್ದ ಕಜ್ಜಲಿ ಮಠಕ್ಕೆ ಹೋಗುತ್ತಿದ್ದುದನ್ನು ಶ್ರೀ ಹರಿನಾಥಜಿ ವಿವರಿಸಿದ್ದಾರೆ. ಒಂದು ಸಂದರ್ಭದಲ್ಲಿ ಇವರು ಯೋಗಿ



ಸ್ವರೂಪನಾಥಜಿಯವರ ನೇತೃತ್ವದಲ್ಲಿ ಸತಾರದಿಂದ ಹೋಗುತ್ತಿದ್ದಾಗ, ಯಾರಿಗೂ ತಿಳಿಯದ ಒಬ್ಬ ಯೋಗಿಯು ಇವರನ್ನು ಸೇರಿಕೊಂಡನು. ಸ್ವರೂಪನಾಥಜಿ ಇವನನ್ನು ಪ್ರಶ್ನಿಸಿದಾಗ ಈ ಯೋಗಿಯು ತನ್ನ ವಿಷಯವಾಗಿ ಯಾವ ಸಂಗತಿಗಳನ್ನೂ ತಿಳಿಸಲಿಲ್ಲ. ಆದರೆ ತಾನು ಈ ಜೀವನದಲ್ಲಿ ಉದ್ಭವವಾಗಿದ್ದ 'ನಾನು ಯಾರು', 'ಈ ಜೀವನದ ಗುರಿ ಏನು', 'ದೇವರನ್ನು ಎದುರಿಗೆ ನೋಡಲು ಸಾಧ್ಯವೇ', 'ಹಾಗಿದ್ದರೆ ಅದು ಹೇಗೆ' ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಿಕೊಂಡು ಊರಿಂದ ಊರಿಗೆ ಅಲೆಯುತ್ತಿರುವುದಾಗಿಯೂ, ಸ್ವರೂಪನಾಥರಿಂದ ತನಗೆ ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಸಹಾಯ ಸಿಗಬಹುದು ಎನ್ನುವ ಉದ್ದೇಶದಿಂದ ಇವರಲ್ಲಿಗೆ ಬಂದಿರುವುದಾಗಿ ತಿಳಿಸಿದನು. ಇವನು ಕೆಲವು ತಿಂಗಳುಗಳವರೆಗೆ ಈ ಗುಂಪಿನಲ್ಲಿದ್ದನು. ಅನಂತರ ಸ್ವರೂಪನಾಥಜಿ ಹಿಮಾಲಯಕ್ಕೆ ಹೊರಟಾಗ ಇವನೂ ಹೊರಟನು. ಆಗ ಇವನಿಗೆ ನಾಥಪಂಥದಲ್ಲಿ ಸನ್ಯಾಸ ನೀಡಿ ಯೋಗಿ ಜಗರ್ನಾಥ ಎಂಬ ಹೆಸರನ್ನು ಕೊಟ್ಟರು. ಇವನಿಗೆ ಜಗರ್ನಾಥ ಎಂಬ ಹೊಸ ಹೆಸರು ನೀಡಲು ಕಾರಣವೇನೆಂದರೆ ಇವನು ಅತ್ಯಂತ ಕಷ್ಟಕರವಾದ ಯೋಗಗಳನ್ನು ಮಾಡುತ್ತಿರುವಾಗ ನಿರಂತರವಾಗಿ ಜಾಗೃತನಾಗಿರುತ್ತಿದ್ದನು. ಮುಂದೆ ತಾನು ಏನು ಮಾಡಬೇಕು ಎಂದು ಇವನು ಕೇಳಿದಾಗ, ಸ್ವರೂಪನಾಥಜಿಯವರು ಅವನು ಪುಣೆಯ ಸಮೀಪದ ಆಳಂದ್‌ಗೆ ಹೋಗಿ ಅಲ್ಲಿರುವ ಧ್ಯಾನೇಶ್ವರರ ಸಮಾಧಿಯ ದೇಗುಲದಲ್ಲಿ ತನ್ನ ಮುಂದಿನ ಯೋಗಾಭ್ಯಾಸವನ್ನು ಮುಂದುವರಿಸಬೇಕೆಂದು ಹೇಳಿದರು. ಇವನು ಅಲ್ಲಿಗೆ ಹೋಗಿ ಯೋಗಾಭ್ಯಾಸದಲ್ಲಿ ನಿಷ್ಣಾತನಾದ ಮೇಲೆ ಪುಣೆಗೆ ಹಿಂದಿರುಗಿ ಮುತ ನದಿಯ ಪಕ್ಕದಲ್ಲಿರುವ ಕಳ್ಳಿಯ ಕಾಡಿನಲ್ಲಿ ವಾಸಿಸಲು ಆರಂಭಿಸಿದನು. ಇವರೇ ಜಂಗಲಿ ಮಹಾರಾಜರು.

ಜಂಗಲಿ ಮಹಾರಾಜರು ಪುಣೆಗೆ ಬರುವುದಕ್ಕೆ ಮುಂಚಿನ ಚರಿತ್ರೆಯ ಇನ್ನೊಂದು ಮುಖವನ್ನು ಪಂಡಿತ ರಾಮಚಂದ್ರ ಶಾಸ್ತ್ರಿ ಜೋಷಿಯವರು ಪರಿಚಯಿಸಿದ್ದಾರೆ. ಇದನ್ನು ಇವರಿಗೆ ಹೇಳಿದವರು ಅಳಂದಿಯ ನೃಸಿಂಹ ಸರಸ್ವತೀ ಸ್ವಾಮಿಗಳು. ಇದರ ಪ್ರಕಾರ ಜಂಗಲಿ ಮಹಾರಾಜರು ಕರ್ನಾಟಕದ ಹುಬ್ಬಳ್ಳಿಯ ಸಮೀಪದ ಗ್ರಾಮವೊಂದರಲ್ಲಿ ಜನಿಸಿದರು. ತಂದೆ–ತಾಯಿಗಳ ಮರಣಾನಂತರ ಇವರಿಗೆ ಎಂಟನೆಯ ವರ್ಷದಲ್ಲಿ ಉಪನಯನ ಮಾಡಲಾಯಿತು. ನಂತರ ಅವರು ತಮ್ಮ ಸಂಬಂಧಿಕರ ಮನೆಯಲ್ಲಿ ವಾಸಿಸತೊಡಗಿದರು. ಒಂದು ಸಾಯಂಕಾಲ ಅಲ್ಲಿಗೆ ಬಂದ ಯೋಗಿಯೊಬ್ಬನು ಅವರನ್ನು ಮಾಹೇಶ್ವರ್ ಎಂಬ ಸ್ಥಳಕ್ಕೆ ಕರೆದುಕೊಂಡು ಹೋಗಿ, ವಿಶ್ವರೂಪಾನಂದ ಮಹಾರಾಜ್ ಎಂಬ ಯೋಗ ಗುರುಗಳಿಗೆ ಒಪ್ಪಿಸಿದನು. ಈ ಯೋಗ ಗುರುಗಳ ಆಶ್ರಯದಲ್ಲಿ ಯೋಗವನ್ನು ಅಭ್ಯಾಸ ಮಾಡಿ, ಹನ್ನೆರಡು ವರ್ಷಗಳ ಕಾಲ ಹಿಮಾಲಯದಲ್ಲಿದ್ದು, ನಾಥ ಪಂಥದ

ಸನ್ಯಾಸವನ್ನು ಸ್ವೀಕರಿಸಿ ಜಗನ್ನಾಥ ಎಂಬ ಹೆಸರನ್ನು ಪಡೆದನು. ನಂತರ ದೇಶದಲ್ಲೆಲ್ಲ ಓಡಾಡುತ್ತಿದ್ದನು. ಇಂತಹ ಸಮಯದಲ್ಲಿ ಹಿಮಾಲಯದಲ್ಲಿ ನಾನಾಸಾಹೇಬ್ ಪೇಶ್ವೆಯವರ ಭೇಟಿಯಾಯಿತು. ಆಗ ಪೇಶ್ವೆಯವರು, ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇವರ ಆಶೀರ್ವಾದವನ್ನು ಕೋರಿದರು. ಜಂಗಲಿ ಮಹಾರಾಜರು ೧೮೫೭ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇರವಾಗಿ ಭಾಗವಹಿಸದೇ ಇದ್ದರೂ, ತಾತ್ಯಾಟೋಪಿ ಮತ್ತು ಅವನ ಸೈನ್ಯಕ್ಕೆ ಬೇರೆ ವಿಧಗಳಲ್ಲಿ ವಿಶೇಷ ಸಹಾಯ ನೀಡಿದರು. ಈ ಸಂಗ್ರಾಮವು ವಿಫಲಗೊಂಡಿದ್ದನ್ನು ನೋಡಿ ಜಗನ್ನಾಥಜಿ ತಮ್ಮ ಓಡಾಟವನ್ನು ಮುಂದುವರಿಸಿ ನೇಪಾಳ ಮತ್ತು ಕಾಶ್ಮೀರಗಳಿಗೂ ಹೋದರು. ಅಮರನಾಥಯಾತ್ರೆಯ ಸಮಯದಲ್ಲಿ ಇವರು ಶ್ರೀ ಗೋರಕ್ಷನಾಥರನ್ನು ಭೇಟಿಯಾದರು. ಇವರಿಗೆ ಮಹಾರಾಷ್ಟ್ರಕ್ಕೆ ಹೋಗುವಂತೆ ಅವರು ಆದೇಶ ನೀಡಿದರು. ಏಕೆಂದರೆ ಮಹಾರಾಷ್ಟ್ರ ಸಂತ ಧ್ಯಾನೇಶ್ವರ ಮತ್ತು ಶ್ರೀ ನಿವೃತ್ತಿನಾಥ ಮುಂತಾದ ನಾಥ ಪಂಥದ ಸಂತರ ಪ್ರಮುಖ ಕೇಂದ್ರವಾಗಿತ್ತು. ಹೀಗೆ ಜಂಗಲಿ ಮಹಾರಾಜರು ಮೊದಲು ಮಹಾರಾಷ್ಟ್ರಕ್ಕೆ ಬಂದು ಅಲ್ಲಿಂದ ಪುಣೆಗೆ ಹೋಗಿ ನೆಲೆಸಿದರು.

ಪುಣೆಯಲ್ಲಿ ರೊಕ್ಡೋಬ ದೇವಾಲಯದಿಂದ ಜಂಗಲಿ ಮಹಾರಾಜರು ಎಲ್ಲ ಕಡೆಗಳಿಂದಲೂ ಬರುತ್ತಿದ್ದ ಆಸಕ್ತರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಮನುಷ್ಯ ನಿರ್ಮಿತವಾದ ಜಾತಿ, ಧರ್ಮ, ಲಿಂಗಭೇದ, ಮತ್ತು ಸಂಪತ್ತು ಅಥವಾ ಬಡತನಗಳನ್ನು ತೊಡೆದುಹಾಕಬೇಕೆಂದು ಇವರು ಬೋಧಿಸುತ್ತಿದ್ದರು. ಎಲ್ಲರೂ ಒಬ್ಬನೇ ದೇವನ ಸೃಷ್ಟಿಗಳು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಆ ಪರಮಾತ್ಮ ಸತ್ಯವನ್ನು ತಿಳಿಯದೇ ಇರುವುದರಿಂದ ನಮ್ಮಲ್ಲಿ ಭೇದಗಳು ಕಂಡುಬರುತ್ತವೆ. ಆದರೆ ಪ್ರತಿಯೊಬ್ಬನೂ ಸರಿಯಾದ ಸಾಧನೆ ಮಾಡಿ ಈ ಪರಮಾತ್ಮ ಸತ್ಯವನ್ನು ಅರಿಯಲು ಪ್ರಯತ್ನಿಸಬೇಕು. ಕೆಟ್ಟ ಯೋಚನೆಗಳು ನಮ್ಮಿಂದ ಹೊರಹೋಗುವವರೆಗೆ ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರೂ ತಮಗೆ ಸರಿದೋರಿದ ಕೆಲಸಗಳನ್ನು ಭಕ್ತಿ ಮತ್ತು ನಿಷ್ಠೆಯಿಂದ ಮಾಡಬೇಕು.

ಅಂತಿಮವಾಗಿ ಜಂಗಲಿ ಮಹಾರಾಜರಿಗೆ ತಮ್ಮ ಭೌತಿಕ ಶರೀರವನ್ನು ಬಿಟ್ಟು ಪರಮಾತ್ಮ ಸತ್ಯದೊಡನೆ ವಿಲೀನಗೊಳ್ಳುವ ಸಮಯ ಬಂದಿತೆಂದು ಅರಿವಾಯಿತು. ತಮ್ಮ ನಿಕಟ ಶಿಷ್ಯರೊಂದಿಗೆ ಈ ವಿಷಯವನ್ನು ಅವರು ಹೇಳಲು ಆರಂಭಿಸಿದರು. ಇವರು ತಮ್ಮ ಆಹಾರ ಸ್ವೀಕಾರವನ್ನು ನಿಧಾನವಾಗಿ ಕಡಿಮೆ ಮಾಡಲು ಆರಂಭಿಸಿದರು. ಇವರ ಶಿಷ್ಯರಿಗೆ ಮುಂದೆ ಆಗಲಿರುವುದನ್ನು ನೆನೆಸಿಕೊಂಡು ದುಃಖ ಮತ್ತು ನೋವು ಉಂಟಾಯಿತು. ಇಂದಲ್ಲ ನಾಳೆ ಈ ಶರೀರವು ನಾಶವಾಗುತ್ತದೆ, ಆದರೆ ಆತ್ಮವು ಶಾಶ್ವತವಾಗಿರುತ್ತದೆ. ಆದುದರಿಂದ ಶರೀರದ ನಾಶಕ್ಕಾಗಿ ದುಃಖಿಸುವುದು ಸರಿಯಾದುದಲ್ಲ ಎಂದು ಹೇಳಿ ಶಿಷ್ಯರನ್ನು ಸಮಾಧಾನಪಡಿಸಿದರು. ಶಕ ೧೮೧೨,



ಚೈತ್ರ ಶುದ್ಧ ಚತುರ್ದಶಿ, ಅಂದರೆ ೧೮೯೦ರ ಏಪ್ರಿಲ್ ೪ರಂದು ಇವರು ರೊಕ್ಡೋಬ ದೇವಾಲಯದಲ್ಲಿ ಇಹಲೋಕದ ವ್ಯಾಪಾರವನ್ನು ತ್ಯಜಿಸಿದರು. ಸಾವಿರಾರು ಜನಗಳು ಬಂದು ಇವರ ಶರೀರದ ಅಂತಿಮ ದರ್ಶನ ಮಾಡಿದರು. ಮೆರವಣಿಗೆಯಲ್ಲಿ ಇವರ ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗಿ ಸಮಾಧಿ ಮಾಡಿದರು. ಈಗ ಈ ಸ್ಥಳದಲ್ಲಿ ಜಂಗಲಿ ಮಹಾರಾಜರ ದೇವಾಲಯವಿದೆ. ಪ್ರತಿವರ್ಷದ ಚೈತ್ರ ಶುದ್ಧ ಚತುರ್ದಶಿಯಂದು ಇಲ್ಲಿ ಪೂಜಾಕೈಂಕರ್ಯಗಳು ಮತ್ತು ಇತರ ಕಾರ್ಯಕ್ರಮಗಳು ನಡೆಯುತ್ತವೆ.

ಶ್ರೀ ಸದ್ಗುರು ಜಂಗಲಿ ಮಹಾರಾಜರ ದೇವಾಲಯ ಒಂದು ಸಣ್ಣ ಗುಡ್ಡದ ಮೇಲೆ ನೆಲಕ್ಕಿಂತ ಸ್ವಲ್ಪ ಎತ್ತರದಲ್ಲಿದೆ. ಜಂಗಲಿ ಮಹಾರಾಜ್ ರಸ್ತೆಯ ಫುಟ್‌ಪಾತ್ ಮೇಲೆ ನಡೆದು ಹೂವು ಮತ್ತು ಹಾರ ಮಾರುವವರನ್ನು ಮತ್ತು ಲಾಟರಿ ಟಿಕೆಟ್‌ಗಳನ್ನು ಮಾರುವವರನ್ನು ದಾಟಿದರೆ ದೇವಾಲಯದ ಪ್ರಮುಖ ದ್ವಾರಕ್ಕೆ ಬರುತ್ತೇವೆ. ಮೆಟ್ಟಿಲುಗಳನ್ನು ಹತ್ತಿದರೆ ಕಲ್ಲಿನ ಹಾಸುಗಳನ್ನು ಹಾಕಿರುವ ವಿಶಾಲವಾದ ಪ್ರಾಂಗಣಕ್ಕೆ ಬರುತ್ತೇವೆ. ಅಲ್ಲೇ ಜಂಗಲಿ ಮಹಾರಾಜರ ಸಮಾಧಿ ಇರುವುದು. ಇದರ ಸುತ್ತಲೂ ಎತ್ತರವಾದ ಹಾಗೂ ನೆರಳನ್ನು ನೀಡುವ ಮರಗಳಿವೆ. ಇಂತಹ ನಗರದಲ್ಲಿ ವನದಂತಹ ಸ್ಥಳವಿರುವುದು ಒಂದು ಮರೆಯಲಾರದ ಸ್ವಾಗತಿಸುವ ಸಂಗತಿ. ಅಲ್ಲಿ ನಮ್ಮ ಮುಂದೆ ಒಂದು ಧ್ವಜಸ್ತಂಭವಿದೆ. ಅದರ ತುದಿಯಲ್ಲಿ ಒಂದು ಬಾವುಟವು ಶಾಶ್ವತವಾಗಿ ಹಾರುತ್ತಿರುತ್ತದೆ. ಇದನ್ನು ದಾಟಿ ನಾಲ್ಕಾರು ಮೆಟ್ಟಿಲುಗಳನ್ನು ಹತ್ತಿದರೆ ದೇವಾಲಯಕ್ಕೆ ಬರುತ್ತೇವೆ. ನಮ್ಮ ಬಲಭಾಗದಲ್ಲಿ ಒಂದು ಸಮಾಧಿ ಇದೆ. ಇದು ಶ್ರೀ ರಾಜಬಕ್ಷ್‌ಗೆ ಸೇರಿದ್ದೆಂದು ಕೆಲವು ಹೇಳಿದರೆ ಮತ್ತೆ ಕೆಲವರು ಇದು ಜಂಗಲಿಮಹಾರಾಜರ ಗುರುಗಳ ಸಮಾಧಿ ಎಂದು ಹೇಳುತ್ತಾರೆ. ಇದರಿಂದ ನಾಲ್ಕು ಮೆಟ್ಟಿಲುಗಳನ್ನು ಹತ್ತಿ ಮುಂದೆ ನಡೆದರೆ ಅಮೃತಶಿಲೆಯನ್ನು ಹಾಸಿರುವ ಶ್ರೀ ಜಂಗಲಿ ಮಹಾರಾಜರ ಸಮಾಧಿ ಕಾಣಬರುತ್ತದೆ. ಸಮಾಧಿಯ ಒಂದು ಪಾರ್ಶ್ವದಲ್ಲಿ ಈ ಸಂತರ ಪಾದುಕೆಗಳಿವೆ. ಸಮಾಧಿಯ ಹಿಂಭಾಗದಲ್ಲಿ ಬಹಳ ದೊಡ್ಡದಾದ ಜಂಗಲಿ ಮಹಾರಾಜರ ಚಿತ್ರವಿದೆ. ನಾವು ಗೌರವಪೂರ್ವಕವಾಗಿ ಇದನ್ನು ನೋಡುತ್ತೇವೆ. ನಿಂತಿರುವ ಭಂಗಿ, ಕೆಳಗಿನವರೆಗೂ ಇರುವ ಕೂದಲು, ಆಳವಾದ ಹಾಗೂ ತೀಕ್ಷ್ಣವಾದ ಕಣ್ಣುಗಳು, ಅಗಲವಾದ ಕಿವಿಗಳು, ಕಟ್ಟುಮಸ್ತಾದ ಶರೀರ, ಮೊಣಕಾಲಿನವರೆಗಿರುವ ಕೈಗಳು ಇವೆಲ್ಲವೂ ನಮ್ಮಲ್ಲಿ ಪೂಜ್ಯ ಭಾವನೆಯನ್ನು ಮೂಡಿಸುತ್ತವೆ. ನಮ್ಮ ಗೌರವವನ್ನು ಸಮರ್ಪಿಸಿದ ಮೇಲೆ ಮತ್ತೆ ಹೊರಾಂಗಣಕ್ಕೆ ಬಂದು ಅಲ್ಲಿ ಕುಳಿತು ಶ್ರೀ ಸದ್ಗುರು ಜಂಗಲಿ ಮಹಾರಾಜರಿಗೆ ನಿಶ್ಶಬ್ದವಾಗಿ ಪ್ರಾರ್ಥನೆ ಸಲ್ಲಿಸುತ್ತೇವೆ. ಅವರು ಸಮಾಧಿಯಾದ ಸಮಯದಿಂದ, ಟಂಬೇಕರ್ ಕುಟುಂಬದವರು ಈ ಸಮಾಧಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ರಾಜೇಂದ್ರ ಟಂಬೇಕರ್ ಅವರ ಮುತ್ತಜ್ಜನಿಗೆ ಜಂಗಲಿ ಮಹಾರಾಜರು ನೀಡಿದ ಆಯತಾಕಾರದ ಪೆಟ್ಟಿಗೆ ಮತ್ತು ವೃತ್ತಾಕಾರದ ದಿಂಬುಗಳ ಗೌರವಾನ್ವಿತ ಒಡೆಯರೇ ಟಾಂಬೇಕರ್ ಕುಟುಂಬದವರು.

ಅನೇಕ ದೇವಾಲಯಗಳಲ್ಲಿರುವಂತೆ ಇಲ್ಲಿಯೂ ಗುರುವಾರ ಪ್ರಮುಖವಾದ ದಿನ. ಪ್ರತಿ ಗುರುವಾರ ಸಾಯಂಕಾಲ ಭಕ್ತರು ಸಮಾಧಿ ದೇವಾಲಯಕ್ಕೆ ಬಂದು ಹೂವುಗಳನ್ನು ಅರ್ಪಿಸುವುದು ಪದ್ಧತಿ. ಸಾಯಂಕಾಲ ಏಳು ಗಂಟೆಗೆ ಸರಿಯಾಗಿ ಆರತಿಯು ನಡೆಯುತ್ತದೆ. ಆ ಸಮಯದಲ್ಲಿ ಭಕ್ತರಿಂದ ದೇವಾಲಯ ತುಂಬಿಹೋಗಿದ್ದು, ಸುಮಧುರವಾದ ಭಜನೆಗಳು ಕೇಳಿಬರುತ್ತವೆ. ಆರತಿ ಆರಂಭವಾಗುವುದಕ್ಕೆ ಮುಂಚೆ ಎಲ್ಲರನ್ನೂ ಸಮಾಧಿ ಇರುವ ಒಳ ಅಂಗಳದಿಂದ ಹೊರಕ್ಕೆ ಕಳುಹಿಸಲಾಗುತ್ತದೆ. ಅವರೆಲ್ಲರೂ ಹೊರಾಂಗಣದಲ್ಲಿ ಸೇರುತ್ತಾರೆ; ಆಗ ಆರತಿಯು ದೇವಾಲಯದ ಘಂಟಾನಾದದೊಂದಿಗೆ ಒಂದೇ ಒಂದು ನಗಾರಿಯೊಂದಿಗೆ ನಡೆಯುತ್ತದೆ. ಇದಾದ ನಂತರ ಎಲ್ಲರಿಗೂ ಆರತಿಯನ್ನು ಕೊಡಲಾಗುತ್ತದೆ. ಅನಂತರ ಬಹಳ ಜನ ಹೊರಟು ಹೋಗುತ್ತಾರೆ. ಉಳಿದವರು ಅಲ್ಲಿಯೇ ಕುಳಿತು ತಮಗೆ ಇಷ್ಟವಾದ ರೀತಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ, ಮತ್ತು ಅನುಗ್ರಹಕ್ಕಾಗಿ ಬೇಡುತ್ತಾರೆ. ಸದ್ಗುರು ಜಂಗಲಿ ಮಹಾರಾಜರು ಮುಕ್ತಿ ಹೊಂದಿ ಒಂದು ಶತಮಾನ ಕಳೆದಿದ್ದರೂ, ಅವರು ಸಾವಿರಾರು ಭಕ್ತರ ಹೃದಯದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ.

* * * *



## ೫. ಬ್ರಹ್ಮಚೈತನ್ಯ ಶ್ರೀ ಗೊಂದಾವಳೇಕರ್ ಮಹಾರಾಜರು

ಸಾಮಾನ್ಯವಾಗಿ ಆನಂತರದ ಜೀವನದಲ್ಲಿ ಸಂತರಾಗುವವರ ಮನೆಗಳಲ್ಲಿ, ದೈವ ಭಕ್ತಿ ಹಾಗೂ ವೈಯಕ್ತಿಕ ದೇವತೆಗಳ ಅರ್ಚನೆ ಮುಂತಾದವು ದೃಢವಾಗಿ ಹರಿಯುತ್ತಿರುತ್ತವೆ. ಈ ಮಾತು ಸಂತರ ಪೂರ್ವ ಚರಿತ್ರೆ ತಿಳಿಯದಿದ್ದವರಿಗೆ ಅನ್ವಯವಾಗುವುದಿಲ್ಲ. ಶ್ರೀ ಗಜಾನನ ಮಹಾರಾಜ್, ಶಿರಡಿ ಸಾಯಿಬಾಬಾ, ಅಕ್ಕಲ ಕೋಟೆಯ ಸ್ವಾಮಿ ಸಮರ್ಥ ಮುಂತಾದವರಿಗೆ ಅನ್ವಯವಾಗುವುದಿಲ್ಲ. ಆದರೆ ಪೂರ್ವ ಚರಿತ್ರೆಯ ಮಾಹಿತಿಗಳು ಲಭ್ಯವಿರುವ ಸಂತರ ವಿಷಯದಲ್ಲಿ, ಅಂತಹವರ ಕುಟುಂಬಗಳಲ್ಲಿ ದೈವಭಕ್ತಿ, ದೈವತ್ವದ ಹರಿವು ಮುಂತಾದವು ವಿಶೇಷವಾಗಿ ಕಾಣಬರುತ್ತವೆ. ರಾಘವೇಂದ್ರ ಸ್ವಾಮಿಗಳ ತಂದೆ–ತಾಯಿಗಳಾದ ತಿಮ್ಮಣ್ಣಭಟ್ಟ ಮತ್ತು ಗೋಪಿಕಾಂಬಾ, ವಾಸುದೇವಾನಂದ ಸರಸ್ವತಿಯವರ ತಂದೆ ಗಣೇಶಭಟ್ಟ ಹಾಗೂ ಅಜ್ಜ ಹರಿಭಟ್ಟ ಮುಂತಾದವರು ಸ್ವತಃ ದೈವಭಕ್ತರಾಗಿದ್ದರು. ಈ ವಿಶಿಷ್ಟ ಗುಣವನ್ನು ಬ್ರಹ್ಮಚೈತನ್ಯ ಶ್ರೀ ಗೋಂದಾವಳೇಕರ್ ಮಹಾರಾಜರವರ ಜೀವನದಲ್ಲೂ ಕಾಣಬಹುದು.

ಶ್ರೀ ಗೋಂದಾವಳೇಕರ್ ಮಹಾರಾಜರು ಕುಲಕರ್ಣಿ ಕುಟುಂಬದಲ್ಲಿ ಜನಿಸಿದರು. ಇವರ ಪೂರ್ವಜರು ಮಹಾರಾಷ್ಟ್ರದ ಸತಾರ ಜಿಲ್ಲೆಯ ಗೋಂದಾವಳೆ ಎಂಬಲ್ಲಿ ನೆಲೆಸಿದ್ದರು. ಇವರ ಕುಟುಂಬದಲ್ಲಿ ವಿಠಲನ ಉಪಾಸನೆ ವಿಶೇಷವಾಗಿದ್ದು, ಅನೇಕರು ಪಂಡರಾಪುರಕ್ಕೆ ಹೋಗಿ ಬಂದಿದ್ದರು. ಈ ಪರಂಪರೆಗೆ ಅನುಗುಣವಾಗಿ ಈ ಕುಟುಂಬದವರು ಆಧ್ಯಾತ್ಮಿಕದ ಕಡೆಗೆ ಮನಸೋತಿದ್ದರು. ಇವರ ಅಜ್ಜ ಲಿಂಗೋಪಂತ್ ಮತ್ತು ತಂದೆ ರಾವೋಜಿಯವರು ಆಧ್ಯಾತ್ಮದಲ್ಲಿ ಮುಳುಗಿದ್ದರು. ಇದನ್ನೇ ಆಧರಿಸಿ ಕುಲಕರ್ಣಿಯ ಕಸುಬನ್ನು ಮಾಡುತ್ತಿದ್ದರು. ಇವರ ತಾಯಿ ಗೀತಾಬಾಯಿಯು ಧಾರ್ಮಿಕ ಹೃದಯವುಳ್ಳವಳಾಗಿದ್ದಳು. ಅಗತ್ಯ ಬಿದ್ದವರಿಗೆ ಈಕೆಯು ಸಹಾಯ ಮಾಡುತ್ತಿದ್ದಳು. ಸಾಂಭಾಜಿ ಎಂಬ ಸಂತರೊಬ್ಬರು ರಾವೋಜಿ ಮತ್ತು ಅವನ ಪತ್ನಿ ಗೀತಾಬಾಯಿಗೆ ಒಂದು ವರವನ್ನು ನೀಡಿದರು. ಇದರ ಫಲವಾಗಿ ೧೮೪೪ರ ಫೆಬ್ರವರಿ ೧೦ರಂದು ಗೊಂದಾವಳೆಯಲ್ಲಿ ಮಗನು ಜನಿಸಿದನು. ಅವನಿಗೆ ಗಣಪತಿ ಎನ್ನುವ ಹೆಸರು ಇಟ್ಟರು.

ಬಾಲಕನಾಗಿದ್ದಾಗ ಇವನಿಗೆ ತನ್ನ ಅಜ್ಜ ಲಿಂಗೋಪಂತನ ವಿಷಯದಲ್ಲಿ ವಿಶೇಷ ಆಸಕ್ತಿಯಿದ್ದಿತು. ಇವನು ತುಂಬ ಬುದ್ಧಿವಂತನಾಗಿದ್ದು, ಅವನ ಅಜ್ಜ ರಾತ್ರಿ ಮಲಗುವ ಸಮಯದಲ್ಲಿ ಹೇಳಿಕೊಡುತ್ತಿದ್ದ ಭಗವದ್ಗೀತೆಯ ಶ್ಲೋಕಗಳನ್ನು ಕೂಡಲೆ ಬಾಯಿಪಾಠ ಮಾಡುತ್ತಿದ್ದನು. ಇವನಿಗೆ ಉಪನಯನ ಮಾಡಿದ ನಂತರ ವೈದಿಕ ಶಿಕ್ಷಣಕ್ಕಾಗಿ ಸಖಾರಾಂ ಭಟ್ ಪಾಠಕ್ ಎನ್ನುವ ವಿದ್ವಾಂಸರನ್ನು ನಿಯಮಿಸಿದರು. ಸ್ಥಳೀಯ ಪ್ರಾಥಮಿಕ ಶಾಲೆಯನ್ನು ಸೇರಿದ ಬಾಲಕನು ಶಿಕ್ಷಕರು ಕಲಿಸಿಕೊಡುವ ಎಲ್ಲ ಪಾಠಗಳನ್ನೂ ಕಲಿತುಕೊಂಡನು. ಇದಾದನಂತರ ಸ್ಕೂಲಿನಿಂದ ಓಡಿಹೋಗಿ ತಂಟೆ ಮಾಡುತ್ತಿದ್ದು, ಶಾಲೆಯ ಇತರ ಹುಡುಗರನ್ನೂ ಇದರಲ್ಲಿ ಸೇರಿಸಿಕೊಳ್ಳುತ್ತಿದ್ದನು. ಮನೆಯ ಹಸುಗಳನ್ನು ಮೇಯಿಸಿಕೊಂಡು ಬರುವಾಗಲೂ ಹೀಗೇ ಮಾಡುತ್ತಿದ್ದನು. ಒಂದು ದಿನ ಇವನ ತಾಯಿಯು ಕೈಯಲ್ಲಿ ಒಂದು ಕೋಲು ಹಿಡಿದುಕೊಂಡು ಇವನನ್ನು ಅಟ್ಟಿಸಿಕೊಂಡು ಬರುವಾಗ ಕಾಲು ಎಡವಿ ಬಿದ್ದುಬಿಟ್ಟಳು. ಅಂದಿನಿಂದ ಈ ಬಾಲಕನ ತಂಟೆಗಳು ನಿಂತುಹೋದವು. ಅವನಲ್ಲಿ ಒಂದು ರೀತಿಯ ಆತ್ಮಶೋಧನೆ ಉಂಟಾಯಿತು. ಇವನು ತುಂಟತನವನ್ನೆಲ್ಲ ತ್ಯಜಿಸಿದನು. ಅದರ ಬದಲು ರಾಮ ನಾಮ ಜಪದಲ್ಲಿ ಮತ್ತು ಧ್ಯಾನದಲ್ಲಿ ತೊಡಗಿಸಿಕೊಳ್ಳಲು ಪ್ರಾರಂಭಿಸಿದನು.

ಒಂದು ದಿನ ಸ್ಥಳೀಯ ಹನುಮಂತನ ದೇವಾಲಯದಲ್ಲಿ, ಹತ್ತು ವರ್ಷದ ಬಾಲಕ ಗಣಪತಿಯು, ನಿಗೂಢ ಸಂತನೊಬ್ಬನನ್ನು ನೋಡಿದನು. ಈ ರೀತಿಯ ಜೀವನವನ್ನು ಏಕೆ ಆರಿಸಿಕೊಂಡಿದ್ದೀರಿ ಎಂದು ಬಾಲಕನು ಪ್ರಶ್ನಿಸಿದನು. ದೇವರನ್ನು ಮುಖತಃ ನೋಡುವುದಕ್ಕಾಗಿ ಎನ್ನುವ ಉತ್ತರ ಬಂದಿತು. ಹಾಗಾದರೆ ಇದರಲ್ಲಿ ನೀವು ಸಫಲರಾಗಿದ್ದೀರಾ ಎಂದು ಗಣಪತಿಯು ಪ್ರಶ್ನಿಸಿದನು. ಗುರುವಿನ ಕೃಪೆಯಿಲ್ಲದೆ ಇದು ಸಾಧ್ಯವಿಲ್ಲ ಎಂದು ಆ ಸಂತನು ಉತ್ತರಿಸಿದನು. ಈ ಉತ್ತರವು ಬಾಲಕನ ಮೇಲೆ ಗಾಢ ಪರಿಣಾಮ ಬೀರಿತು. ಒಂದು ದಿನ ಸಾಯಂಕಾಲ ಯಾರಿಗೂ ಹೇಳದೆ ಇಬ್ಬರು ಸ್ನೇಹಿತರನ್ನು ಕರೆದುಕೊಂಡು ಗೊಂದಾವಳೆಯನ್ನು ಬಿಟ್ಟು, ಗುರುವನ್ನು ಹುಡುಕಿಕೊಂಡು ಕೊಲ್ಲಾಪುರದ ಮಹಾಲಕ್ಷ್ಮಿ ದೇವಾಲಯಕ್ಕೆ ಬಂದನು. ಮೂರುವಾರಗಳ ನಂತರ ಒಬ್ಬ ಸ್ನೇಹಿತನು ತನ್ನ ತಾಳ್ಮೆಯನ್ನು ಕಳೆದುಕೊಂಡು ಗೋಂದಾವಳೆಗೆ ಹಿಂದಿರುಗಿ, ಕುಲಕರ್ಣಿಯವರಿಗೆ ಎಲ್ಲ ವಿಷಯಗಳನ್ನೂ ತಿಳಿಸಿದನು. ಕೂಡಲೇ ರಾವೋಜಿಯು ಕೊಲ್ಲಾಪುರಕ್ಕೆ ಹೋಗಿ ತನ್ನ ಮಗನನ್ನು ಹಿಂದಿರುಗಿ ಕರೆದುಕೊಂಡು ಬಂದನು. ಹುಡುಗನ ಮೇಲೆ ನಿಯಂತ್ರಣವನ್ನು ಹಾಕುವ ದೃಷ್ಟಿಯಿಂದ ಸಾಂಭಾಜಿ ಗೋಡ್ಸೆಯವರ ಮಗಳನ್ನು ತಂದು ಅವನಿಗೆ ಮದುವೆ ಮಾಡಿದರು. ಇದರಿಂದ ಬಾಲಕನು ವೈವಾಹಿಕ ಜೀವನದಲ್ಲಿ ಆಸಕ್ತಿ ತೋರಿಸಿ ಮಾಮೂಲು ಜೀವನಕ್ಕೆ ಮರಳುತ್ತಾನೆಂದು ಎಲ್ಲರೂ ಭಾವಿಸಿದರು.



ಆದರೆ ಇದು ಅವರು ಬಯಸಿದ ಫಲಿತಾಂಶವನ್ನು ತರಲಿಲ್ಲ. ಅವನು ಧ್ಯಾನ ಮತ್ತು ರಾಮನಾಮ ಪಾರಾಯಣಗಳಲ್ಲಿ ಆಸಕ್ತಿಯನ್ನು ತೋರಲು ಮುಂದುವರಿಸಿದನು. ಇದರ ಜೊತೆಗೆ ಒಬ್ಬ ಗುರುವನ್ನು ಪಡೆಯಬೇಕೆಂಬ ಆಸೆಯೂ ಬಲವಾಯಿತು. ಇದರಿಂದಾಗಿ ಅವನು ಮನೆಯನ್ನು ಬಿಟ್ಟು ಹೊರಟನು. ಆಗ ಅವನ ವಯಸ್ಸು ಕೇವಲ ಹನ್ನೆರಡು. ತನ್ನ ನಿರ್ಧಾರವನ್ನು ತಾಯಿಗೆ ತಿಳಿಸಿದನು. ಕೊನೆಗೆ ಮನಸ್ಸಿಲ್ಲದೆ ಇವನ ನಿರ್ಧಾರಕ್ಕೆ ಒಪ್ಪಿಗೆ ನೀಡಿದಳು.

ತನ್ನ ಈ ಹುಡುಕಾಟದ ಸಮಯದಲ್ಲಿ ಈ ಯುವಕನು ಅನೇಕ ಸ್ಥಳಗಳನ್ನು ಸಂದರ್ಶಿಸಿದನು ಹಾಗೂ ಅನೇಕ ಗುರುಗಳನ್ನು ಭೇಟಿಮಾಡಿದನು. ಹರಿಪುರದಲ್ಲಿದ್ದ ರಾಧಾಬಾಯಿಯಿಂದ ಆರಂಭವಾಗಿ, ಹುಮ್ನಾಬಾದಿನ ಮಾಣಿಕ್ ಪ್ರಭು, ವಾರಾಣಸಿಯ ತೈಲಂಗ್ ಸ್ವಾಮಿ, ಕಲ್ಕತ್ತದಲ್ಲಿ ಶ್ರೀ ರಾಮಕೃಷ್ಣ ಮುಂತಾದವರನ್ನು ಭೇಟಿಯಾದನು. ಆದರೆ ತನಗೆ ಬೇಕಾದದ್ದು ಈ ಯಾರಿಂದಲೂ ಸಿಗಲಿಲ್ಲ. ಕೊನೆಗೆ ನದಿಯ ದಂಡೆಯಲ್ಲಿ ಒಬ್ಬ ಸಂತನು ಸಿಕ್ಕಿದನು. ಅವನು ಈತನಿಗೆ ಮಹಾರಾಷ್ಟ್ರಕ್ಕೆ ಸೇರಿದ ನಾಂದೇಡ್‌ಗೆ ಸಮೀಪದ ಯೇಲೆಗಾಂವ್ ಎಂಬ ಹಳ್ಳಿಯಲ್ಲಿರುವ ಶ್ರೀ ತುಕಾರಾಂ ಚೈತನ್ಯರನ್ನು ಭೇಟಿ ಮಾಡುವಂತೆ ತಿಳಿಸಿದನು.

ಒಂದು ದಿನ ಬೆಳಿಗ್ಗೆ ಈ ಯುವಕನು ಯೇಲೆಗಾಂವ್‌ಗೆ ಹೋದನು. ಆದರೆ ಜನಗಳು ತುಕಾಮಾಯಿ ಎಂದು ಕರೆಯುವ ಶ್ರೀ ತುಕಾರಾಂ ಮನೆಯಲ್ಲಿ ಇರಲಿಲ್ಲ. ಅವನು ಸಾಯಂಕಾಲ ಮನೆಗೆ ಹಿಂದಿರುಗಿದಾಗ, ಯುವಕನನ್ನು ನೋಡಿ ತುಂಬ ಸಂತೋಷದಿಂದ ಅವನನ್ನು ಆಲಂಗಿಸಿಕಂಡು ಸಂತೋಷಪಟ್ಟನು. ಏಕೆಂದರೆ ತುಕಾರಾಮನಿಗೆ ಈ ರೀತಿಯ ಒಬ್ಬನು ಬರುತ್ತಾನೆಂದು ಒಳ ಅರಿವಿನಿಂದ ತಿಳಿದುಬಂದಿತ್ತು. ಈ ಯುವಕನಿಗೂ ಈತನೇ ತನಗೆ ಬೇಕಾದ ಮಾರ್ಗದರ್ಶನ ನೀಡುವ ಗುರು ಎಂದೂ ತಕ್ಷಣವೇ ತಿಳಿದುಬಂದಿತು. ಒಂಬತ್ತು ತಿಂಗಳುಗಳ ಕಾಲ ಈ ಯುವಕನು ತುಕಾಮಾಯಿ ಜೊತೆಯಲ್ಲಿದ್ದಾಗ ವಿಧೇಯತೆ ಮತ್ತು ನಂಬಲಸಾಧ್ಯವಾದ ಕಠಿಣ ಪರೀಕ್ಷೆಗಳನ್ನು ತುಕಾಮಾಯಿ ನೀಡಿದನು. ಈ ಯುವಕನು ಯಾವ ದೂರೂ ಅಥವಾ ಗೊಣಗಾಟವಿಲ್ಲದೆ ಈ ಎಲ್ಲ ಪರೀಕ್ಷೆಗಳನ್ನು ಸುಲಭವಾಗಿ ನಿಭಾಯಿಸಿ ಗುರುವಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿದನು. ಕೊನೆಗೆ ರಾಮನವಮಿಯ ದಿನದಂದು ಅಶ್ವತ್ಥವೃಕ್ಷದ ಕೆಳಗೆ ಕುಳಿತುಕೊಂಡು ತನ್ನ ಕೈಯನ್ನು ಯುವಕನ ತಲೆಯ ಮೇಲೆ ಇಟ್ಟು ಅವನಿಗೆ ಅನುಗ್ರಹ ಮಾಡಿದನು. ಅವನಿಗೆ ಬ್ರಹ್ಮಚೈತನ್ಯ ಎಂಬ ಹೊಸ ಹೆಸರು ನೀಡಿ 'ಶ್ರೀ ರಾಂ ಜೈರಾಂ ಜೈ ಜೈರಾಂ' ಎಂಬ ಮಂತ್ರವನ್ನು ಉಪದೇಶಿಸಿದನು. ಅಗತ್ಯವಿರುವ ಜನಗಳ ಸಮೀಪಕ್ಕೆ ಹೋಗಿ ಅವರಿಗೆ ಸೇವೆಯನ್ನು ಮಾಡಲು, ರಾಮನಾಮದ ಮೂಲಕ ಅವರು ದೈವತ್ವದ ಕಡೆಗೆ ಹೋಗಲು ಮಾರ್ಗದರ್ಶನ ಮಾಡುವಂತೆ ತುಕಾಮಾಯಿ ಆಜ್ಞೆ ಮಾಡಿದನು.

ತನಗೆ ಬೇಕಾದ ಗುರುಕೃಪೆ ದೊರಕಿದ ನಂತರ, ದೈವತ್ವವನ್ನು ಅನುಭವಿಸಿದ ನಂತರ, ತನ್ನ ಆತ್ಮವು ಪರಮಾತ್ಮನ ಜೊತೆ ಲೀನವಾದ ಅನುಭವ ಆದನಂತರ, ತುಕಾಮಾಯಿಯ ಸಲಹೆಯ ಮೇರೆಗೆ ಯುವಕನು ಯೇಲೆಗಾಂವ್‌ನಿಂದ ಹೊರಟನು. ಮೊದಲಿಗೆ ಉಜ್ಜಯಿನಿಗೆ ಹೋಗಿ, ನಂತರ ಹಿಮಾಲಯದ ಕಡೆಗೆ ಪ್ರಯಾಣ ಮಾಡಿ, ಆನಂತರ ಅಯೋಧ್ಯೆ, ವಾರಾಣಸಿ, ಕಲ್ಕತ್ತ, ಇಂದೂರುಗಳಲ್ಲಿ ಸ್ವಲ್ಪ ಸಮಯ ಜೀವಿಸಿದ್ದು, ಕೊನೆಗೆ ಎಂಟು ವರ್ಷಗಳ ನಂತರ ಗೋಂದಾವಳೆಗೆ ಹಿಂದಿರುಗಿ ಸ್ಥಳೀಯ ಹನುಮಾನ್ ದೇವಾಲಯದಲ್ಲಿ ವಾಸಿಸಲು ಆರಂಭಿಸಿದನು. ಈಗ ಅವನು ಗಡ್ಡವನ್ನು ಬಿಟ್ಟುಕೊಂಡು, ಉದ್ದನೆಯ ಸನ್ಯಾಸಿಯ ಬಟ್ಟೆಯನ್ನು ಧರಿಸಿದ್ದುದರಿಂದ, ಅವನ ತಾಯಿ, ಹೆಂಡತಿ, ಅತ್ತೆ ಮೊದಲಾದವರಿಗೆ ಇವನನ್ನು ಗುರುತು ಹಿಡಿಯಲು ಸಾಧ್ಯವಾಗಲಿಲ್ಲ. ತಮ್ಮ ಅಲೆದಾಟದ ಸಮಯದಲ್ಲಿ ತಮ್ಮ ಮಗ ಮತ್ತು ಅಳಿಯನನ್ನು ನೋಡಿದಿರಾ ಎಂದು ಕೇಳಿದಾಗ, ಕೆಲವು ದಿನಗಳ ನಂತರ ಅವರು ತನ್ನನ್ನು ಖಂಡಿತವಾಗಿ ಭೇಟಿ ಮಾಡುತ್ತಾರೆ ಎಂದು ಉತ್ತರ ನೀಡಿದನು. ಗೊಂದಾವಳೆಯಲ್ಲಿ ಸ್ವಲ್ಪ ಕಾಲವಿದ್ದು ಸಂತರು ದಕ್ಷಿಣದ ಕಡೆಗೆ ಹೋಗಿ, ಅಲ್ಲಿಂದ ಯೇಲೆಗಾಂವ್‌ಗೆ ಹಿಂದಿರುಗಿ ತಮ್ಮ ಗುರುಗಳ ಜೊತೆ ಇದ್ದರು. ಒಂದು ವರ್ಷದ ನಂತರ ಮತ್ತೆ ಗೋಂದಾವಳೆಗೆ ಹಿಂದಿರುಗಿದರು. ಈ ಸಾರಿ ಅವರ ಮನೆಗೆ ಹೋಗಿ ತಮ್ಮ ಗುರುತನ್ನು ಹೇಳಿಕೊಂಡರು. ಕುಟುಂಬದವರಿಗೆ ತುಂಬ ಸಂತೋಷವಾಯಿತು, ಅವರು ಅವರನ್ನು ಸ್ವಾಗತಿಸಿದರು. ಅನೇಕ ವರ್ಷಗಳ ನಂತರ ಹಿಂದಿರುಗಿ ಬಂದಿದ್ದು, ಆಧ್ಯಾತ್ಮಿಕವಾಗಿ ವಿಕಾಸ ಹೊಂದಿ ಸಂತರಾಗಿರುವುದು, ಇವುಗಳಿಂದ ಇವರ ಗೌರವವು ಹೆಚ್ಚಿ, ಇವರ ಮನೆಗೆ ಭಕ್ತ ಸಂದರ್ಶಕರು ಬರುವುದು ಹೆಚ್ಚಿತು. ಬರುವ ಜನಗಳ ಸಂಖ್ಯೆ ಹೆಚ್ಚಿದುದರಿಂದ ಅವರನ್ನು ಭೇಟಿ ಮಾಡುವ ಸಲುವಾಗಿ ವಿಠಲ ದೇವಾಲಯದ ಮುಂಭಾಗದ ಜಗಲಿಯ ಮೇಲೆ ಕುಳಿತುಕೊಳ್ಳಲು ಆರಂಭಿಸಿದರು. ಅವರ ಮಾವನವರು ಖತ್ವಾಲದಿಂದ ಬಂದು ಭೇಟಿಯಾದಾಗ ಅವರ ಮಗಳ ವಿಷಯದಲ್ಲಿ ತಾವು ತಮ್ಮ ಕರ್ತವ್ಯವನ್ನು ಪೂರ್ತಿಯಾಗಿ ನಿಭಾಯಿಸುವುದಾಗಿ ಮಾತು ಕೊಟ್ಟರು. ತಾವೇ ಖತ್ವಾಲ್‌ಗೆ ಹೋಗಿ ತಮ್ಮ ಪತ್ನಿ ಸರಸ್ವತಿಯನ್ನು ಗೊಂದಾವಳೆಯ ತಮ್ಮ ಮನೆಗೆ ಕರೆತಂದರು.

ತನ್ನ ಪತಿಯು ಸಾಮಾನ್ಯ ಮನುಷ್ಯನಲ್ಲ ಎಂಬುದು ತಿಳಿಯಲು ಸರಸ್ವತಿಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಯಾವ ವಿಧದಲ್ಲಿಯೂ ದೂಷಣೆ ಮಾಡದೆ ತನಗಾಗುವಷ್ಟು ಸಹಕಾರವನ್ನು ತನ್ನ ಪತಿಗೆ ನೀಡಿದಳು ಮತ್ತು ಪತಿಯನ್ನು ನೋಡಲು ಪ್ರತಿನಿತ್ಯ ಆಗಮಿಸುತ್ತಿದ್ದ ಭಕ್ತರಿಗೆ ಯಾವ ತೊಂದರೆಗಳೂ ಉಂಟಾಗದಂತೆ ನೋಡಿಕೊಳ್ಳುತ್ತಿದ್ದಳು. ತುಕಾಮಾಯಿ ಬಗ್ಗೆ ತನ್ನ ಪತಿ ಹೇಳುತ್ತಿದ್ದ ಕಥೆಗಳನ್ನು ಕೇಳಿ, ಆ ಗುರುವನ್ನು ತಾನೂ ನೋಡಬೇಕೆಂದು ಬಯಸಿದಳು. ಆದುದರಿಂದ



೧೮೭೪ರಲ್ಲಿ ಸಂತ ಮಹಾರಾಜರು ಯೇಲೆಗಾಂವ್‌ಗೆ ಹೋಗಬೇಕೆಂದು ತೀರ್ಮಾನಿಸಿದಾಗ ಆಕೆಯನ್ನೂ ಜೊತೆಗೆ ಕರೆದುಕೊಂಡು ಹೋಗಬೇಕಾಯಿತು. ಯೇಲೆಗಾಂವ್‌ನಲ್ಲಿ ಅವರಿಬ್ಬರೂ ಇದ್ದಾಗ ತಮಗೆ ಒಬ್ಬ ಮಗನು ಹುಟ್ಟಬೇಕೆಂಬ ವರವನ್ನು ತುಕಾಮಾಯಿಯನ್ನು ಸರಸ್ವತಿ ಕೇಳಿದಳು. ವರವನ್ನು ಅವರು ನೀಡಿದರು. ಆದರೆ ಸಂತ ಮಹಾರಾಜರು ಈ ರೀತಿ ವರವನ್ನು ಕೇಳಿದ್ದಕ್ಕಾಗಿ ಹೆಂಡತಿಯನ್ನು ನಿಂದಿಸಿದರು. ಇದರಿಂದ ಪಶ್ಚಾತ್ತಾಪಗೊಂಡ ಸರಸ್ವತಿಯು ತನ್ನ ತಪ್ಪನ್ನು ಕ್ಷಮಿಸಬೇಕೆಂದೂ, ತನ್ನ ಗಂಡನ ಜೀವನಕ್ಕೆ ಹೊಂದುವಂತೆ ಜೀವಿಸುವುದನ್ನು ಕಲಿಸಿಕೊಡಬೇಕೆಂದೂ ಕೇಳಿಕೊಂಡಳು. ನಂತರ ಮಹಾರಾಜರು ಆಕೆಯನ್ನು ನಾಸಿಕಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಅವರಿಬ್ಬರೂ ವಾಸವಾಗಿದ್ದ ಸಮಯದಲ್ಲಿ ಯೋಗವನ್ನು ಆಕೆಗೆ ಕಲಿಸಿದರು. ನಂತರ ಮಹಾರಾಜರು ತಮ್ಮ ಪತ್ನಿಯನ್ನು ಗೋಂದಾವಳೆಗೆ ಕಳುಹಿಸಿ, ತಾವೊಬ್ಬರೇ ಉತ್ತರ ಭಾರತದ ಪ್ರವಾಸ ಹೊರಟರು. ಈ ಪ್ರವಾಸದ ಸಮಯದಲ್ಲಿ ಇಂದೂರು ಮತ್ತು ಅಯೋಧ್ಯೆಗಳನ್ನು ಸಂದರ್ಶಿಸಿ ಗೋಂದಾವಳೆಗೆ ಹಿಂದಿರುಗಿದರು. ಕೆಲವು ದಿನಗಳ ನಂತರ ಸರಸ್ವತಿ ಒಂದು ಗಂಡುಮಗುವಿಗೆ ಜನ್ಮವಿತ್ತಳು; ಆದರೆ ಆ ಮಗು ಜಾಸ್ತಿ ದಿನ ಬದುಕಲಿಲ್ಲ. ಈ ಮಧ್ಯೆ ಸರಸ್ವತಿಯ ಅನಾರೋಗ್ಯಪೀಡಿತಳಾಗಿ ಕೆಲವು ದಿನಗಳ ನಂತರ ಮರಣ ಹೊಂದಿದಳು.

ಕೆಲವು ತಿಂಗಳುಗಳ ನಂತರ ಮಹಾರಾಜರ ತಾಯಿಯವರು ತಮ್ಮ ಮಗನು ಇನ್ನೊಂದು ಮದುವೆಯಾಗಬೇಕೆಂದು ಪೀಡಿಸತೊಡಗಿದರು. ಅದಕ್ಕೆ ಷರತ್ತಿನ ಮೇಲೆ ಒಪ್ಪಿಗೆ ನೀಡಿದರು. ಅದೇನೆಂದರೆ ವಧುವನ್ನು ತಾವೇ ಆರಿಸುವುದು. ಇದಕ್ಕೆ ತಾಯಿಯು ಒಪ್ಪಿಗೆ ನೀಡಿದಳು. ಅತಪಟಿ ಎಂಬ ಗ್ರಾಮದಲ್ಲಿದ್ದ ಸಖಾರಾಂಪಂತ್ ದೇಶಪಾಂಡೆಯವರ ಮಗಳು ಯಮುನ ಎಂಬ ವಧುವನ್ನು ಇವರು ಒಪ್ಪಿಕೊಂಡರು. ಈ ಹುಡುಗಿಯು ಹುಟ್ಟಿನಿಂದಲೇ ಕುರುಡಿಯಾಗಿದ್ದಳು. ಆಶಾಭಂಗವಾದರೂ ತಾಯಿಯು ಒಪ್ಪಿಗೆ ನೀಡಿ ಆಕೆಯನ್ನು ಸೊಸೆಯನ್ನಾಗಿ ಸ್ವೀಕರಿಸಿ ಅವಳಿಗೆ ಸರಸ್ವತಿ ಎಂಬ ಹೊಸ ಹೆಸರು ನೀಡಿದಳು.

ಮುಂದಿನ ಕೆಲವು ವರ್ಷಗಳಲ್ಲಿ ಮಹಾರಾಜರು ದೇಶದ ಉದ್ದಗಲಕ್ಕೂ ಸಂಚಾರ ಮಾಡಿ, ಸಾವಿರಾರು ಜನರನ್ನು ಭೇಟಿ ಮಾಡಿ ಅವರಿಗೆ ಅನೇಕ ವಿಧಗಳಲ್ಲಿ ಸಹಾಯ ಮಾಡಿದ್ದಲ್ಲದೆ, ಮಾರ್ಗದರ್ಶನವನ್ನೂ ಮಾಡಿದರು. ದೇವರ ದರ್ಶನವಾಗಬೇಕಾದರೆ, ನಾಮಜಪವೇ ಖಚಿತವಾದ ಮತ್ತು ಅತ್ಯಂತ ಸುಲಭವಾದ ಮಾರ್ಗವೆಂದು ಬೋಧಿಸಿದರು. ಅದರಿಂದ ದೈವದ ಸಾಕ್ಷಾತ್ಕಾರ ಹೇಗೆ ಆಗುತ್ತದೆ ಎಂಬುದನ್ನು ವಿವರಿಸಿದರು. ದೇವರ ನಾಮದ ಜಪದಿಂದ ದೇವರ ಕರುಣೆ ಖಂಡಿತ ದೊರಕುತ್ತದೆ ಎಂದು ನಂಬಿದ್ದರು. ಅವರಿಗೆ ಶ್ರೀರಾಮನ ಹೆಸರೇ

ಸರ್ವಸ್ವವಾಗಿದ್ದಿತು. ಆದುದರಿಂದ ರಾಮ್ ಎಂದು ಜಪ ಮಾಡಲು ಹೇಳುತ್ತಿದ್ದರು.

೧೮೮೦ರಲ್ಲಿ ಅವರು ಗೊಂದಾವಳೆಗೆ ಹಿಂದಿರುಗಿದರು. ಬಹಳ ವರ್ಷ ಕಾಲ ಅಲ್ಲಿಂದ ಹೊರ ಹೋಗಲಿಲ್ಲ. ಬಹಳ ಜನ ಅವರ ದರ್ಶನಕ್ಕಾಗಿ ಬರುತ್ತಿದ್ದರು; ಅದರಲ್ಲಿ ಬಹಳಷ್ಟು ಮಂದಿ ಪ್ರಾಪಂಚಿಕ ಸುಖಕ್ಕಾಗಿ ಬರುತ್ತಿದ್ದರು. ಆದರೆ ಬಲು ಕಡಿಮೆ ಸಂಖ್ಯೆಯ ಜನ ಆಧ್ಯಾತ್ಮಿಕ ವಿಷಯವನ್ನು ತಿಳಿದುಕೊಳ್ಳಲು ಇವರಲ್ಲಿಗೆ ಬರುತ್ತಿದ್ದರು. ಅವರು ಯಾರನ್ನೂ ಹಿಂದಕ್ಕೆ ಕಳುಹಿಸುತ್ತಿರಲಿಲ್ಲ. ಜನಗಳ ಅಗತ್ಯಕ್ಕಾಗಿ ಒಂದು ರಾಮನ ದೇವಾಲಯವನ್ನು ನಿರ್ಮಿಸಲು ತೀರ್ಮಾನಿಸಿದರು. ಅದರ ನಕ್ಷೆಯನ್ನು ತಾವೇ ತಯಾರಿಸಿದರು. ತಡವಾಲೆ ಎಂಬ ಗ್ರಾಮದ ಶ್ರೀಮಂತನೊಬ್ಬನು ವಿಗ್ರಹಗಳನ್ನು ದೇವಾಲಯಕ್ಕಾಗಿ ನೀಡಿದನು. ೧೮೮೧ರ ರಾಮನವಮಿ ದಿನ ಈ ವಿಗ್ರಹಗಳನ್ನು ಇಲ್ಲಿ ಪ್ರತಿಷ್ಠಾಪಿಸಲಾಯಿತು. ಪ್ರತಿಷ್ಠಾಪನಾ ಕಾರ್ಯಗಳನ್ನು ಮಾಡಲು ಅಲ್ಲಿಗೆ ಕೆಲವು ವಿದ್ವಾಂಸರು ಮತ್ತು ಪುರೋಹಿತರು ಬಂದಿದ್ದರು. ಅವರು ವೈದಿಕ ಜ್ಞಾನವು ಇತರ ಎಲ್ಲ ಜ್ಞಾನಗಳಿಗಿಂತಲೂ ಹೆಚ್ಚು ಎಂಬುದನ್ನು ಹೇಳಿದರು. ಅಂತಹವರಿಗೆ ಮಹಾರಾಜರು ಬುದ್ಧಿವಾದವನ್ನು ಹೇಳಿದರು. ನಾಮಜಪದಿಂದ ಮನಸ್ಸು ಶುದ್ಧಿಗೊಳ್ಳುತ್ತದೆ; ಮನಶ್ಶುದ್ಧಿ ಇಲ್ಲದೆ ಪೂಜಾ ಕೈಂಕರ್ಯಗಳನ್ನು ಮಾಡಿದರೆ ಅದು ಯಾಂತ್ರಿಕವಾಗುತ್ತದೆ. ಅದು ನಿಮ್ಮನ್ನು ದೇವರ ಸಾಕ್ಷಾತ್ಕಾರ ಮಾಡಿಸುವುದಿಲ್ಲ. ರಾಮ ದೇವಾಲಯಕ್ಕೆ ಬರುತ್ತಿದ್ದ ಜನಗಳ ಸಂಖ್ಯೆಯು ಹೆಚ್ಚಿ, ದೇವಾಲಯವು ಸಣ್ಣದಾಗಿ ಕಂಡುಬಂದಿದ್ದರಿಂದ ಸಂತ ಮಹಾರಾಜರು ಪಕ್ಕದಲ್ಲೇ ಇನ್ನೊಂದು ರಾಮ ದೇವಾಲಯವನ್ನು ಕಟ್ಟಿದರು.

ತಮ್ಮಲ್ಲಿಗೆ ಬರುತ್ತಿದ್ದ ನೂರಾರು ಭಕ್ತರನ್ನು ಅವರು ಪ್ರೀತಿ ವಿಶ್ವಾಸಗಳಿಂದ ಕಂಡು, ಅವರ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರುತ್ತಿದ್ದರು. ಆದರೆ ಇದಕ್ಕೆ ತಾವು ಕಾರಣವಲ್ಲವೆಂದೂ ಇದೆಲ್ಲವೂ ರಾಮನಾಮ ಜಪದಿಂದ ಸಾಧ್ಯವಾಯಿತೆಂದೂ ಹೇಳುತ್ತಿದ್ದರು. ಹೀಗಾಗಿ ಜನಗಳ ಮನಸ್ಸಿನಲ್ಲಿ ದೇವರ ಸಾನ್ನಿಧ್ಯ ಉಂಟಾಗುವಂತೆ ಮಾಡುತ್ತಿದ್ದರು. ಅವರು ತಮ್ಮ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುತ್ತಿದ್ದರೂ, ಮಗನಾಗಿ ತಾವು ಮಾಡಬೇಕಾದ ಕರ್ತವ್ಯಗಳಿಗೆ ಚ್ಯುತಿ ತರಲಿಲ್ಲ. ತಮ್ಮ ತಾಯಿಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಮಾಡಿಕೊಟ್ಟರು. ಆಕೆಯು ಕಾಶಿಯಾತ್ರೆ ಮಾಡಬೇಕೆಂದು ಅಪೇಕ್ಷೆ ಪಟ್ಟಾಗ ತಾವೇ ಆಕೆಯನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದರು. ಯಾತ್ರೆಗೆ ಹೊರಡುವುದಕ್ಕೆ ಮುಂಚೆ ತಮ್ಮ ಮನೆ ಮತ್ತು ಅದರಲ್ಲಿದ್ದ ಎಲ್ಲ ವಸ್ತುಗಳನ್ನೂ ಜನಗಳಿಗೆ ದಾನವಾಗಿ ನೀಡಿದರು. ಈ ರೀತಿ ಪ್ರಾಪಂಚಿಕ ಆಸ್ತಿಯಿಂದ ತಮ್ಮನ್ನು ತಾವೇ ಮುಕ್ತಗೊಳಿಸಿಕೊಂಡರು. ಅವರು ತಮ್ಮ ತಾಯಿಯನ್ನು ನಾಸಿಕ್‌ಗೆ ಕರೆದುಕೊಂಡು ಹೋಗಿ, ಅಲ್ಲಿಂದ ಅಯೋಧ್ಯೆ



ಅಲಹಾಬಾದ್ ಮತ್ತು ವಾರಾಣಸಿಗಳಿಗೆ ಕರೆದೊಯ್ದರು. ಅಯೋಧ್ಯೆಯಲ್ಲಿ ಅವರ ತಾಯಿಯು ಮರಣ ಹೊಂದಿದರು. ಅಲ್ಲಿ ಸರಯು ನದಿಯ ತೀರದಲ್ಲಿ ಆಕೆಯ ಶರೀರದ ದಹನ ಸಂಸ್ಕಾರಾದಿ ಕಾರ್ಯಗಳನ್ನು ಮಾಡಿದರು. ಅಲ್ಲಿಂದ ಹಿಂತಿರುಗಿ ಹೊರಟು ಇಂದೂರಿನಲ್ಲಿ ಕೆಲ ದಿನಗಳಿದ್ದು ಗೊಂದಾವಳೆಗೆ ಹಿಂದಿರುಗಿದರು.

ಅವರು ಯಾತ್ರೆಗೆ ಹೋಗುವ ಮುಂಚೆ ತಮ್ಮ ಮನೆಯನ್ನು ದಾನವಾಗಿ ನೀಡಿದ್ದರಿಂದ, ರಾಮ ದೇವಾಲಯದಲ್ಲಿ ವಾಸಿಸಲು ಆರಂಭಿಸಿದರು. ಹೆಚ್ಚಿನ ಸಮಯವನ್ನೆಲ್ಲ ಇಲ್ಲೇ ಕಳೆಯುತ್ತಿದ್ದರೂ ಕರ್ನಾಟಕದ ಭಾಗಗಳಾದ ಯವಂಗಲ್, ನಲ್ಗುಂದ ಮತ್ತು ಶಿರಹಟ್ಟಿಗಳಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಎಲ್ಲ ಸಮಯದಲ್ಲೂ ಅವರು ರಾಮದೇವಾಲಯದಲ್ಲೇ ಇದ್ದು ಅಲ್ಲಿಗೆ ಬರುವವರಿಗೆಲ್ಲ ಮಾರ್ಗದರ್ಶನ ಮಾಡುತ್ತಿದ್ದರು. ಅನೇಕರ ಸಂಶಯಗಳನ್ನು ನಿವಾರಣೆ ಮಾಡುತ್ತಿದ್ದರು. ಒಂದು ಸಾರಿ ಬಾಲಗಂಗಾಧರ ಟಿಳಕರಿಗೂ ಮತ್ತೊಬ್ಬ ವೇದಗಳ ವಿದ್ವಾಂಸನಿಗೂ, ವೇದಗಳ ಸೃಷ್ಟಿ ದೇವರಿಂದಾಯಿತೇ ಅಥವಾ ಮಾನವರಿಂದಾಯಿತೇ ಎಂಬ ವಿಷಯದ ಬಗ್ಗೆ ಜಿಜ್ಞಾಸೆ ಉಂಟಾಯಿತು. ಇವರು ತಮ್ಮ ತೀರ್ಪನ್ನು ದೇವರ ಪರವಾಗಿ ನೀಡಿದರು. ಆದರೆ ಎದುರು ಪಕ್ಷದವರಿಗೆ ಸಮಾಧಾನವಾಗಲಿಲ್ಲ. ಇನ್ನೊಂದು ಜಿಜ್ಞಾಸೆಯಲ್ಲಿ ಶಿವ ಹೆಚ್ಚೋ ಅಥವಾ ವಿಷ್ಣು ಹೆಚ್ಚೊ ಎಂದು ತೀರ್ಮಾನ ನೀಡಬೇಕಾಯಿತು. ಆಗ ಇವರು ಎಲ್ಲ ದೇವರುಗಳೂ ಒಂದೇ; ಆದುದರಿಂದ ಒಬ್ಬರಿಗಿಂತ ಇನ್ನೊಬ್ಬರು ಹೆಚ್ಚು ಶ್ರೇಷ್ಠ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತೀರ್ಮಾನವಿತ್ತರು. ಇವರು ತಮ್ಮ ಆಧ್ಯಾತ್ಮಿಕ ಮಾರ್ಗದರ್ಶನವನ್ನು ವಿವಿಧ ರೀತಿಯಲ್ಲಿ ಮಾಡುತ್ತಿದ್ದೂ, ಅವರು ಒಂದು ಅಂಶವನ್ನು ಪದೇ ಪದೇ ಹೇಳುತ್ತಿದ್ದರು. ಅದೇನೆಂದರೆ ದೇವರ ನಾಮದ ಜಪ. ಇದು ಎಲ್ಲರಿಗೂ ಮಾಡಲು ಸಾಧ್ಯವಾದ ಮಾರ್ಗ ಹಾಗೂ ಅತ್ಯಂತ ಶ್ರೇಷ್ಠ ಮಾರ್ಗ. ಇದರಿಂದ ಜನಗಳ ಮನಸ್ಸಿನಲ್ಲಿ ದೇವರ ಬಗ್ಗೆ ಪ್ರೀತಿ ಉಂಟಾಗುತ್ತದೆ; ಇದೇ ಅತ್ಯಂತ ಸೂಕ್ತವಾದ ಸಾಧನೆ ಎಂದು ಅವರು ನಂಬಿದ್ದರು.

೧೯೦೫ರಲ್ಲಿ ಮಹಾರಾಜರು ಮತ್ತೊಮ್ಮೆ ವಾರಾಣಸಿಯ ಯಾತ್ರೆಗೆ ಹೊರಟರು. ಅಲಹಾಬಾದ್‌ಗೆ ಹೋಗುವ ಮಾರ್ಗ ಮಧ್ಯದಲ್ಲಿ ದೋಣಿಯಲ್ಲಿ ಇವರು ಮತ್ತು ಇತರ ಕೆಲವರು ನದಿಯನ್ನು ದಾಟುತ್ತಿದ್ದಾಗ, ದೋಣಿಯಲ್ಲಿ ಒಂದು ರಂಧ್ರ ಉಂಟಾಗಿ, ಅದು ಮುಳುಗಿಹೋಗುವ ಸ್ಥಿತಿಯನ್ನು ತಲುಪಿತು. ಎಲ್ಲರೂ ಗಾಬರಿಯಿಂದ ಭಯಭೀತರಾಗಿದ್ದಾಗ, ಮಹಾರಾಜರು ಶಾಂತಿಯಿಂದ ಶ್ರೀರಾಮನು ನಮ್ಮನ್ನು ಕಾಪಾಡುತ್ತಾನೆ; ಧೈರ್ಯ ತಂದುಕೊಳ್ಳಿ ಮತ್ತು ರಾಮನಾಮವನ್ನು ಜಪ ಮಾಡಿರಿ ಎಂದು ಹೇಳಿ ತಾವು ರಾಮನಾಮ ಜಪವನ್ನು ಆರಂಭಿಸಿದರು. ಅಷ್ಟು ಹೊತ್ತಿಗೆ ಇನ್ನೊಂದು ದೋಣಿ ಅಲ್ಲಿಗೆ ಬಂದು ಇವರೆಲ್ಲರನ್ನೂ

ರಕ್ಷಿಸಿತು. ಅಲ್ಲಿಂದ ಅವರು ವಾರಾಣಸಿಗೆ ಹೋಗಿ ಅಲ್ಲಿ ಎರಡು ತಿಂಗಳುಗಳ ಕಾಲ ವಾಸವಿದ್ದರು. ಅಲ್ಲಿಂದ ಅವರು ಅಯೋಧ್ಯೆಗೆ ಹೋದರು. ಹರ್ದ ಎಂಬಲ್ಲಿ ಅವರ ಶಿಷ್ಯನೊಬ್ಬನು ರಾಮದೇವಾಲಯವನ್ನು ನಿರ್ಮಿಸಿದ್ದನು. ಅದನ್ನು ನೋಡಲು ಅಲ್ಲಿಗೆ ಹೋದರು. ಇಲ್ಲಿರುವಾಗ ಅಲ್ಲಿಗೆ ಒಬ್ಬ ಸಾಧು ಬಂದನು. ತನ್ನ ಆಧ್ಯಾತ್ಮಿಕ ಶಕ್ತಿಯು ತುಂಬ ಉನ್ನತ ಮಟ್ಟದಲ್ಲಿದೆಯೆಂದೂ ಧ್ಯಾನೇಶ್ವರರು ಮಾಡಿದ ಹಾಗೆ ವೇದಗಳನ್ನು ಪ್ರಾಣಿಗಳು ಹೇಳುವ ಹಾಗೆ ಪವಾಡ ಮಾಡಬಲ್ಲ ಶಕ್ತಿ ತನ್ನಲ್ಲಿದೆಯೆಂದು ಬಡಾಯಿ ಕೊಚ್ಚಿಕೊಂಡನು. ಮಹಾರಾಜರು ಅವನಿಗೆ ಬುದ್ಧಿವಾದ ಹೇಳಿ ಪವಾಡ ಮಾಡುವುದು ಒಬ್ಬ ಶ್ರೇಷ್ಠ ಸಂತನ ಮುಖ್ಯ ಲಕ್ಷಣವಲ್ಲ. ಅನೇಕ ಸಂತರ ಜೀವನಗಳಲ್ಲಿ ಹತ್ತಾರು ಪವಾಡಗಳು ನಡೆದಿವೆ; ಆದರೆ ನಿಜವಾದ ಸಂತನು ಈ ಪವಾಡಗಳ ಬಗ್ಗೆ ಉದಾಸೀನನಾಗಿರುತ್ತಾನೆ; ಅವುಗಳನ್ನು ಮಾಡಿದ್ದಕ್ಕೆ ತಾನು ಮೆಚ್ಚಿಗೆಯನ್ನು ಪಡೆಯಲು ಇಚ್ಛಿಸುವುದೂ ಇಲ್ಲ. ಅಲ್ಲೊಂದು ಇಲ್ಲೊಂದು ಪವಾಡಗಳನ್ನು ಮಾಡುವವನು ನಿಜವಾದ ಸಂತನಲ್ಲ; ಯಾರ ಆತ್ಮವು ಪರಮಾತ್ಮನೊಂದಿಗೆ ಮಿಳಿತವಾಗಿದೆಯೋ ಮತ್ತು ಪ್ರತಿನಿಮಿಷವೂ ದೈವೀಪ್ರಜ್ಞೆಯನ್ನು ಯಾರೂ ಅನುಭವಿಸುತ್ತಾನೆಯೋ ಅವನೇ ನಿಜವಾದ ಸಂತ ಎಂದು ಹೇಳಿದರು.

ಗೊಂದಾವಳೆಗೆ ಮತ್ತೆ ಹಿಂದಿರುಗಿ ಜನಗಳಿಗೆ ಮಾರ್ಗದರ್ಶನ ಮಾಡುವುದರ ಜೊತೆಗೆ ಪ್ರಾಪಂಚಿಕ ಸುಖದ ಕಡೆಗೇ ಮನಸ್ಸನ್ನು ಹೊಂದಿದ್ದ ಜನಗಳಿಗೆ ದೈವದರ್ಶನ ಮಾಡಿಸುವುದಕ್ಕೂ ಸಲಹೆ ನೀಡುತ್ತಿದ್ದರು. ಪ್ರಾಪಂಚಿಕ ಸುಖದ ಕಡೆಗೆ ಆಸಕ್ತಿ ಹೊಂದಿದ್ದ ಜನಗಳ ಬಗ್ಗೆ ಅಸಡ್ಡೆ ಇರಲಿಲ್ಲ ಹಾಗೂ ಅವರನ್ನು ಕೀಳಾಗಿ ಕಾಣುತ್ತಿರಲಿಲ್ಲ; ಅದರ ಜೊತೆಗೆ ದೈವೀಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕೆಂದು ಅವರಿಗೆ ಬೋಧಿಸುತ್ತಿದ್ದರು. ಎಲ್ಲ ವಸ್ತುಗಳಲ್ಲಿಯೂ ದೈವತ್ವವನ್ನು ಕಾಣುವ ಅತಿಶ್ರೇಷ್ಠವಾದ ಗುರಿ ಎಲ್ಲ ಸಾಮಾನ್ಯ ಜನಗಳಿಗೂ ಸಾಧ್ಯವಿಲ್ಲವೆಂಬ ಸಂಗತಿ ಅವರಿಗೆ ತಿಳಿದಿತ್ತು. ಅದನ್ನು ಕಾಣುವುದಕ್ಕೆ ಮುಂಚೆ ಪ್ರತಿಯೊಬ್ಬನೂ ತನ್ನಲ್ಲಿಯೇ ದೈವತ್ವವನ್ನು ಮೊದಲು ಕಂಡುಕೊಳ್ಳಬೇಕು; ಅದಕ್ಕೆ ದೈವತ್ವದಲ್ಲಿ ಮತ್ತು ದೈವದ ನಾಮದಲ್ಲಿ ನಂಬಿಕೆಯಿರಬೇಕು. ರಾಮ ದೇವಾಲಯದಲ್ಲಿರುವುದು ಶ್ರೀ ರಾಮನ ವಿಗ್ರಹ ಮಾತ್ರವಲ್ಲ, ಅದು ಶ್ರೀರಾಮನೇ ಆಗಿದ್ದಾನೆ ಎಂದು ಸಂತ ಮಹಾರಾಜರು ನಂಬಿದ್ದರು. ಎಲ್ಲ ಕಾರ್ಯಗಳೂ ನಡೆಯುವುದು ರಾಮನ ಇಚ್ಛೆಯ ಪ್ರಕಾರ ಎಂದು ತಾವು ನಂಬಿದ್ದುದು ಮಾತ್ರವಲ್ಲದೆ, ಈ ಸತ್ಯವನ್ನು ಎಲ್ಲರೂ ನಂಬುವಂತೆ ಮಾಡಲು ಪ್ರಯತ್ನಿಸುತ್ತಿದ್ದರು. ಶ್ರೀರಾಮನೇ ಎಲ್ಲ ಕಾರ್ಯಗಳನ್ನೂ ಮಾಡುವವನು ಎಂದೂ ಅವರು ನಂಬಿದ್ದರು.

ಗೊಂದಾವಳೆಗೆ ತಮ್ಮನ್ನು ನೋಡಲು ಬರುತ್ತಿದ್ದ ಎಲ್ಲರ ವಿಷಯದಲ್ಲಿಯೂ ಇವರು ಗಮನ ಕೊಡುತ್ತಿದ್ದರು. ಅವರೆಲ್ಲರಿಗೂ ಊಟ ಉಪಚಾರಗಳು ಸರಿಯಾಗಿ ಆಗುತ್ತಿರುವಂತೆ ಅವರು ನೋಡಿಕೊಳ್ಳುತ್ತಿದ್ದರು. ಏಕೆಂದರೆ ಅನ್ನದಾನಕ್ಕೆ ಅವರು



ರಾಮನಾಮ ಜಪಕ್ಕೆ ನೀಡುವಷ್ಟು ಮಹತ್ವವನ್ನೇ ನೀಡುತ್ತಿದ್ದರು. ಕೇವಲ ಮಾನವರಿಗೆ ಮಾತ್ರವಲ್ಲದೆ, ಇತರ ಪ್ರಾಣಿಗಳಿಗೂ ಇವರು ಅನುಕಂಪ ತೋರಿಸುತ್ತಿದ್ದರು. ಒಂದು ಸಾರಿ ಇವರು ಹತ್ತಿರದಲ್ಲೇ ಇದ್ದ ಮಾಸವಾಡ್ ಎಂಬಲ್ಲಿಗೆ ಹೋಗಿದ್ದರು. ಅಲ್ಲಿ ಹಸುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದ ದೃಶ್ಯ ಇವರ ಮನವನ್ನು ಕಲಕಿತು. ಅಂದಿನಿಂದ ಹಸುಗಳನ್ನು ರಕ್ಷಿಸುವುದು ಮತ್ತು ಅವುಗಳನ್ನು ನೋಡಿಕೊಳ್ಳುವುದು ಅವರ ಕರ್ತವ್ಯವಾಯಿತು. ತಮ್ಮನ್ನು ದ್ವೇಷಿಸುತ್ತಿದ್ದವರ ಬಗೆಗೂ ಅವರು ಸ್ನೇಹವನ್ನು ತೋರುತ್ತಿದ್ದರು. ಔಧ್ ಸಂಸ್ಥಾನದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಒಬ್ಬ ಉನ್ನತ ಅಧಿಕಾರಿಯು, ಮಹಾರಾಜರ ಬಗ್ಗೆ ಅಸೂಯೆಯನ್ನು ಬೆಳೆಸಿಕೊಂಡನು. ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಅವರ ಆಹಾರದಲ್ಲಿ ವಿಷವನ್ನು ಬೆರೆಸಿಕೊಡಲು ಯೋಚಿಸಿದನು. ಇದಕ್ಕಾಗಿ ನಾಲ್ವರನ್ನು ನಿಯಮಿಸಿಕೊಳ್ಳಲಾಯಿತು. ಇದರಲ್ಲಿ ಮೂವರು ಸಂತ ಮಹಾರಾಜನಲ್ಲಿಗೆ ಹೋದಾಗ ಅವರು ತೋರಿಸಿದ ಪ್ರೀತಿ, ಕರುಣೆ ಮತ್ತು ಅನುಕಂಪಗಳಿಂದ ಪ್ರಭಾವಿತರಾಗಿ ಪಶ್ಚಾತ್ತಾಪದಿಂದ ಆ ಕೆಲಸ ಮಾಡಲಾಗಲಿಲ್ಲ. ಆದರೆ ನಾಲ್ಕನೆಯವನು ಹೇಳಿದಂತೆ ಮಾಡಿದನು. ತಮಗೆ ಗೊತ್ತಿದ್ದರೂ ಕೂಡ ಸಂತಮಹಾರಾಜರು ಅವರಿಗೆ ಕೊಟ್ಟ ವಿಷಮಿಶ್ರಿತ ಆಹಾರವನ್ನು ಸೇವಿಸಿದರು. ಇದರಿಂದಾಗಿ ಅವರಿಗೆ ಆಸ್ತಮ ಕಾಯಿಲೆ ಬಂದು ಅವರು ಬದುಕಿರುವವರೆಗೂ ಇದನ್ನು ಅನುಭವಿಸಿದರು.

ಅವರ ಜೀವನದ ಅನಂತರದ ಸಮಯದಲ್ಲಿ ಹೆಚ್ಚಿನ ಮಟ್ಟಿಗೆ ಅವರು ಗೊಂದಾವಳೆಯಲ್ಲೇ ವಾಸಿಸುತ್ತಿದ್ದರೂ ಅಗತ್ಯಕ್ಕನುಗುಣವಾಗಿ ಇತರ ಜಾಗಗಳಿಗೂ ಹೋಗುತ್ತಿದ್ದರು. ಅವರು ಮೀರಜ್‌ಗೆ ಹೋಗಿ, ಅಲ್ಲಿಂದ ಕಾಗ್‌ವಾಡಕ್ಕೆ ಹೋದರು. ಇಲ್ಲಿದ್ದ ಶ್ರೀರಾಮನ ಭಕ್ತರು ತಮ್ಮ ಮನೆಯಲ್ಲಿದ್ದ ಹನುಮಂತನ ವಿಗ್ರಹವು ಭಿನ್ನವಾಗಿದ್ದುದರಿಂದ ಅದರ ಬದಲು ಹನುಮಂತನ ಹೊಸ ವಿಗ್ರಹವನ್ನು ಸಂತ ಮಹಾರಾಜರು ಪ್ರತಿಷ್ಠಾಪಿಸಬೇಕೆಂದು ಪ್ರಾರ್ಥಿಸಿದರು. ಅದನ್ನು ಮುಗಿಸಿಕೊಂಡು ಹುಬ್ಬಳ್ಳಿ, ಕರಾಡ್, ಬಿದರಹಳ್ಳೀ, ಶೋಲಾಪುರ ಮುಂತಾದ ಸ್ಥಳಗಳಿಗೆ ಹೋಗಿ ಅಲ್ಲಿ ಶ್ರೀರಾಮನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ನಂತರ ಪಂಡರಾಪುರಕ್ಕೆ ಹೋಗಿ ೧೯೧೨ರ ಅಂತ್ಯದ ಹೊತ್ತಿಗೆ ಗೊಂದಾವಳೆಗೆ ಹಿಂದಿರುಗಿದರು.

೧೯೧೩ರ ಮಧ್ಯದಲ್ಲಿ ಸಂತ ಮಹಾರಾಜರು ಪಂಡರಾಪುರಕ್ಕೆ ಮತ್ತೆ ಹೋದರು. ಈ ಸಾರಿ ಅಲ್ಲಿ ತನ್ನ ಅವಸಾನವು ಸಮೀಪಿಸುತ್ತಿದೆ ಎಂಬುದರ ಸೂಚನೆ ನೀಡಿದರು ಹಾಗೂ ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲವೆಂದು ಜ್ಞಾಪಿಸಿದರು. ಪಂಡರಾಪುರದಲ್ಲಿ ಇವರಿಗೂ ವಾಲ್ವಂಕರ್ ಎಂಬ ವೇದವಿದ್ವಾಂಸನಿಗೂ ಒಂದು ಚರ್ಚೆಯು ನಡೆಯಿತು. ಈ ವೇದವಿದ್ವಾಂಸನು ದೇವರನಾಮಕ್ಕಿಂತ ದೇವರ ರೂಪವೇ ಮೇಲೆಂದು ವಾದಿಸಿದನು. ಆದರೆ ಸಂತಮಹಾರಾಜರು ತಮ್ಮ ಮಾತಿನ

ಶೈಲಿಯಿಂದ ದೇವರ ರೂಪಕ್ಕಿಂತ ದೇವರ ನಾಮವೇ ಹೆಚ್ಚು ಶ್ರೇಷ್ಠ ಎಂಬುದನ್ನು ತೋರಿಸಿಕೊಟ್ಟರು. ಇದರಿಂದ ಸಂತಮಹಾರಾಜರ ತಾತ್ವಿಕ ನೆಲೆಯ ಪರಿಚಯ ಎಲ್ಲರಿಗೂ ಉಂಟಾಗಿ ದೇವರನಾಮದ ಜಪವೇ ಶ್ರೇಷ್ಠವಾದುದೆಂದು ಎಲ್ಲರಿಗೂ ತಿಳಿಯಿತು.

ಪಂಡರಾಪುರದಿಂದ ಗೋಂದಾವಳೆಗೆ ಹಿಂದಿರುಗಿದ ನಂತರ ಇವರ ಆಸ್ತಮಾ ಕಾಹಿಲೆಯು ಹೆಚ್ಚಾಗಿ, ಇವರ ಆರೋಗ್ಯ ಸ್ಥಿತಿ ಹದಗೆಟ್ಟಿತು. ಆದರೆ ಅವರು ಇದನ್ನು ಗಮನಿಸದೆ ತಮ್ಮ ಕೆಲಸ ಕಾರ್ಯಗಳನ್ನು ಮುಂದುವರಿಸುತ್ತಲೇ ಇದ್ದರು. ೧೯೧೩ರ ಡಿಸೆಂಬರ್ ತಿಂಗಳಿನ ಮಧ್ಯಭಾಗದಲ್ಲಿ, ಸಂತರು ತಮ್ಮ ಅಂತ್ಯ ತೀರ ಹತ್ತಿರವಾಗುತ್ತಿದೆ ಎಂದು ಸೂಚಿಸಿದರು. ಡಿಸೆಂಬರ್ ೨೧ರ ರಾತ್ರಿ ಶ್ರೀರಾಮ ದೇವಾಲಯದಲ್ಲಿ ತಮ್ಮ ಪ್ರವಚನವನ್ನು ನೀಡಿದರು. ಅದೇ ಅವರ ಅಂತಿಮ ಪ್ರವಚನವಾಗಿ ಪರಿಣಮಿಸಿತು. ಮಾರನೆಯ ಬೆಳಿಗ್ಗೆ ಹಾಸಿಗೆಯಿಂದ ಎದ್ದು ಶ್ರೀರಾಮನ ದೇವಾಲಯಕ್ಕೆ ಕೊನೆಯ ಸಲ ಹೋದರು. ನಂತರ ಅಲ್ಲಿಂದ ಬಂದು ತಮ್ಮ ಹಾಸಿಗೆಯ ಮೇಲೆ ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಕುಳಿತುಕೊಂಡರು. ಅಲ್ಲಿಗೆ ಎಲ್ಲವೂ ಮುಗಿಯಿತು. ಅಂದು ೧೯೧೩ರ ಡಿಸೆಂಬರ್ ೨೩ನೆಯ ತಾರೀಖು. ದುಃಖಿತರಾದ ಕೆಲವು ಶಿಷ್ಯರು ಸಂತ ಮಹಾರಾಜರ ಶರೀರವನ್ನು ಶ್ರೀರಾಮ ದೇವಾಲಯಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಟ್ಟರು. ಇತರ ಶಿಷ್ಯರು ಎಲ್ಲೆಡೆಯಿಂದ ಗೊಂದಾವಳೆಗೆ ಬಂದರು. ಮಾರನೆಯ ದಿನ ಶರೀರಕ್ಕೆ ಸಂಸ್ಕಾರ ಮಾಡಿದರು. ಆನಂತರ ಅಸ್ಥಿ ಮತ್ತು ಬೂದಿಯನ್ನು ಅಲಹಾಬಾದಿಗೆ ತೆಗೆದುಕೊಂಡು ಹೋಗಿ ಗಂಗಾನದಿಯಲ್ಲಿ ವಿಸರ್ಜಿಸಿದರು.

ಕೆಲವರ ಸಲಹೆಯಂತೆ ಸಂತ ಮಹಾರಾಜರು ತಮ್ಮ ಮುಕ್ತಿಗೆ ಒಂದು ವರ್ಷ ಮುಂಚೆ ಉಯಿಲು ಬರೆದು, ತಮ್ಮ ಅನಂತರ ದೇವಾಲಯದಲ್ಲಿ ಪೂಜೆ ಪುನಸ್ಕಾರಗಳು ಯಾವ ರೀತಿ ನಡೆಯಬೇಕೆಂದು ತಿಳಿಸಿದ್ದರು. ಇದರ ಹೊಣೆಯನ್ನು ಪ್ರಮುಖ ಶಿಷ್ಯರಾದ ಶ್ರೀ ಬ್ರಹ್ಮಾನಂದರು ವಹಿಸಿಕೊಂಡರು. ಸಂತ ಮಹಾರಾಜರಿಗಾಗಿ ಸಮಾಧಿಯನ್ನು ಕಟ್ಟಲಾಯಿತು ಮತ್ತು ಒಂದು ವರ್ಷದ ನಂತರ ಪಾದುಕೆಗಳನ್ನು ಸಮಾಧಿ ಮಂದಿರದಲ್ಲಿ ಸ್ಥಾಪಿಸಲಾಯಿತು. ೧೯೧೮ರಲ್ಲಿ ಅಂದರೆ ಐದು ವರ್ಷಗಳ ನಂತರ ಶ್ರೀ ಬ್ರಹ್ಮಾನಂದರು ನಿಧನರಾದರು; ಒಂದು ತಿಂಗಳಿನ ನಂತರ, ಸಂತ ಮಹಾರಾಜರ ಎರಡನೆಯ ಹೆಂಡತಿ ಆಯೀ ಸಾಹೇಬ್ ಮರಣ ಹೊಂದಿದರು. ಶ್ರೀ ಗೋಂದಾವಳೇಕರ್ ಮಹಾರಾಜರು ಹಾಗೂ ಅವರ ಹತ್ತಿರದ ಬಂಧುಗಳು ಈಗ ಇಲ್ಲವಾದರೂ, ಅವರ ನಾಮಜಪವನ್ನು ಮಾಡುವ, ಅದರಲ್ಲಿ ನಿಷ್ಠೆ ಇರುವ ಭಕ್ತರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬ್ರಹ್ಮಚೈತನ್ಯ



ಶ್ರೀ ಗೋಂದಾವಳೇಕರ್ ಮಹಾರಾಜರ ಶಿಷ್ಯರಿಗೆ, ಈ ಸಮಾಧಿ ದೇಗುಲಕ್ಕೆ ಭೇಟಿ ನೀಡುವುದು ಅವರ ನಂಬಿಕೆ ಹಾಗೂ ನಿಷ್ಠೆಗೆ ಸಾಕ್ಷಿಯಾಗಿದೆ.

ಮಹಾರಾಷ್ಟ್ರ ರಾಜ್ಯದ ಬಸ್ ಕಾರ್ಪೊರೇಷನ್ ಓಡಿಸುವ ಪುಣೆ–ಗೋಂದಾವಳೇ ಬಸ್ಸು, ಪುಣೆಯ ಸ್ವರ್‌ಗೇಟ್ ಬಸ್‌ನಿಲ್ದಾಣದಿಂದ ಬೆಳಿಗ್ಗೆ ಏಳು ಗಂಟೆಗೆ ಹೊರಡುತ್ತದೆ. ಸಸ್ವದ್, ಜೆಜೂರಿ, ನೀರ, ಲೋನಂದ್, ಫಲ್ಟಾನ್ ಮತ್ತು ದಹಿವಾಡಿ ಮೂಲಕ ೧೫೫ ಕಿ.ಮೀ.ಗಳನ್ನು ನಾಲ್ಕೂವರೆ ಗಂಟೆಗಳಲ್ಲಿ ಕ್ರಮಿಸುತ್ತದೆ. ಬೆಳಿಗ್ಗೆ ೧೧.೩೦ ಗಂಟೆಗೆ ಅದು ಗೋಂದಾವಳೆಯನ್ನು ತಲುಪಿ, ಶ್ರೀ ಗೋಂದಾವಳೆ ಮಹಾರಾಜರ ಸಮಾಧಿ ಮಂದಿರದ ಮುಂದೆ ನಿಲ್ಲುತ್ತದೆ.

ಪ್ರತಿದಿನವೂ ಮಂದಿರವು ಬೆಳಿಗ್ಗೆ ೪ ಗಂಟೆಗೆ ತೆರೆಯುತ್ತದೆ ಮತ್ತು ವಿವಿಧ ಪೂಜಾ ಕೈಂಕರ್ಯಗಳು, ಬೆಳಿಗ್ಗೆ ೪.೪೫ಕ್ಕೆ ನಡೆಯುವ ಆರತಿಯಿಂದ ಆರಂಭವಾಗಿ, ರಾತ್ರಿ ೯.೩೦ಕ್ಕೆ ನಡೆಯುವ ಆರತಿಯವರೆಗೆ ನಡೆಯುತ್ತವೆ. ಮಧ್ಯಾಹ್ನದ ಆರತಿಯು ಹನ್ನೆರಡು ಗಂಟೆಗೆ ನಡೆಯುತ್ತದೆ. ಬಸ್ಸು ಬರುವ ಹಾಗೂ ಆರತಿ ನಡೆಯುವ ಸಮಯದ ಅರ್ಧ ಗಂಟೆಯಲ್ಲಿ ದೇವಾಲಯವನ್ನು ಸಂದರ್ಶಿಸಬಹುದು. ದೇವಾಲಯದ ಸಮುಚ್ಚಯದ ಒಳಗಡೆ ಸ್ವಲ್ಪ ಎತ್ತರದಲ್ಲಿ ಗೋಪಾಲಕೃಷ್ಣ ದೇವಾಲಯವಿದೆ. ಶ್ರೀ ಗೋಂದಾವಳೇಕರ್ ಮಹಾರಾಜರು ತಮ್ಮ ಜೀವನದ ಸಮಯದಲ್ಲಿ ಹಸುಗಳನ್ನು ಪಾಲಿಸುವುದರ ಸಂಕೇತವಾಗಿ ಇದನ್ನು ನಿರ್ಮಿಸಿದರು. ಬಾಗಿಲಿನ ಎರಡೂ ಕಡೆಗಳಲ್ಲಿ ಶ್ರೀ ಗೋಂದಾವಳೇಕರ್ ಮಹಾರಾಜ್ ಮತ್ತು ಅವರ ಗುರು ಶ್ರೀ ತುಕಾಮಾಯಿ ಅವರ ದೊಡ್ಡ ಚಿತ್ರಗಳನ್ನು ಹಾಕಲಾಗಿದೆ. ಗೋಪಾಲಕೃಷ್ಣ ದೇವಾಲಯದಿಂದ ಮೆಟ್ಟಿಲುಗಳನ್ನು ಇಳಿದರೆ ಶ್ರೀ ಗೋಂದಾವಳೇಕರ್ ಮಹಾರಾಜರ ಸಮಾಧಿ ಇದೆ. ಸಮಾಧಿಯ ದರ್ಶನವಾದ ನಂತರ ಭಕ್ತರು ವಿಶಾಲವಾದ ಪ್ರಾಂಗಣಕ್ಕೆ ಬರುತ್ತಾರೆ. ಇದರ ಹೆಸರು ನಾಮಜಪ ಮಂಟಪ. ವ್ಯವಸ್ಥಿತವಾಗಿ ಇಲ್ಲಿ ಕುಳಿತುಕೊಂಡು ಆರತಿಗಾಗಿ ಕಾಯುತ್ತಾರೆ. ಆರತಿಯನ್ನು ಬೆಳಗಿದಾಗ ಎಲ್ಲರೂ ಅಲ್ಲಿ ಎದ್ದು ನಿಲ್ಲುತ್ತಾರೆ. ಅಲ್ಲಿ ಜಾಗವೇ ಇಲ್ಲದಷ್ಟು ಜನಸಂದಣಿ ಇರುತ್ತದೆ. ಆರತಿ ಆದನಂತರ ಜನಗಳು ಅಲ್ಲಿಯೇ ಕುಳಿತುಕೊಂಡು 'ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಂ' ಎನ್ನುವ ಸಾಲುಗಳನ್ನು ಹಾಡುತ್ತಾರೆ. ಮಧ್ಯಾಹ್ನ ೧೨.೩೦ ಗಂಟೆಗೆ ಮಧ್ಯಾಹ್ನದ ಆರತಿ ಆಗುತ್ತದೆ.

ಇದಾದ ನಂತರ ಪ್ರಸಾದ ವಿತರಣೆ ನಡೆಯುತ್ತದೆ. ಇಲ್ಲಿ ಭಕ್ತರಿಗೆ ಉಚಿತವಾಗಿ ಭೋಜನವನ್ನು ಪ್ರಸಾದ ರೂಪದಲ್ಲಿ, ಪಕ್ಕದಲ್ಲಿರುವ ಅಂಕಣದಲ್ಲಿ ನೀಡಲಾಗುತ್ತದೆ. ಇದರ ಕೊನೆಯ ತುದಿಯಲ್ಲಿ ಆಯಿಸಾಹೆಬ್ ಅವರ ಸಣ್ಣ ದೇಗುಲವಿದೆ. ಪ್ರಸಾದವನ್ನು ಬಡಿಸುವ ಸಮಯದಲ್ಲಿ ರಾಮನಾಮ ಜಪವು ಇಡೀ ಅಂಕಣದಲ್ಲಿ ಧ್ವನಿಸುತ್ತದೆ. ಈಗ ಅದು ಶ್ರೀರಾಂ ಶ್ರೀರಾಂ ಜೈಶ್ರೀರಾಂ ಎನ್ನುವ ರೂಪದಲ್ಲಿರುತ್ತದೆ. ಇದು

ಜನಗಳೆಲ್ಲರಿಗೂ ಪ್ರಸಾದ ನೀಡುವವರೆಗೆ ನಡೆಯುತ್ತದೆ. ಊಟವಾದ ನಂತರ ಪ್ರತಿಯೊಬ್ಬರೂ ತಮ್ಮ ಪಾತ್ರೆಯನ್ನು ತೊಳೆದು ಅವನ್ನು ಹಿಂದಕ್ಕೆ ನೀಡಬೇಕು.

ಸಮಾಧಿ ಮಂದಿರದ ಸುತ್ತ ಕೆಲವು ಕಟ್ಟಡಗಳಿದ್ದು, ಅಲ್ಲಿ ವಸತಿ ಸೌಕರ್ಯವನ್ನು ಒದಗಿಸಲಾಗುತ್ತದೆ. ನಿರ್ಧಾರಿತ ಸಂಖ್ಯೆಯ ಜಪವನ್ನು ಅವರು ಪೂರೈಸುವವರೆಗೆ ಅವರು ಇಲ್ಲಿ ವಾಸಿಸಬಹುದು. ಆ ರೀತಿಯ ಕೈಂಕರ್ಯ ಸಂಕಲ್ಪವಿಲ್ಲದವರು ತಾವು ಬಂದ ಕಡೆಗೆ ಹಿಂದಿರುಗುತ್ತಾರೆ. ಈ ಸಂಕ್ಷಿಪ್ತ ಸಮಯದಲ್ಲಿ ಜಪ ಕಾರ್ಯಕ್ರಮವನ್ನು ಕೇಳಿ ನೂರಾರು ಭಕ್ತರಿಗೆ ಹೊಸ ದೈವಿಕ ಜೀವನ ನೀಡಿದಂತಾಗಿದೆ. ಭಕ್ತರು ಗೊಂದಾವಳೆಯಿಂದ ಹೊರ ಹೋದ ನಂತರವೂ ಅವರ ಮನದಾಳದಲ್ಲಿ ಈ ಜಪವು ಪ್ರತಿಧ್ವನಿಸುತ್ತಿರುತ್ತದೆ.

* * * *



## ಉಪಸಂಹಾರ

ಪ್ರಾರಂಭದಲ್ಲೇ ಹೇಳಿರುವಂತೆ ಈ ಐವರು ಸಂತರನ್ನು ಆರಿಸಿಕೊಂಡು ಬರೆಯುವುದು, ಇವರ ಬಗ್ಗೆ ಮಾತ್ರ ವಿಶೇಷತೆ ಇದೆ ಎಂದು ಸೂಚಿಸುವುದಲ್ಲ ಎಂಬುದನ್ನು ತಿಳಿಸಬೇಕು. ಅಥವಾ ಬೇರೆ ಸಂತರನ್ನು ಬಿಟ್ಟು ಇವರನ್ನು ಮಾತ್ರ ಪೂಜಿಸಬೇಕು ಎನ್ನುವ ಉದ್ದೇಶವೂ ಇಲ್ಲ. ಇಡೀ ಪ್ರಪಂಚದಲ್ಲಿ ವಿವಿಧ ಧರ್ಮಗಳಲ್ಲಿ ಆಗಿಂದಾಗ್ಯೆ ಅವತಾರ ತಾಳುವ ನೂರಾರು ಆಧ್ಯಾತ್ಮಿಕ ಸಂತರಲ್ಲಿ ಐವರು ಕೇವಲ ಉದಾಹರಣೆ ಮಾತ್ರ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅನೇಕರು ಈ ಐವರಲ್ಲಿ ನಂಬಿಕೆ ಮತ್ತು ಶ್ರದ್ಧೆಯನ್ನು ಬೆಳೆಸಿಕೊಂಡು, ತಮಗೆ ಬೇಕಾಗಿದ್ದ ಮಾರ್ಗದರ್ಶನವನ್ನು ಪಡೆದು ಸಂತೋಷಗೊಂಡರು. ಅವರು ಸಂದರ್ಶಿಸಿದ ಸ್ಥಳಗಳೂ ಪವಿತ್ರಗೊಂಡು ಅಲ್ಲಿ ಆನಂದ ದೊರಕುವುದೆಂದು ನಿರೀಕ್ಷೆ ಇಟ್ಟುಕೊಂಡಿದ್ದರು. ಶ್ರೇಷ್ಠ ಸತ್ಯದಲ್ಲಿಟ್ಟುಕೊಂಡಿರುವ ಅವರ ನಿರೀಕ್ಷೆ ಮತ್ತು ನಿಷ್ಠೆಗಳನ್ನು ಯಾವ ಹೆಸರಿನಿಂದ ಕರೆದರೂ, ಅದು ಮಾರ್ಗದರ್ಶನ ಮಾಡುತ್ತದೆ. ಯಾರು ನಿಷ್ಠೆಯಿಂದ ಇವರ ಹತ್ತಿರ ಬಂದು, ನಂಬಿಕೆಯಿಂದ ಮಾರ್ಗದರ್ಶನವನ್ನು ಅರಸುತ್ತಾರೆಯೋ, ಅಂತಹ ಶುದ್ಧಮನಸ್ಸಿನ ಭಕ್ತರಿಗೆ ಅದು ದೊರಕುತ್ತದೆ. ಶಿರಡಿ ಸಾಯಿಬಾಬಾ ಅವರ ಹೇಳಿಕೆ 'ನೀವು ನನ್ನನ್ನು ನೋಡಿದರೆ, ನಾನು ನಿಮ್ಮನ್ನು ನೋಡುತ್ತೇನೆ' ಹಾಗೂ ಅಕ್ಕಲಕೋಟೆಯ ಸ್ವಾಮಿ ಸಮರ್ಥರ ಮಾತು', 'ಹೆದರಬೇಡಿ, ನಿಮಗೆ ನನ್ನ ಬೆಂಬಲವಿದೆ' ಎನ್ನುವುದು ಜನರ ನಿಷ್ಠೆಯ ಮೇಲೆ ಆಧಾರಿತವಾಗಿದೆ.

ಎಲ್ಲವನ್ನೂ ಮೀರಿದ ಶ್ರೇಷ್ಠ ಶಕ್ತಿಯೊಂದು ಇದೆ; ಅದರ ಆಧಾರದ ಮೇಲೆ ಎಲ್ಲ ಸೃಷ್ಟಿಯೂ ನಿಂತಿವೆ ಎಂಬ ಮಾತನ್ನು ಅನೇಕ ಸಂತರು ದೃಢಪಡಿಸುತ್ತಲೇ ಬಂದಿದ್ದಾರೆ. ಇದೊಂದು ಅಲೌಕಿಕ ಅನುಭವ. ಆದರೆ ಸಾಮಾನ್ಯ ಜನಗಳಿಗೆ ನಾಮರೂಪಗಳಿಲ್ಲದ ಈ ಶ್ರೇಷ್ಠ ಶಕ್ತಿಯ ಅನುಭವ ಪಡೆಯುವುದು ಕಷ್ಟದ ಕೆಲಸವೇ ಸರಿ. ಅವರಿಗೆ ರೂಪವಿಲ್ಲದ ಸತ್ಯದ ದರ್ಶನ ಮಾಡಿಸುವ ನಾಮರೂಪಗಳು ಬೇಕು. ಇದನ್ನು ನಿರ್ಜೀವ ವಸ್ತುಗಳ ವಿವಿಧ ರೂಪಗಳಲ್ಲಿ ಅಥವಾ ಮಾನುಷ ರೂಪದ ಸಂತರು ಅಥವಾ ಋಷಿಗಳಲ್ಲಿ ಕಾಣಬಹುದು.

ಜೀವನದಲ್ಲಿ ಸಮಸ್ಯೆಗಳೇ ಇಲ್ಲದೆ ಜೀವನ ನಡೆಸುವಂತಹ ಕೆಲವರು ಪುಣ್ಯವಂತರಿರಬಹುದು. ಆದರೆ ಸಾಮಾನ್ಯವಾಗಿ ಎಲ್ಲ ಜನಗಳಿಗೂ ಒಂದಲ್ಲ

ಒಂದು ಸಮಯದಲ್ಲಿ ಸಂಕಷ್ಟಗಳು ಬಂದೊದಗುತ್ತವೆ. ಅಂತಹ ಸಮಯದಲ್ಲಿ ಅವರು ತಮ್ಮ ಶಕ್ತಿಯಿಂದ ಬುದ್ಧಿಯಿಂದ, ಮಾನವ ಮಾಡುವಷ್ಟು ಪ್ರಯತ್ನಗಳನ್ನು ಮಾಡಬಹುದು. ಅದನ್ನು ಮೀರಿಯೂ ಮಾಡಬಹುದು. ಆದರೆ ಅವು ಸಂಕಷ್ಟವನ್ನು ನಿವಾರಿಸುವಷ್ಟು ಶಕ್ತಿಯುತವಾಗಿರುವುದಿಲ್ಲ. ಅಂತಹ ಸಮಯದಲ್ಲಿ ದೇವರ ಸಹಾಯವನ್ನು ಪ್ರತಿಯೊಬ್ಬರೂ ಅಪೇಕ್ಷಿಸಬೇಕಾಗುತ್ತದೆ. ಅಂತಹ ಶಕ್ತಿಯೊಂದು ಅಸ್ತಿತ್ವದಲ್ಲಿದೆ ಮತ್ತು ಶ್ರದ್ಧೆಯಿಂದ ಅದನ್ನು ಯಾರು ಬೇಕಾದರೂ ಪಡೆಯಬಹುದು ಎಂಬುದನ್ನು ತಿಳಿಯಬೇಕು. ತಾಳ್ಮೆ ಮತ್ತು ನಿಷ್ಠೆಯಿಂದ ಪ್ರಯತ್ನಿಸಿದರೆ ದಿನನಿತ್ಯದ ಚಟುವಟಿಕೆಗಳಲ್ಲೂ ಇದನ್ನು ಉಪಯೋಗಿಸಿಕೊಳ್ಳಬಹುದು. ಯಾವುದರ ಮೇಲೆ ನಂಬಿಕೆ ಇಡಬೇಕು, ಯಾವ ಆಗರದಿಂದ ಇದನ್ನು ಪಡೆಯಬೇಕು, ಅದು ಹೊರಗಡೆಯಿಂದ ಬರುವಂತಹುದೇ ಅಥವಾ ಅದು ಆಂತರಿಕವಾಗಿ ದೊರೆಯಬಲ್ಲುದೇ ಮುಂತಾದ ಸಂಗತಿಗಳನ್ನು ಸಾಧಕನೇ ತಿಳಿದು ನಿರ್ಧರಿಸಿಕೊಳ್ಳಬೇಕು.

* * * *



## ಆಕರ ಗ್ರಂಥಗಳು


೧. ಶ್ರೀ ರಾಘವೇಂದ್ರ ಸ್ವಾಮಿ, ಮೊದಲನೆಯ ಮುದ್ರಣ, ೧೯೭೮, ಸಿ.ವಿ. ರವಿ, ಶ್ರೀಹರಿ ಪಬ್ಲಿಕೇಷನ್ಸ್, ನ್ಯೂ ಅಗ್ರಹಾರಂ ಸ್ಟ್ರೀಟ್, ಈರೋಡು–೬೩೮೦೦೧

೨. ಶ್ರೀ ರಾಘವೇಂದ್ರ ತೀರ್ಥರು, ಕೆ. ಗೋವಿಂದಾಚಾರ್ಯ, ೧೯೯೭, ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠಂ, ಮಂತ್ರಾಲಯ–೫೧೮೩೪೫.

೩. ಶ್ರೀ ರಾಘವೇಂದ್ರ ಸ್ವಾಮಿ, ವಿದ್ಯಾನಾಡಗೌಡ, ೧೯೮೫, ಯಶವಂತ ಪ್ರಕಾಶನ, ಸದಾಶಿವ ಪೇಟೆ ಹತ್ತಿರ, ಪುಣೆ–೪೧೧೦೩೦

೪. ಶ್ರೀ ಕ್ಷೇತ್ರ ಮಂತ್ರಾಲಯ ಮಹಾತ್ಮ್ಯ, ಕೆ.ಟಿ. ಕುಲಕರ್ಣಿ, ಮೂರನೆಯ ಮುದ್ರಣ, ೧೯೭೩, ಸರಸ್ವತಿ ಪ್ರಕಾಶನ, ಶೇರಿ ಗಲ್ಲಿ, ಬೆಳಗಾಂ.

೫. ಶ್ರೀ ಗಜಾನನ ವಿಜಯ ಗ್ರಂಥ, ಸಂತ ಕವಿದಾಸ್‌ಗಣು ಮಹಾರಾಜ್, ಶ್ರೀ ಗಜಾನನ ಮಹಾರಾಜ್ ಸಂಸ್ಥಾನ್, ಶೇಗಾಂವ್, ಮಹಾರಾಷ್ಟ್ರ.

೬. ಶ್ರೀ ಗಜಾನನ ಪ್ರಾರ್ಥನಾ ಸ್ತೋತ್ರ, ಸಂತ ಕವಿದಾಸಗಣು ಮಹಾರಾಜ್, ೨೩ನೆಯ ಮುದ್ರಣ, ೧೯೯೬, ಶ್ರೀ ಗಜಾನನ ಮಹಾರಾಜ್ ಸಂಸ್ಥಾನ್, ಶೇಗಾಂವ್, ಮಹಾರಾಷ್ಟ್ರ.

೭. ಶ್ರೀ ಗಜಾನನ ಮಹಾತ್ಮ್ಯ, ಎನ್.ಜಿ. ಸಹಲ್ಕಲೆ, ಸಹಲ್ಕಲೆ ಪ್ರಕಾಶನ, ಶಿವಚರಣ್ ಪೇಟೆ, ಅಕೋಲ

೮. ದತ್ತ ಸಂಪ್ರದಾಯಾಚಾ ಇತಿಹಾಸ್, ಆರ್.ಸಿ. ಢೇರೆ, ೧೯೫೮, ಬೋರ ಅಂಡ್ ಕಂಪೆನಿ, ಮುಂಬೈ–೭.

೯. ಶ್ರೀ ಗುರುದತ್ತ ಯೋಗ, ಎಸ್.ಎಸ್. ಖಾನ್ ವಿಲ್ಕರ್, ೧೯೫೭, ವಾಮನ ರಾವ್ ಗುಲ್ವಾನಿ ಸತ್ಕಾರ್ ಮಂಡಲ್, ಶೋಲಾಪುರ.

೧೦. ಶ್ರೀ ಗುರುದೇವ ಚರಿತ್ರ, ದತ್ತಾತ್ರೇಯ ಧುಂಡಿರಾಜ್ ಕವೀಶ್ವರ್ ಶಾಸ್ತ್ರಿ, ಶ್ರೀ ವಾಸುದೇವ ನಿವಾಸ್, ಕರ್ವೆರೋಡ್, ಪುಣೆ–೪೧೧೦೦೪

೧೧. ಶ್ರೀ ವಾಸುದೇವಾನಂದ ಸರಸ್ವತಿ ಮಹಾರಾಜ್, ಹಿಸ್ ಲೈಫ್ ಅಂಡ್ ಮಿಷನ್, ಶ್ರೀಪಾದ ಆರ್. ಫಲ್ನೀಕರ್, ಶ್ರೀ ದತ್ತ ಸಂಸ್ಥಾನ್, ಗರುಡೇಶ್ವರ್.

೧೨. ಶ್ರೀ ವಾಸುದೇವಾನಂದ ಸರಸ್ವತಿ ಟೆಂಬೆಸ್ವಾಮಿ, ಹೆಚ್.ಬಿ. ಚಿಕ್ರೂರ್, ೧೯೯೩, ಶ್ರೀ ಮಂಗೇಶ್ ಪ್ರಕಶನ್, ೨೩, ನವಿರಾಮದಾಸ ಪೇಠ್, ನಾಗಪುರ–೪೪೦೦೧೦

೧೩. ಶ್ರೀ ಸದ್ಗುರು ಜಂಗಲಿ ಮಹಾರಾಜ್ ಹ್ಯಾಂಚಿ ಜೀವನ್‌ಗಾಥಾ, ೪ನೆಯ ಮುದ್ರಣ, ೧೯೯೭, ರಾಜೇಂದ್ರ ಶರದ್ ಟೆಂಬೇಕರ್ ಟ್ರಸ್ಟೀ, ಸದ್ಗುರು ಮಹಾರಾಜ್ ಟೆಂಪಲ್, ಶಿವಾಜಿ ನಗರ್, ಪುಣೆ–೪೧೧೦೦೫

೧೪. ಶ್ರೀ ಜಂಗ್ಲಿ ಮಹಾರಾಜ್ ಚರಿತ್ರ, ಶ್ರೀಮತಿ ಜಾನಕಿ ಬಾಯಿ ಗೋರೆ, ೧೯೫೨, ವಿ.ಜಿ. ನವಜೀವನ್ ಪ್ರಿಂಟಿಂಗ್ ಪ್ರೆಸ್, ೧೦ಬಿ, ತಿಲಕ್ ರೋಡ್, ಸದಾಶಿವ ಪೇಠ್, ಪುಣೆ.

೧೫. ದಿ ಸೇಂಟ್ ಆಫ್ ಗೊಂದಾವಳಿ,ದಿ ಲೈಫ್ ಅಂಡ್ ಸೇಯಿಂಗ್ಸ್ ಆಫ್ ಶ್ರೀ ಬ್ರಹ್ಮಚೈತನ್ಯ, ಕೆ.ವಿ. ಬೆಲ್ಸಾರೆ, ೧೯೮೮, ಆರ್.ಬಿ. ಘಾಣೇಕರ್ ಚೈತನ್ಯೋಪಾಸನ, ಪೋಸ್ಟ್ ಗೊಂದಾವಳೆ ಬುದ್ರುಕ್–೪೧೫೫೦೮.

೧೬. ಶ್ರೀ ಬ್ರಹ್ಮಚೈತನ್ಯ ಗೊಂದಾವಳೇಕರ್ ಮಹಾರಾಜ್ ಹ್ಯಾಂಚಿ ಚರಿತ್ರೆ ಆಣಿ ವಾಙ್ಮಯ, ಕೆ.ವಿ. ಬೆಲ್ಸಾರೆ, ೫ನೆಯ ಮುದ್ರಣ, ೧೯೭೬, ಡಿಎಂ. ಟಿಳಕ್, ಬುಕ್ ಸೆಲ್ಲರ್ಸ್ ಪಬ್ಲಿಷಿಂಗ್ ಕಂಪೆನಿ, ಮುಂಬೈ–೪.

೧೭. ಇಂಡಿಯನ್ ಫಿಲೋಸೊಫಿ, ಎಸ್. ರಾಧಾಕೃಷ್ಣನ್, ಸಂಪುಟ ೧, ೨ನೆಯ ಮುದ್ರಣ, ೧೯೨೯, ಎ. ಜಾರ್ಜ್ ಅಲೆನ್ ಅಂಡ್ ಅನ್ವಿನ್, ರಿಪ್ರೆಂಟೆಂಡ್ ಇನ್ ಇಂಡಿಯ ಬೈ ಬ್ಲಾಕೀ ಅಂಡ್ ಸನ್ ಪಬ್ಲಿಷರ್ಸ್ ಲಿ.


* * * *